ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ತಿದ್ದುಪಡಿಗಳೊಂದಿಗೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ತಿದ್ದುಪಡಿಗಳೊಂದಿಗೆ ಒಪ್ಪಿಗೆ ನೀಡಲಾಯಿತು)

6. ನಿಯಮ 69 ರ ಮೇರೆಗೆ ಮುಂದುವರೆದ ಚರ್ಚೆ :

ವಿಷಯ : ಕೃಷ್ಣಾ ನ್ಯಾಯಾಧಿಕರಣ–2 (ಬ್ರಿಜೇಶ್ ಕುಮಾರ್ ಆಯೋಗ) ಮತ್ತು ಸರ್ಕಾರದ ಉತ್ತರ ನೀಡಿರುವ ತೀರ್ಪಿನ ಬಗ್ಗೆ.

ಅಧ್ಯಕ್ಷರು : ಕೃಷ್ಣಾ ಜಲವಿವಾದ ನ್ಯಾಯಾಧಿಕರಣ–2 (ಬ್ರಿಜೇಶ್ ಕುಮಾರ್ ಆಯೋಗ) ನೀಡಿರುವ ತೀರ್ಪಿನ ಬಗ್ಗೆ ಯಾರಾದರೂ ಮಾತನಾಡುತ್ತೀರಾ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–3...

ಅಧ್ಯಕ್ಷರು : ಇದರ ಬಗ್ಗೆ ಯಾರು ಮಾತನಾಡುವುದಿಲ್ಲವೇ? ಮಾತನಾಡುತ್ತಾರಂತೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾತನಾಡುತ್ತಾರೆಯೇ, ಮಾತನಾಡಲಿ.

ಅಧ್ಯಕ್ಷರು : ಸಿದ್ದು ಸವದಿ ಅವರೆ ಮಾತನಾಡಿ. ನಂತರ ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆ ಕುರಿತಾಗಿ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸುತ್ತಾ, ಆಲಮಟ್ಟಿ ಡ್ಯಾಮಿನಲ್ಲಿ ನೀರನ್ನು ನಿಲ್ಲಿಸಿ ಹತ್ತಾರು ವರ್ಷಗಳು ಕಳೆದರೂ ಸಹ ಅಲ್ಲಿರತಕ್ಕಂಥ ಸಂತ್ರಸ್ತರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಆ ಪುನರ್ವಸತಿ ಕೇಂದ್ರಗಳಿರಬಹುದು ಮತ್ತು ಅವರನ್ನು ಸ್ಥಳಾಂತರ ಮಾಡಿ ಗ್ರಾಮಗಳನ್ನು ಕಟ್ಟಡ ಮಾಡುವುದಿರಬಹುದು, ಇದುವರೆವಿಗೂ ಸಹ ನ್ಯಾಯಯುತವಾದಂತಹ ಬೇಡಿಕೆ ಈಡೇರಿಲ್ಲ. ಆದುದರಿಂದ ತಕ್ಷಣವೇ ಯಾವ್ಯಾವ ಗ್ರಾಮಗಳು ಮುಳುಗಡೆಯಾಗುತ್ತವೂ ಅವರಿಗೆ ಸ್ಥಳಾಂತರಿಸುವ ಕಾರ್ಯವಾಗಬೇಕು. ಆಲಮಟ್ಟಿ ಹಿನ್ನೀರಿನಿಂದ ನೀರಿನ ಮಟ್ಟ ಮೇಲೆ ಬಂದಿರುವುದರಿಂದ ಸಂತ್ರಸರ ಭೂಮಿ ಹಾಳಾಗುವುದರ ಜೊತೆಗೆ ಮೇಲ್ಮಟ್ಟದ ಜಮೀನು ಸಹ ಸವಳು-ಜವಳು ಬಂದು ಒಕ್ಕಲುತನಕ್ಕೆ ಯೋಗ್ಯವಲ್ಲದ ರೀತಿಯಲ್ಲಿ ಸಂಪೂರ್ಣವಾಗಿ ಹಾಳಾಗಿದ್ದು, ಅವರಿಗೂ ಸಹ ಪರಿಹಾರ ಕೊಡುವುದಾಗಲಿ ಅಥವಾ ಸವಳು-ಜವಳು ತೆಗೆಯುವ ಕೆಲಸವಾಗಲಿ ಶೀಘ್ರಗತಿಯಲ್ಲಿ ಆಗಬೇಕು. ನಾನು ಜಲಸಂಪನ್ಮೂಲ ಸಚಿವರನ್ನು ಅಭಿನಂದಿಸುತ್ತಾ, ಈ ರಾಜ್ಯದಲ್ಲಿ ಹಿನ್ನೀರಿನಿಂದ ತೊಂದರೆಗೊಳಪಟ್ಟ ಜಮೀನುಗಳಲ್ಲಿ ಸವಳು-ಜವಳು ತೆಗೆಯುವುದಕ್ಕೆ ಕೋಟ್ಯಾಂತರ ರೂ.ಗಳನ್ನು ನಮ್ಮ ಕ್ಷೇತ್ರಕ್ಕೆ ಕೊಟ್ಟಿರುವುದಕ್ಕೆ ಅಭಿನಂದನೆ ಹೇಳುತ್ತೇನೆ. ಆದರೂ ಸಹ ಇನ್ನೂ ಆ ಜಮೀನುಗಳ ಸುಧಾರಣೆಯಾಗಿಲ್ಲ. ಪ್ರತಿ ರೈತನ ಜಮೀನಿನಲ್ಲಿಯೂ ಸಹ ಆ ನೀರನ್ನು ಹೊರ ಹಾಕುವ ಕೆಲಸವಾಗಬೇಕು. ಒಂದು ವೇಳೆ ಆಗದೆ ಹೋದರೆ ಪರ್ಯಾಯ ವ್ಯವಸ್ಥೆಯಾಗಬೇಕು. ಅಂತಹ ಜಮೀನನ್ನು ಸರ್ಕಾರ ವಶಪಡಿಸಿಕೊಂಡು ಅದಕ್ಕೆ ಪರಿಹಾರ ಕೊಟ್ಟರೆ ರೈತ ಮೇಲ್ಮಟ್ಟದಲ್ಲಿ ಜಮೀನನ್ನು ಖರೀದಿ ಮಾಡುವುದಕ್ಕೆ ಸರ್ಕಾರದ ವ್ಯವಸ್ಥೆ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ನಾವು ಕೆಳಗಿನ ನಾಲ್ಕಾರು ಜಿಲ್ಲೆಗಳ ರೈತರಿಗೆ ನೀರು ಬಿಡುವ ಕೆಲಸವನ್ನು ನಾವು ಮಾಡಿದ್ದೇವೆ. ಆಲಮಟ್ಟಿ ಡ್ಯಾಮ್ ಒಳಗಿರುವ ಲಕ್ಷಾವಾರು ರೈತ ಕುಟುಂಬಗಳು ತಲೆತಲಾಂತರದಿಂದ ಬಂದಿರುವ ತಮ್ಮ ಭೂಮಿಯನ್ನು ಕಳೆದುಕೊಂಡಿದ್ದರೂ ಈ ರಾಜ್ಯದ ಇನ್ನಿತರೆ ರೈತ ಕುಟುಂಬಗಳು ಬದುಕ ಬೇಕೆಂಬ ದೃಷ್ಟಿಯಿಂದ ನಮ್ಮ ಜಿಲ್ಲೆಯಿಂದ ಕೆಳಗಿನವರಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥೆ ಮಾಡಿ ತ್ಯಾಗ ಮಾಡುವ ಕೆಲಸ ಮಾಡಿದ್ದೇವೆ. ಆದರೆ ಯಾರ್‍ಯಾರು ಜಮೀನನ್ನು ಕಳೆದುಕೊಂಡು ಸಂತ್ರಸ್ತರಾಗಿದ್ದಾರೋ ಅಂತಹವರ ಸಹಾಯಕ್ಕೆ ಸರ್ಕಾರ ಅವರ ಬೆನ್ನ ಹಿಂದೆ ನಿಲ್ಲಬೇಕು. ಅದು ಯಾವ ರೀತಿ ಎಂದರೆ, ಮೊದಲನೆಯದಾಗಿ, ಸಂತ್ರಸ್ತರಿಗೆ ಸರ್ಕಾರಿ ಉದ್ಯೋಗದಲ್ಲಿ 5% ಮೀಸಲಾತಿ ಕೊಟ್ಟಿದ್ದು, ಅದನ್ನು 10% ಆದರೂ ಮಾಡಬೇಕು. ಅಲ್ಲಿ ನೀರಾವರಿ ಮಾಡಿಕೊಂಡಿರುವ ರೈತರಿಗೆ ಸಾಕಷ್ಟು ಆದಾಯವಿರುವುದರಿಂದ, ಇಲ್ಲಿ ಜಮೀನನ್ನು ಕಳೆದುಕೊಂಡು ಬೀದಿ ಪಾಲಾಗಿರುವಂತಹ ಕುಟುಂಬಗಳ ಸಹಾಯಕ್ಕೆ ಸರ್ಕಾರ ಬಂದು ಮೀಸಲಾತಿಯನ್ನು 10% ವರೆಗೆ ಹೆಚ್ಚಿಸಿ ಸಂತ್ರಸ್ತರ ನೆರವಿಗೆ ಬರಬೇಕು. ನಮ್ಮ ಜಮಖಂಡಿ ತಾಲ್ಲೂಕು ಇರಬಹುದು, ತೇರದಾಳ ಮತಕ್ಷೇತ್ರವಿರಬಹುದು, ಅಲ್ಲಿ ಜಮೀನು ಮುಳುಗಡೆಯಾಗಿರುವ ರೈತರಿಗೆ ನಿಜವಾಗಿಯೂ ನೆಲೆ ಇಲ್ಲದಂತಾಗಿದೆ. ನಾನು ಸರ್ಕಾರವನ್ನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಆಲಮಟ್ಟಿ ಹಿನ್ನೀರಿನಿಂದ ಜಮೀನು ಕಳೆದುಕೊಂಡ ರೈತ ಕುಟುಂಬಗಳಿಗೆ ಅವರಲ್ಲಿ ಉಳಿದುಕೊಂಡಿರುವ ಅಲ್ಪಸ್ವಲ್ಪ ಅವರ ನೆಲಮಟ್ಟದ ಜಮೀನುಗಳಿಗೆ ಅಲ್ಲಿ ನೀರಾವರಿ ಮಾಡಿಕೊಡುವ ಕೆಲಸ ವಾಗಬೇಕು. ಏಕೆಂದರೆ, ಇಲ್ಲಿಯೂ ಕಳೆದುಕೊಂಡು ಅಲ್ಲಿಯೂ ನೀರಾವರಿ ವ್ಯವಸ್ಥೆ ಆಗದಿದ್ದರೆ ಅವರ ಕುಟುಂಬಗಳ ಸರ್ವನಾಶ ಆಗುವ ಪರಿಸ್ಥಿತಿ ಬಂದೊದಗಿದೆ. ಲಕ್ಷ ಲಕ್ಷ ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಮಾಡಬೇಕಾದರೆ, ನಮ್ಮ ಜಮೀನುಗಳನ್ನು ಕಳೆದುಕೊಂಡಿದ್ದೇವೆ. ಆ ಕಾರಣಕ್ಕಾಗಿ ಬಾಗಲಕೋಟೆ, ಜಮಖಂಡಿ, ಅಥಣಿ, ಬೀಳಗಿ, ಬಿಜಾಪುರ ಇರಬಹುದು. ಅಲ್ಲಿ ಯಾರು ನಿಜವಾಗಿಯೂ ಸಂತ್ರಸ್ತರಾಗಿದ್ದಾರೆ. ತಮ್ಮ

ಸರ್ವಸ್ವವನ್ನು ಕಳೆದುಕೊಂಡು ಕೆಳಗಡೆ ನೀರು ಬಿಡುವ ತ್ಯಾಗದ ಕೆಲಸವನ್ನು ಮಾಡಿದ್ದಾರೋ, ಹಾಗೆ ಉಳಿದ ಮೇಲ್ಮಟ್ಟದ ಜಮೀನುಗಳಿಗೆ ಏತ ನೀರಾವರಿಯ ಮುಖಾಂತರ ಅಲ್ಲಿ ನೀರು ಕೊಡುವ ವ್ಯವಸ್ಥೆಯನ್ನು ಸರ್ಕಾರ ಮೊದಲು ಮಾಡಬೇಕೆಂದು ಸರ್ಕಾರವನ್ನು ವಿನಂತಿ ಮಾಡುತ್ತೇನೆ. ಇಲ್ಲದಿದ್ದರೆ ಬಹುಶಃ ಆಸಂತ್ರಸ್ತ ಕುಟುಂಬಗಳಿಗೆ ನಿಜವಾಗಿಯೂ ದ್ರೋಹ ಮಾಡಿದಂತಾಗುತ್ತದೆ. ಇದರ ಜೊತೆ 'ಬಿ' ಸ್ಕೀಮಿನಲ್ಲಿ ಇನ್ನೂ ನಾಲ್ಕಾರು ಗ್ರಾಮಗಳ ಜಮಖಂಡಿ ತಾಲ್ಲೂಕಿನ ನಾಲ್ಕೈದು ಗ್ರಾಮಗಳು ಮುಳುಗಡೆ ಆಗುವ ಸಂದರ್ಭ ಇರುವುದರಿಂದ ಈಗಾಗಲೇ ಸಾಕಷ್ಟು ವಿಳಂವಾಗಿರುವು ದರಿಂದ ಬೇಗನೆ ಪುನರ್ ವಸತಿ ಕೇಂದ್ರಗಳನ್ನು ಗುರುತಿಸಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ವ್ಯವಸ್ಥೆಯನ್ನು ಸರ್ಕಾರ ತಕ್ಷಣ ಮಾಡಬೇಕು. ಇತ್ತೀಚೆಗೆ ನಾಲ್ಕಾರು ವರ್ಷಗಳಿಂದ ಆಲಮಟ್ಟಿ ಡ್ಯಾಮ್ ಆಗಿ ನೀರಾವರಿ ಆಯಿತೋ, ಇನ್ನಿತರೆ ಕಾರಣಗಳಿಗಾಗಿ ಜಮೀನಿನ ಬೆಲೆ ಗಗನಕ್ಕೇರಿದೆ. ನಮ್ಮ ತಾಲ್ಲೂಕಿನಲ್ಲಿ ನಮ್ಮ ಮತಕ್ಷೇತ್ರದಲ್ಲಿ ಒಂದು ಎಕರೆಗೆ ಜಮೀನಿಗೆ 20 ರಿಂದ 50 ಲಕ್ಷ ರೂ.ಗಳವರೆಗೆ ಬೆಲೆ ಹೆಚ್ಚಾಗಿದ್ದು, ಒಂದು ವೇಳೆ ಈಗ ಮುಳುಗಡೆಯಾದರೆ ಜಮೀನಿಗೆ ಸರ್ಕಾರ ಕೇವಲ ಎರಡೂವರೆ ಲಕ್ಷ ರೂ. ಗಳಿಂದ ಐದು ಲಕ್ಷ ರೂ. ಗಳವರೆಗೆ ಕೊಡುತ್ತೇವೆಂದರೆ ಆಗುವುದಿಲ್ಲ. ನಮ್ಮ ರೈತರ ಸಂತ್ರಸ್ತರ ಬೇಡಿಕೆಯೇನಿದೆ ಎಂದರೆ ನಾವು ಎಷ್ಟು ಜಮೀನನ್ನು ಕಳೆದುಕೊಂಡಿರುತ್ತೇವೆಯೋ ಮೇಲು ಮಟ್ಟದಲ್ಲಿ ಆ ಜಮೀನನ್ನು ಕೊಡಿಸಿ, ಅಥವಾ ಸರ್ಕಾರದ ಜಮೀನನ್ನಾದರೂ ಕೊಡಿಸಿ. ಆಗ ಆ ಸಂತ್ರಸ್ತರು ಅಲ್ಲಿ ಬದುಕುತ್ತೇವೆಂದರೆ ಹೇಳುತ್ತಾರೆ. ಜಮೀನಿಗೆ ಪರ್ಯಾಯ ಜಮೀನನ್ನು ಕೊಡಿಸುವಂತಹ ಕೆಲಸ ಮಾಡಬೇಕು. ಒಂದು ವೇಳೆ ಆಗದಿದ್ದರೆ ಮುಳುಗಡೆಯಾದ ಜಮೀನಿಗೆ 10–20 ಲಕ್ಷ ರೂ.ಗಳ ಪರಿಹಾರವನ್ನು ಕೊಡಬೇಕು. ಏಕೆಂದರೆ ಅವರಿಗೆ ನೀರಾವರಿ ಆದ ನಂತರ ಎರಡು ಲಕ್ಷ ರೂ.ಗಳ ಜಮೀನಿನ ಬೆಲೆ 20 ಲಕ್ಷ ರೂ.ಗಳ ಬೆಲೆವರೆಗೂ ಬರುತ್ತದೆ. ಆ ಸಂತ್ರಸ್ತರ ಸರ್ವಸ್ವನ್ನೂ ತ್ಯಾಗ ಮಾಡಿರುವುದರಿಂದ ಅವರು ನೆಮ್ಮದಿಯಿಂದ ಬದುಕುವಂತಹ ಕೆಲಸ ಸರ್ಕಾರದ ವತಿಯಿಂದ ಆಗಬೇಕೆಂದು ತಮ್ಮ

ಮೂಲಕ ಈ ಸದನಕ್ಕೆ ಹೇಳಬಯಸುತ್ತೇನೆ. ಆದರೆ ಸರ್ಕಾರ ಕೊಡುವ ರೂ. ಎರಡೂವರೆ ಲಕ್ಷ, ರೂ ಐದು ಲಕ್ಷಗಳು ಕೊಟ್ಟರೆ ಯಾವುದೇ ಗುಂಟೆ ಜಮೀನನ್ನು ಸಹ ಆ ಭಾಗದಲ್ಲಿ ಖರೀದಿ ಮಾಡುವುದಕ್ಕಾಗುವುದಿಲ್ಲ. ಹಿಪ್ಪರಗಿ ಯೋಜನೆಯಲ್ಲಿಯೂ ಸಹ ನನ್ನ ಕ್ಷೇತ್ರದಲ್ಲಿ ನಾಲ್ಕೈದು ಗ್ರಾಮಗಳು ಮುಳುಗಡೆಯಾಗಿ ಈಗಾಗಲೇ ಐದಾರು ವರ್ಷಗಳಾಗಿವೆ. ಕಳೆದ ಐದಾರು ವರ್ಷಗಳಿಂದ ಆ ಗ್ರಾಮಗಳ ಸುತ್ತ ನೀರು ನಿಂತಿದ್ದು ಆ ಸಂತ್ರಸ್ತರ ಅಲ್ಲೇ ಬದುಕುವಂತಹ ವ್ಯವಸ್ಥೆಯಾಗಿದ್ದು ಇದು ಬಹಳ ದಯನೀಯ ಸ್ಥಿತಿ ಯಾಗಿದೆ. ಯಾವುದೋ ಕಾರಣಕ್ಕೆ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದು ಅವರಿಗೆ ಪುನರ್ ವಸತಿ ಕೊಡುವ ವ್ಯವಸ್ಥೆ ಇದುವರೆವಿಗೂ ಆಗಿಲ್ಲ. ಸಾಕಷ್ಟು ಬಾರಿ ನಾವು ಉಪ ಸಮಿತಿ ಸಭೆಯ ಮಾಡಿ ನಿರ್ದೇಶನ ನೀಡಿದ್ದರೂ ಸಹಿತ ಯಾವ್ಯಾವುದೋ ಕಾರಣಕ್ಕಾಗಿ ಯಾರದೋ ಒತ್ತಡಕ್ಕೆ ಮಣಿದು ಅಧಿಕಾರಿಗಳು ಸಂತ್ರಸ್ತರಿಗೆ ಪುನರ್‌ವಸತಿ ಕಲ್ಪಿಸುವ ಕೆಲಸ ಇಲ್ಲಿಯವರೆಗೂ ಆಗಿಲ್ಲ. Stay ತಂದು vacate ಆದರೂ ಸಹಿತ ಪುನಃ stay ತರುವುದಕ್ಕೆ ಅವಕಾಶ ಮಾಡಿಕೊಡುವಂತಹ, delete ಮಾಡುವಂತಹ ಕುಕೃತ್ಯವನ್ನು ಮಾಡುವಂತಹ ಕೆಲಸ ಅಧಿಕಾರಿಗಳ ಮಟ್ಟದಲ್ಲಿ ನಡೆಯುತ್ತಿದೆ. ಈ ಕಡೆ ಸರ್ಕಾರ ಗಮನ ಹರಿಸಿ ಎಲ್ಲೆಲ್ಲಿ ತಪ್ಪುಗಳಾಗಿವೆ, ಅದನ್ನು ತೀವ್ರಗತಿಯಿಂದ ಹಿಪ್ಪರಗಿ ಅಣೆಕಟ್ಟಿನಲ್ಲಿ ಮುಳುಗಡೆಯಾಗಿರುವ ಗ್ರಾಮಗಳಿಗೆ ಪುನರ್ ವಸತಿ ಕಲ್ಪಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಉದಾಹರಣೆಗೆ, ನಮ್ಮ ಕ್ಷೇತ್ರದಲ್ಲಿ ಬರುವ ಕಮದಡ್ಡಿ, ಗುಲ್ಲಳ್ಳಿ, ಹಸ್ಕಿ, ಹಿಪ್ಪರಗಿ, ಮದಲಮಟ್ಟಿ, ಅಳಿಂಗಿಲಿ ಗ್ರಾಮಗಳು ಭಾಗಶಃ ಅಥವಾ ಸಂಪೂರ್ಣ ಮುಳುಗಡೆಯಾಗುವ ಗ್ರಾಮಗಳಾಗಿರುವುದರಿಂದ ತಕ್ಷಣವೇ ಪುನರ್ ವಸತಿ ಕೊಡಬೇಕು. ಮಳೆಗಾಲದಲ್ಲಿ flood ಬಂದಾಗ ಸುಮಾರು ಐದಾರು ಕಿ.ಮೀ. ಬೋಟ್ ಮುಖಾಂತರ ಆ ಗ್ರಾಮಗಳಿಗೆ ಹೋಗುವಂತಹ ದಯನೀಯ ಸ್ಥಿತಿ ಇದೆ. ಆ ಕಾರಣಕ್ಕಾಗಿ ಸಂಪೂರ್ಣ ಮುಳುಗಡೆಯಾಗುವ ಗ್ರಾಮಗಳು ಏನಿವೆ, ಅವುಗಳಿಗೆ ಬೇಗನೆ ಪುನರ್ ವಸತಿ ಕೇಂದ್ರವನ್ನು ಗುರುತು

ಮಾಡುವ ಕೆಲಸವನ್ನು, ಭೂಮಿಯನ್ನು ವಶಪಡಿಸಿಕೊಂಡು, ಸಂತ್ರಸ್ತರಿಗೆ ನ್ಯಾಯ ಒದಗಿಸಿಕೊಡುವ ಕೆಲಸವಾಗಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಹೇಳಬಯಸುತ್ತೇನೆ. ಇದರ ಜೊತೆ ಹಿನ್ನೀರಿನಿಂದ ಸುತ್ತುವರೆದು ಹೋಗುವಂತಹ ಅಥಣಿ, ಜಮಖಂಡಿ ತಾಲ್ಲೂಕಿನ ಸಂಪರ್ಕ ಬಹಳಷ್ಟು ಸುತ್ತುವರೆದು ಹೋಗುವಂತಹ ಸಂದರ್ಭ ಇರುವುದರಿಂದ ಸುಮಾರು 2 ಬ್ರಿಡ್ಜ್‌ಗಳನ್ನು ಅಲ್ಲಿ ನಿರ್ಮಾಣ ಮಾಡಬೇಕು. ಇದನ್ನು ಏಕೆ ಹೇಳುತ್ತೇವೆಂದರೆ, ನಾವು ಸಂತ್ರಸ್ತರಾಗಿ ಈ ರಾಜ್ಯದ ಅಭಿವೃದ್ಧಿಗೆ ತ್ಯಾಗ ಮಾಡಿದ್ದೇವೆ.

ಆ ಕಾರಣಕ್ಕಾಗಿ 2 ಬ್ರಿಡ್ಜ್‌ಗಳನ್ನು ಕೃಷ್ಣಾ ನದಿಗೆ ನಿರ್ಮಾಣ ಮಾಡಿಕೊಡುವುದರ ಮುಖಾಂತರ, ಒಂದು ಹಿಪ್ಪರಗಿ ಮತ್ತೊಂದು ಬಂದಾರದ ಕೆಳಗಡೆ ಇನ್ನೊಂದು ಬನಹಟ್ಟಿ ಮತ್ತು ಮೈನಸವಾಡಿಗೆ ಮಧ್ಯದಲ್ಲಿ 2 ಬ್ರಿಡ್ಜ್ ನಿರ್ಮಾಣ ಮಾಡುವಂಥ ಕೆಲಸ ನೀರಾವರಿ ಇಲಾಖೆ ಯಿಂದ ಆಗಬೇಕು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯ ಸುತ್ತೇನೆ. ಕೊನೆಯದಾಗಿ ಮಾನ್ಯ ಉಪಾಧ್ಯಕ್ಷರೆ, ಬೇಸಿಗೆಯಲ್ಲಿ ನಮ್ಮ ರಾಜ್ಯದ ಪರಿಸ್ಥಿತಿ ಹೇಗಾಗಿದೆಯೆಂದು ಹೇಳಿದರೆ ನಮಗೆ ಬಹಳ ನೋವು ಅನ್ನಿಸುತ್ತಿದೆ. ನಮ್ಮಲ್ಲಿರುವಂಥ ನೀರನ್ನು ಹಿಡಿದಿಟ್ಟುಕೊಳ್ಳುವ ತಾಕತ್ತು ನಮಗೆ ಇಲ್ಲ. ಬೇರೆ ರಾಜ್ಯದವರು ಅಂದರೆ ತಮಿಳುನಾಡು ಆಂಧ್ರದವರು ನೀರನ್ನು ಯಾವ ರೀತಿ ಒಯ್ಯುತ್ತಾರೆ, ಅದೇ ರೀತಿ ನಮ್ಮ ಮೇಲುಗಡೆ ಇರುವಂಥ ಮಹಾರಾಷ್ಟ್ರ ರಾಜ್ಯದ ನೀರನ್ನು ಪಡೆಯುವಂಥ ತಾಕತ್ತು ನಮಗೆ ಇಲ್ಲ. ಇದು ಯಾವ ರೀತಿ? ಏನು ದೋಷವಾಗಿದೆಯೋ ಗೊತ್ತಿಲ್ಲ, ಏಕೆಂದರೆ, ಕಾವೇರಿ ಸಮಸ್ಯೆ ಬಂದಾಗ ಯಾವ ರೀತಿ ಇಡೀ ರಾಜ್ಯ ಒಂದಾಗಿ, ನಾವೂ ಸಹಿತ ಅವರ ಬೆಂಬಲಕ್ಕೆ ನಿಂತು ಹೋರಾಟ ಮಾಡಿ, ಅಲ್ಲಿರುವಂಥ ನೀರನ್ನು ಪಡೆಯುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಆದರೆ ಅದೇ ಸ್ಥಿತಿ ಇಲ್ಲಿ ಕೃಷ್ಣಾಗೆ ಬಂದಾಗ ಯಾರೂ ಅವಕಾಶ ಕೊಡುವುದಿಲ್ಲ, ಯಾರೂ ಕೇಳುವುದಿಲ್ಲ, ಯಾರೂ ಸ್ಪಂದನೆ ಮಾಡುವುದಿಲ್ಲ. ನಮಗೇನೋ ಹೋದ 2 ವರ್ಷಗಳು ಬೊಮ್ಮಾಯಿಯವರು ಮಹಾರಾಷ್ಟ್ರಕ್ಕೆ ಹೋಗಿ ಅವರ

ಮುಂದುಗಡೆ ನಿಂತು ನೀರು ತರುವಂಥ ಕೆಲಸವನ್ನು ಮಾಡಿದ್ದಾರೆ. ಆದರೂ ಸಹಿತ ನೀರು ಕೆಳಗಡೆವರೆಗೂ ಬಂದು ಮುಟ್ಟಿ, ರೈತರಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ಬೆಳೆಗಳನ್ನು ಉಳಿಸುವ ಕೆಲಸ ಆಗಲಿಲ್ಲ. ಇದು ಪ್ರತಿ ವರ್ಷ ಬೇಸಿಗೆಯಲ್ಲಿ ಆಗುವಂಥ ಪರಿಸ್ಥಿತಿ, ಸುಮಾರು 4 ರಿಂದ 5 ತಿಂಗಳುಗಳ ಕಾಲ ನೀರು ಖಾಲಿಯಾಗಿ, ಅಲ್ಲಿ ದನಕರುಗಳಿಗೆ, ಪಶು-ಪಕ್ಷಿಗಳಿಗೆ, ರೈತರು ಬೆಳೆದಂಥ ಕಬ್ಬಿಗೆ ಒಂದು ಹನಿ ನೀರು ಸಿಗದಂಥ ವ್ಯವಸ್ಥೆಯಿದೆ. ಪ್ರತಿ ವರ್ಷ ಕೃಷ್ಣಾ ನದಿಯ ಎಡ ಮತ್ತು ಬಲದಂಡೆ ಮೇಲೆ ನಡೆಯುತ್ತಿರುವಂಥ ಈ ಚಿತ್ರಹಿಂಸೆಯನ್ನು ಆ ಭಾಗದ ರೈತರು ಅನುಭವಿಸುತ್ತಾರೆ. ಅದರ ಜೊತೆಗೆ ಅಲ್ಲಿ ಬೆಳೆದಂಥ ಕಬ್ಬಿನ ಬೆಳೆಗಳು ಅಥವಾ ಬಾಳೆಯ ಬೆಳೆಗಳು, ಇನ್ನಿತರೆ ಮೇವಿನ ಬೆಳೆಗಳು ಸಾವಿರಾರು ಹೆಕ್ಟೇರ್ ಜಮೀನಿನಲ್ಲಿ ಒಣಗಿಹೋಗುವಂಥ ಸಂದರ್ಭ, ಇದರಿಂದ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಾನಿಯನ್ನು ಆ ಭಾಗದ ರೈತರು ಅನುಭವಿಸುವಂಥ ಪರಿಸ್ಥಿತಿಯಿರುವುದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಜಲಸಂಪನ್ಮೂಲ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವ ರೀತಿ ತಮಿಳುನಾಡಿನವರು ಕಾವೇರಿ ನೀರನ್ನು ಹಕ್ಕಿನಿಂದ ಒಯ್ಯುತ್ತಾರೆ, ಅದೇ ರೀತಿ ನಮಗೆ ಮಹಾರಾಷ್ಟ್ರದಿಂದ ಕೊಯ್ನಾ ನೀರಿನ ಬಗ್ಗೆ ನಮ್ಮ ಹಕ್ಕನ್ನು ಸಾಧಿಸುವಂಥ ಕೆಲಸವನ್ನು ಮಾಡಬೇಕು. ಅದಕ್ಕಾಗಿ ಸುಪ್ರೀಂ ಕೋರ್ಟ್‌ಗೆ ಹೋಗಬೇಕೋ ಅಥವಾ ಎಲ್ಲಿಗೆ ಹೋಗಬೇಕೋ ಎನ್ನುವುದನ್ನು ಸರ್ಕಾರ ವ್ಯವಸ್ಥೆ ಮಾಡಲಿ. ಬೇಸಿಗೆಯಲ್ಲಿ ನಮಗೂ ಸಹಿತ ಕೇವಲ ಒಂದು ವರ್ಷಕ್ಕೆ 5 ರಿಂದ 10 ಟಿಎಂಸಿ ನೀರು ಸಾಕಾಗುತ್ತದೆ. ನಾವು ಅವರೊಂದಿಗೆ ಪ್ರತಿ ತಿಂಗಳು ನೀರು ಬಿಡಿ ಎಂದು ಕೇಳುವುದಿಲ್ಲ. ಬೇಸಿಗೆಯಲ್ಲಿ 5 ರಿಂದ 10 ಟಿಎಂಸಿ ನೀರನ್ನು ನಮ್ಮ ಹಿಪ್ಪರಗಿ ಡ್ಯಾಮ್‌ಗಾಗಲಿ, ಕೃಷ್ಣಾ ನದಿಗಾಗಲಿ, ಗಲಿಗಲಿ ಬ್ಯಾರೇಜ್, ಚಿಕ್ಕಪಟಸಲಗಿ ಬ್ಯಾರೇಜ್‌ಗೆ ಬಿಡುವಂಥ ಕೆಲಸ ಆಗಬೇಕು. ಇದಾದರೆ, ಅಲ್ಲಿನ ರೈತರು ಬದುಕುವುದಕ್ಕೆ ಸಾಧ್ಯವಾಗುತ್ತದೆ. ಕುಡಿಯುವ ನೀರಿನ ವ್ಯವಸ್ಥೆ ಆಗುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ನಾವು ಇಡೀ ರಾಜ್ಯಕ್ಕೆ ನೀರು ಕೊಟ್ಟು, ನಾವೇ ನೀರಿಲ್ಲದೆ

ಪರಿತಪಿಸುವಂಥ ಕೆಲಸ ಬಹುಶಃ ಕೃಷ್ಣಾ ನದಿ ದಂಡೆಯ ಮೇಲೆ ಆಗುತ್ತದೆ. ಆ ಕಾರಣದಿಂದ ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳು ತ್ತಿದ್ದೇನೆ. ಏನಾದರೂ ಮಾಡಿ ಕೊಯ್ನಾದಿಂದ ಬೇಸಿಗೆಯಲ್ಲಿ ಕುಡಿಯುವುದಕ್ಕೆ ನೀರು ತರುವಂಥ ಕೆಲಸ ಮಾಡಬೇಕು. ಅದರ ಜೊತೆಗೆ ಈ ವರ್ಷ, ಹೋದ ವರ್ಷ ರೈತರಿಗೆ ಬಹಳಷ್ಟು ತೊಂದರೆಯಾಗಿದೆ. ಆ ಭಾಗದ ಕಾರ್ಖಾನೆಗಳು ನಡೆಯದೇ ಇರುವಂಥ ಸ್ಥಿತಿ ಬಂದೊದಗಿದೆ. ಏಕೆಂದರೆ ಕಬ್ಬಿನ ಬೆಳೆಗಳು ಹಾನಿಗೊಳಗಾದ ನಂತರ ಆ ಕಾರ್ಖಾನೆಗಳೂ ಸಹಿತ ಬಂದ್ ಆಗುವಂಥ ಸಂದರ್ಭ ಬಂದಿದೆ. ಆ ಕಾರಣಕ್ಕಾಗಿ ಈ ಸಲ ನಾವು ಅಲ್ಲಿರುವಂಥ ಕೃಷ್ಣಾ ತೀರದ ರೈತ ಸಂಘದ ವತಿಯಿಂದ ಚಿಕ್ಕಪಡಸಲಗಿ ಬ್ಯಾರೇಜ್‌ನಿಂದ ಕೆಳಗಡೆ ನೀರನ್ನು ಒಂದೂವರೆ ಟಿ.ಎಂ.ಸಿ. ಯನ್ನು ಎತ್ತಿ ಮೇಲೆ ಹಾಕಿಕೊಳ್ಳುವಂಥ ಕೆಲಸವನ್ನು ಮಾಡಿಕೊಡಬೇಕೆಂಬ ವಿನಂತಿ ಯನ್ನು ಅರ್ಜಿ ಮುಖಾಂತರ ಸರ್ಕಾರವನ್ನು ನಾವು ಕೇಳಿದ್ದೆವು. ತಕ್ಷಣ ಈ ಕೆಲಸ ಆಗಬೇಕಾಗಿದ್ದರಿಂದ, ನಾವೇ ಸಂಘದ ವತಿಯಿಂದ ರೈತರು contribution ಮಾಡಿ ಅಥವಾ ಸಕ್ಕರೆ ಕಾರ್ಖಾನೆಗಳು contribution ಮಾಡಿ ತಕ್ಷಣ ಆ ನೀರನ್ನು ಕೆಳಗಡೆ turbine pumpಗಳನ್ನು ಕೂಡಿಸಿ ಮೇಲೆತ್ತಿ ಹಾಕಿ ಒಂದೂವರೆ ಟಿ.ಎಂ.ಸಿ. ನೀರನ್ನು ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗಾಗಲೇ ಮಾನ್ಯ ಸಚಿವರು ಅದಕ್ಕೆ permission ಕೊಡುತ್ತೇವೆ, scarcity ಯೊಳಗೆ ದುಡ್ಡನ್ನು ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ಬಹಳ ಸಂತೋಷವಾಗಿದೆ, ಅವರಿಗೆ ಅಭಿನಂದನೆಯನ್ನು ಹೇಳುತ್ತೇವೆ. ಆ ಕೆಲಸವನ್ನು ಮಾಡುವುದಕ್ಕೆ ಈ ತಕ್ಷಣ ವ್ಯವಸ್ಥೆಯನ್ನು ಮಾಡಿಕೊಟ್ಟು, ಆ ನೀರನ್ನು ಎತ್ತುವುದಕ್ಕೆ ಅವಕಾಶ ಮಾಡಿಕೊಡಬೇಕು ಮತ್ತು scarcity ಯಲ್ಲಿ ಅದಕ್ಕೆ ತಗಲಬಹುದಾದ ಅಂದಾಜು ರೂ. 5 ಕೋಟಿಗಳನ್ನು ನಂತರ ನಮ್ಮ ಕೃಷ್ಣಾ ತೀರದ ರೈತ ಸಂಘದವರಿಗೆ ಕೊಡಬೇಕು. ಅಲ್ಲಿಯವರೆಗೆ ನಾವು ರೈತರು ಹಾಕುತ್ತೇವೆ. ಏಕೆಂದರೆ ತಕ್ಷಣ ನಮಗೆ ನೀರು ಬೇಕಾಗಿದೆ. ಇನ್ನು ಒಂದು ವಾರ ಹೋದರೆ

ನಮಗೆ ಆ ನೀರು ಸಿಗುವುದಿಲ್ಲ. ಆ ನೀರು ಸಿಗದೇ ಹೋದರೆ ಅಲ್ಲಿ ಸಾವಿರಾರು ಎಕರೆ ಗಲಗಲಿ ಬಾಂದಾರದಿಂದ ಹಿಪ್ಪರಗಿ ಡ್ಯಾಮ್‌ವರೆಗೆ ನೀರು ಒಣಗಿ ಹೋಗುವಂಥ ಸಂದರ್ಭವಿರುವುದರಿಂದ, ಅದನ್ನು ತಾತ್ಪೂರ್ತಿಕ ಮಾಡಿಕೊಳ್ಳುವಂಥ ವ್ಯವಸ್ಥೆಗೆ ಸರ್ಕಾರ ಅದಕ್ಕೆ ತಕ್ಷಣ ಇವತ್ತೇ delay ಮಾಡಲಾರದೆ ಅನುಮತಿಯನ್ನು ಕೊಡಬೇಕೆನ್ನುವ ಮಾತನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ಒಟ್ಟಾರೆಯಾಗಿ ನಾನು ಹೇಳುವ ತಾತ್ಪರ್ಯ ಇಷ್ಟೆ, ಈ ರಾಜ್ಯದ ರೈತರ ನೀರಾವರಿಗಾಗಿ ಮತ್ತು ಕುಡಿಯುವ ನೀರಿಗಾಗಿ ನಾವು ಸರ್ವಸ್ವವನ್ನು ಕಳೆದುಕೊಂಡಿದ್ದೇವೆ. ಕೃಷ್ಣಾ ನದಿಯಲ್ಲಿದ್ದವರು, ಆಲಮಟ್ಟಿ ಮೇಲ್ಪಟ್ಟದಲ್ಲಿದ್ದವರು, ಆ ಕಾರಣಕ್ಕಾಗಿ ಮೊದಲ ಸಂತ್ರಸ್ತರು ಯಾರು ತಮ್ಮ ಸರ್ವಸ್ವವನ್ನೆಲ್ಲಾ ಕಳೆದುಕೊಂಡಿದ್ದಾರೋ ಅವರ ಬೆನ್ನಿಗೆ ಸಹಾಯಕ್ಕೆ ಬರುವಂಥ ಕೆಲಸವನ್ನು ಸರ್ಕಾರ ಮೊದಲು ಮಾಡಬೇಕು. ನಾವು ಹಾಳಾಗುತ್ತಿರುವವರನ್ನು ಮರೆತು ಮತ್ಯಾರನ್ನೋ ಬದುಕಿಸುವಂಥ ಕೆಲಸ ಆಗಬಾರದು. ನಮ್ಮನ್ನು ಸಾಯಿ–ಹೊಡಿ ಬದುಕಿಸು ವಂಥ ಕೆಲಸ ಆಗಬಾರದು. ನಮಗೂ ಸಹಿತ ಸರ್ಕಾರದ ಸೌಲಭ್ಯಗಳನ್ನು, ಉಳಿದಂಥ ಜನರಿಗೆ ನೀರಾವರಿ ಸೌಲಭ್ಯವನ್ನು ಅಲ್ಲಿರುವಂಥ ಸಂತ್ರಸ್ತರ ಮಕ್ಕಳಿಗೆ ಸರ್ಕಾರದ ಉದ್ಯೋಗದಲ್ಲಿ ಅವಕಾಶವನ್ನು ಮಾಡಿ ಕೊಡುವ ಕೆಲಸ ಆಗಬೇಕು. ಅರ್ಧಕ್ಕೆ ನಿಂತಿರುವ ಪುನರ್ವಸತಿ ಕೇಂದ್ರ ಪೂರ್ತಿಗೊಳಿಸುವ ಕೆಲಸ ಆಗಬೇಕು. ಏನೇನು ತಕರಾರು ಬಂದಿವೆಯೋ, ಸ್ಟೇ ಬಂದಿದೆ ನಾನೇನು ಮಾಡಲಿ ಎಂದು ಹೇಳುವಂಥ ಸಂದರ್ಭ ಬಂದಿದೆ, ಕೋರ್ಟಿನಲ್ಲಿ ನೀವು ಯಾವ ರೀತಿ ವಾದ ಮಾಡಬೇಕೆಂದು ನಾನು ಹೇಳುತ್ತೇನೆ. ಲಕ್ಷಾಂತರ ಎಕರೆ ಬಿ–ಸ್ಕೀಂನಲ್ಲಿ ನಾವು ಮುಳುಗಡೆಯಾ ಗುತ್ತಿದ್ದೇವೆ, ನಮ್ಮ 20 ಲಕ್ಷ, 50 ಲಕ್ಷ ಬೆಲೆ ಬಾಳುವ ಜಮೀನುಗಳನ್ನು ಕಳೆದುಕೊಳ್ಳುತ್ತಿದ್ದೇವೆ. ನಮಗೇನಾದರೂ ಸ್ಟೇ ಕೊಡಿಸುತ್ತೀರಾ? ಅಥವಾ ನಾವೇನಾದರೂ ಧರಣಿ ಮಾಡಿದರೆ ಅದನ್ನು ನಿಲ್ಲಿಸುತ್ತೀರಾ? ನಿಲ್ಲಿಸುವುದನ್ನು ಬಿಟ್ಟರೆ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎನ್ನುವುದು ನಮಗೂ ತಿಳಿಯುತ್ತದೆ. ನಾವು ಯಾವ ರೀತಿ ಲಕ್ಷಾಂತರ ಬೆಲೆ ಬಾಳುವ ಜಮೀನನ್ನು,

ನದಿ ದಂಡೆಯಲ್ಲಿರುವ ಫಲವತ್ತಾದ ಜಮೀನನ್ನು ಕಳೆದುಕೊಳ್ಳುತ್ತಿದ್ದೇವೆಯೋ ಅಂದರೆ, ನಾವು ಬದುಕುವುದಕ್ಕೆ, ನಾವು ಮನೆ ಕಟ್ಟಿಕೊಳ್ಳುವುದಕ್ಕೂ ನಮಗೆ ಜಮೀನು ಕೊಡುತ್ತಿಲ್ಲ, 4 ವರ್ಷ, 5 ವರ್ಷ ಹೋಗುತ್ತಿದೆ. ನಾವು ಯಾವ ರೀತಿ ನಮ್ಮ ಅಹವಾಲನ್ನು ಯಾರಿಗೆ ಹೇಳಿಕೊಳ್ಳಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸಚಿವರ ಗಮನ ಸೆಳೆಯಬಯಸುತ್ತಿದ್ದೇನೆ. ಆ ಕಾರಣದಿಂದ ಇದನ್ನು serious ಆಗಿ ತೆಗೆದುಕೊಂಡು ಆದಷ್ಟು ಬೇಗನೆ ಅಲ್ಲಿರುವಂಥ ಸಮಸ್ಯೆಗಳನ್ನು ನಿವಾರಣೆ ಮಾಡುವಂಥ ಕೆಲಸ ಆಗಬೇಕು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಆ ಭಾಗದ ರೈತರ ಪರವಾಗಿ ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು : ಡಾ: ಸಾರ್ವಭೌಮ ಬಗಲಿ.

ಶ್ರೀ ಶ್ರೀಕಾಂತ್ ಸುಬ್ಬರಾವ್ ಕುಲಕರ್ಣಿ (ಜಮಖಂಡಿ) : ಮಾನ್ಯ ಶಾಸಕರು ಈವರೆವಿಗೂ ಹೇಳಿದಂಥ ಮಾತುಗಳು, ಸೂಚನೆಗಳು ಬಹಳ ಯೋಗ್ಯವಾಗಿವೆ. ಆ ಭಾಗದ ಮುಳುಗಡೆ ಗ್ರಾಮಗಳು ದೊಡ್ಡ ಪ್ರಮಾಣದಲ್ಲಿ ಇವತ್ತು ಸಾವಿರಾರು ಎಕರೆ ಜಮೀನನ್ನು ಮುಳುಗಿಸಿಕೊಂಡು ನಿರಾಶ್ರಿತರಾದಂಥ ಸಂತ್ರಸ್ತರಿಗೆ ಪುನಃ ಪುನರ್‌ವಸತಿ ಕಲ್ಪಿಸುವಂಥ ಕೆಲಸ ಮಾಡಬೇಕಾಗುತ್ತದೆ. ಒಂದು ಪಾಯಿಂಟ್ ಅವರು ಏನು ಹೇಳಿದರು, ಯಾರು ಜಮೀನನ್ನು ಕಳೆದುಕೊಳ್ಳುತ್ತಾರೆ, ಅವರಿಗೆ ಕೇವಲ ಪರಿಹಾರ ಕೊಟ್ಟರೆ, ಮತ್ತೊಮ್ಮೆ ಪುನರ್ವಸತಿ ಮಾಡಿಕೊಂಡು, ಬೇರೆ ಜಮೀನು ಖರೀದಿ ಮಾಡಿ, ಕೃಷಿಕರಾಗಿ ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಜಮೀನನ್ನೇ ಕೊಡಬೇಕೆಂದು ಅವರೇನು ಹೇಳಿದರು, ಅಷ್ಟೂ ಜಮೀನು ಸರ್ಕಾರಿ ಜಮೀನು ಸಿಗುತ್ತದೆಂದು ನನಗೇನು ಅನ್ನಿಸುವುದಿಲ್ಲ. ಹಾಗೆ, ಕನಿಷ್ಠ ಅವರು ಕಳೆದುಕೊಂಡಿರುವಂಥ ಜಮೀನಿನ ಪೈಕಿ 50% ಆದರೂ, ಉದಾಹರಣೆಗೆ 10 ಎಕರೆ ಕಳೆದುಕೊಂಡಿರುವಂಥ ರೈತನಿಗೆ 5 ಎಕರೆ ಸರ್ಕಾರಿ ಜಮೀನು ಕೊಟ್ಟು, ಇನ್ನುಳಿದ 5 ಎಕರೆ ಜಮೀನಿಗೆ ಯೋಗ್ಯ ಪರಿಹಾರ ಕೊಟ್ಟರೆ ರೈತರು

ಬದುಕುವುದಕ್ಕೆ ಆಗುತ್ತದೆ ಎನ್ನುವಂಥ ಹಿನ್ನೆಲೆಯಲ್ಲಿ ಸನ್ಮಾನ್ಯ ನೀರಾವರಿ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಡಾ : ಸಾರ್ವಭೌಮ ಸಾತಗೌಡ ಬಗಲಿ (ಇಂಡಿ) : ಕೃಷ್ಣಾ ಮೇಲ್ದಂಡೆ ಯೋಜನೆಯ ಅನುಷ್ಠಾನದಲ್ಲಿ ಭಾಗವಹಿಸಿ ಮಾತನಾಡಲು ಅನುಮತಿ ನೀಡಿದ್ದಕ್ಕಾಗಿ ನಾನು ಮೊದಲು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಲ್ಲಿಯವರೆಗೆ ಈ ಯೋಜನೆಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು, ನಮ್ಮ ಪಕ್ಷದ ಶಾಶಕರು ಮಾತನಾಡಿದ್ದಾರೆ. ನಾನು ನನ್ನ ಮಾತುಗಳನ್ನು ಕೇವಲ ನನ್ನ ಮತಕ್ಷೇತ್ರದ ವ್ಯಾಪ್ತಿಗೆ limitaion ಮಾಡುತ್ತೇನೆ. Originally ಏನು ಒಂದು ಮೂಲ Master Plan ಇತ್ತು, ಆ plan ಪ್ರಕಾರ ನಮ್ಮ ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗೆ 102 ಟಿ.ಎಂ.ಸಿ. ನೀರು ಕೊಡಬೇಕಾಗಿತ್ತು. ಆದರೆ, 2005ರಲ್ಲಿ ನಮ್ಮ ಸರ್ಕಾರ ಟ್ರಿಬ್ಯುನಲ್ ಮುಂದೆ ಒಂದು modified plan ಇಟ್ಟಿತು, ಆ ಸಮಯದಲ್ಲಿ ನೀರಿನ allotment 102 ರಿಂದ 83.03 ಟಿ.ಎಂ.ಸಿ. ಗೆ ಮಿತಿಗೊಳಿಸಿದರು. ಇದರಿಂದಾಗಿ ನನ್ನ ಕ್ಷೇತ್ರಕ್ಕೆ ಬರಬೇಕಾದ ನೀರಿನ ಪಾಲು ಬಹಳ ಕಡಿಮೆಯಾಯಿತು. ಇದರಿಂದಾಗಿ ನನ್ನ ಕ್ಷೇತ್ರದ ಸುಮಾರು 4546 ಹೆಕ್ಟೇರ್ ಏರಿಯಾ, ಸುಮಾರು 31 ಹಳ್ಳಿಗಳಲ್ಲಿ ಇಷ್ಟೊಂದು ಜಮೀನುಗಳು ನೀರಾವರಿ ಸೌಲಭ್ಯದಿಂದ ವಂಚಿತವಾದವು. ಇಂಥ ಒಂದು ಪರಿಸ್ಥಿತಿಯಲ್ಲಿ ನಾನು ಸನ್ಮಾನ್ಯ ಜಲಸಂಪನ್ಮೂಲ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ನೀರಾವರಿಯಿಂದ ವಂಚಿತವಾಗಿರುವ 4556 ಎಕರೆ ಜಮೀನು ಅದಕ್ಕೆ ಯಾವ ರೀತಿಯಿಂದ ಅಥವಾ ಮತ್ತೊಂದು ರೀತಿಯಾದ ನೀರಾವರಿ ಒದಗಿಸುವ ಚಿಂತನೆಯನ್ನು ಮಾಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಮುಂದುವರೆದು, ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆ, ಅಂದರೆ ಬಸವರಾಜ ಬೊಮ್ಮಾಯಿಯವರು ಜಲಸಂಪನ್ಮೂಲ ಸಚಿವರಾಗಿ ಅಧಿಕಾರ ವಹಿಸಿಕೊಂಡು ಸಮಯದಲ್ಲಿ ನಮ್ಮ ಕ್ಷೇತ್ರದಲ್ಲಿ ಗುತ್ತಿ ಬಸವಣ್ಣ ಏತ ನೀರಾವರಿ ಕೇವಲ 97 ಕಿ.ಮೀ. ವರೆಗೆ ಬಂದಿತ್ತು. ಕಳೆದ 4 ವರ್ಷಗಳಲ್ಲಿ ಬಸವರಾಜ

ಬೊಮ್ಮಾಯಿಯವರು ಅತ್ಯಂತ ಕ್ರಿಯಾಶೀಲರಾಗಿ ಕೆಲಸ ಮಾಡಿ ನಮ್ಮೆಲ್ಲರ ಮನವಿಗಳಿಗೆ ಸ್ಪಂದಿಸಿ, ಅತ್ಯಂತ ತ್ವರಿತಗತಿಯಲ್ಲಿ ಕೆಲಸ ಮಾಡಿದ್ದರಿಂದಾಗಿ ಇವತ್ತು 97 ಕಿ.ಮೀ. ನಿಂದ 110 ಕಿ.ಮೀ. ವರೆಗೆ ನೀರು ಹರಿದಿದೆ. ಇದು ನಿಜವಾಗಿಯೂ ನಮ್ಮ ಸರ್ಕಾರದ ಸಾಧನೆ ಎಂದು ನಾನು ಭಾವಿಸುತ್ತೇನೆ. ಮುಂದುವರೆದು 110 ಕಿ.ಮೀ.ನಿಂದ 147 ಕಿ.ಮೀ.ವರೆಗೆ ಗುತ್ತಿಬಸವಣ್ಣ ಕಾಲುವೆ ಬರುತ್ತಿದೆ. ಅದು ಸಂಪೂರ್ಣ ವಾಗಿ ನನ್ನ ಮತ ಕ್ಷೇತ್ರದಲ್ಲಿ ಬರುತ್ತದೆ. ಈಗಾಗಲೇ ಅವಶ್ಯವಿದ್ದಂಥ ಅನುದಾನವನ್ನು ಬಿಡುಗಡೆ ಮಾಡಿ 124 ಕಿ.ಮೀ.ರವರೆಗೆ ಕಾಲುವೆಗಳನ್ನು ತೋಡಿಸಿದ್ದಾರೆ. ಮುಂದುವರೆದು. 120 ಕಿ.ಮೀ. ರಿಂದ 147 ಕಿ.ಮೀ.ರವರೆಗೆ ಸರ್ವೆ ಕಾರ್ಯ ನಡೆದಿದೆ. ಆದಷ್ಟು ಬೇಗನೆ 120 ಕಿ.ಮೀ. ರಿಂದ 147 ಕಿ.ಮೀ. ರವರೆಗಿನ ಕಾಲುವೆ ತೋಡುವ ಕೆಲಸವನ್ನು ಕೂಡಲೇ ಪ್ರಾರಂಭಿಸ ಬೇಕೆಂದು ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ನಾನು ಈಗಾಗಲೇ ಹೇಳಿದಂತೆ, ನನ್ನ ಮತಕ್ಷೇತ್ರದ ಏನೊಂದು 31 ಹಳ್ಳಿಗಳು ನೀರಾವರಿಯಿಂದ ವಂಚಿತವಾಗಿವೆಯೋ, ಅದಕ್ಕೆ ನಾವು ಕೇವಲ ಕೆರೆ ತುಂಬುವ ಯೋಜನೆಯಿಂದ ಮಾತ್ರ ನಾವು ನೀರನ್ನು ಕೊಡಲು ಸಾಧ್ಯವಿದೆ. ನಮ್ಮ ಕ್ಷೇತ್ರದಲ್ಲಿ ಎರಡು ಕೆರೆ ತುಂಬುವ ಯೋಜನೆಗಳು ಇವೆ. ಅದರ ಪೈಕಿ ಒಂದು, ಈ ಅಣಚಿ lift ನೀರಾವರಿ, ಈಗಾಗಲೇ ಅದಕ್ಕೆ ಅನುಮೋದನೆ ದೊರೆತಿದೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಭೂಮಿ ಪೂಜೆಯನ್ನು ನೆರವೇರಿಸಿದ್ದಾರೆ. ಆದರೆ ಇನ್ನೊಂದು ಭುಯ್ಯಾರ್ ಕೆರೆ ತುಂಬುವ ಪ್ಯಾಕೇಜ್ ಯೋಜನೆ ಇದೆ. ಅದು ಅಷ್ಟೊಂದು ತೀವ್ರ ಗತಿಯಲ್ಲಿ ನಡೆಯುತ್ತಿಲ್ಲ. It is at some stage of planning ಆಮೇಲೆ TAC ಯವರು ಈ ಒಂದು ಕೆರೆ ತುಂಬುವ ಯೋಜನೆಗೆ ನೀರಿನ ಮೂಲವೇನೆಂಬ ಬಗ್ಗೆ ಅಲ್ಲಸಲ್ಲದ objection ಹಾಕಿ, ಈ ಒಂದು ಯೋಜನೆ delay ಆಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ನಾನು ಸನ್ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆದಷ್ಟು ಬೇಗನೆ ಈ

ಒಂದು ಕೆರೆ ತುಂಬುವ ಯೋಜನೆಗೆ ಇರಬಹುದಾದಂತಹ technical problems ನಿವಾರಣೆ ಮಾಡಿ, ಆದಷ್ಟು ಬೇಗ ಈ ಒಂದು ಕಾರ್ಯಕ್ರಮಕ್ಕೆ ಚಾಲನೆ ಕೊಡಬೇಕೆಂದು ಹೇಳುತ್ತೇನೆ. ಕಳೆದ ನಾಲ್ಕು ವರ್ಷದಲ್ಲಿ ಮಾನ್ಯ ಬಸವರಾಜ ಬೊಮ್ಮಾಯಿಯವರ ಕ್ರಿಯಾಶೀಲತೆಯಿಂದ ಏನು ಜನರಿಗೆ ನೀರಾವರಿಯಿಂದ ಅನುಕೂಲವಾಗಿದೆ ಅದಕ್ಕಾಗಿ ಅವರಿಗೆ ನಾನು ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೂ ಮತ್ತೊಮ್ಮೆ ಧನ್ಯವಾದಗಳನ್ನು ಅರ್ಪಿಸಿ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೀರಣ್ಣ ಸಿ.ಚರಂತಿಮಠ್ (ಬಾಗಲಕೋಟೆ) :– ಮಾನ್ಯ ಉಪಾಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕೃಷ್ಣಾ ಕಣಿವೆಯ ನೀರಾವರಿಯ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಮ್ಮ ಗೌರವಾನ್ವಿತ ಸದಸ್ಯರೂ ಕೂಡ ಸಾಕಷ್ಟು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. 48 ವರ್ಷಗಳಿಂದ ಈ ಯೋಜನೆ ಮುಗಿದಿಲ್ಲ, 48 ವರ್ಷಗಳಿಂದ ಇದು ನೆನೆಗುದಿಗೆ ಬಿದ್ದಿದೆ ಎಂದು ಅವರು ಹೇಳಿದರು. 1964ರಲ್ಲಿ ಅಡಿಗಲ್ಲು ಇಟ್ಟಂತಹ ಈ ಯೋಜನೆ, 1983ರವರೆಗೆ ಅಂದರೆ 20 ವರ್ಷಗಳ ಕಾಲ, ಕಾಂಗ್ರೆಸ್ ಸರ್ಕಾರ ಇರುವಾಗ ಪ್ರಾರಂಭವೇ ಆಗಲಿಲ್ಲ, 1983ರಲ್ಲಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿ ಬಂದ ಮೇಲೆ, ಈ ಯೋಜನೆಗೆ ಚಾಲನೆ ಸಿಕ್ಕಿತು. ದಿವಂಗತ ಜೆ.ಹೆಚ್. ಪಟೇಲ್ ರವರು ಮುಖ್ಯಮಂತ್ರಿಯಾಗಿರುವಾಗ, ಈ ಡ್ಯಾಮಿನ ಕಟ್ಟಡವನ್ನು ಪೂರ್ತಿಗೊಳಿಸುವಂತಹ ಕಾರ್ಯವನ್ನು ಅವರು ಮಾಡಿದರು. ಅದರ ನಂತರದಲ್ಲಿ ನಮ್ಮ ಸನ್ಮಾನ್ಯ ಬೊಮ್ಮಾಯಿಯವರು ನೀರಾವರಿ ಮಂತ್ರಿಗಳಾದ ಮೇಲೆ, ಕಳೆದ 6–8 ವರ್ಷಗಳಿಂದ ಈ ಯೋಜನೆಗೆ ಅತ್ಯಂತ ವೇಗವಾಗಿ ಚಾಲನೆ ಕೊಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆ ಭಾಗದ ಸಂತ್ರಸ್ತರಗೋಳು, ಅದನ್ನು ಅನುಭವಿಸಿದವರಿಗೇ ಗೊತ್ತು. ಜಮೀನು ಕಳೆದು ಕೊಂಡವರ ಕಷ್ಟ ಅವರಿಗೇ ಗೊತ್ತು. ಇಡೀ ರಾಜ್ಯದಲ್ಲಿ ಯಾವುದಾದರೂ ಒಂದು ಜಿಲ್ಲಾ ಮುಖ್ಯ ಕೇಂದ್ರ ಮುಳುಗಡೆಯಾಗಿದ್ದರೆ, ಅದು ಬಾಗಲಕೋಟೆ ಎನ್ನುವುದನ್ನು

ನಾನು ನೆನಪಿಸುವುದಕ್ಕೆ ಬಯಸುತ್ತೇನೆ. ಮೊದಲಿಗೆ ಇಡೀ ಬಾಗಲಕೋಟೆಯನ್ನು ಸ್ಥಳಾಂತರ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟರು. ತದನಂತರ 519.6ಕ್ಕೆ ನೀರು ನಿಂತಾಗ 521 ರವರೆಗೆ ಮುಳುಗಡೆಯಾಯಿತು. ಆದರೆ ಅದರ ಪರಿಣಾಮ ಇಡೀ ಊರಿನಲ್ಲಿ ಅದು ಬಹಳಷ್ಟು ಆಗಿ, ಕಟ್ಟಡಗಳೆಲ್ಲಾ ಬೀಳುವಂತಹ ಪ್ರಸಂಗ ಬಂದಾಗ, ನಾವು ಹೋರಾಟ ಮಾಡಿದೆವು. ಕಾಂಗ್ರೆಸ್‌ನವರು ಮಂತ್ರಿಗಳ ಒಂದು ನಿಯೋಗವನ್ನು ಮಾನ್ಯ ಎಸ್.ಎಂ. ಕೃಷ್ಣ ರವರು ಮುಖ್ಯಮಂತ್ರಿಗಳಿದ್ದಾಗ ಕಳುಹಿಸಿದರು. ಆಗ ಅವರು 638 ಕೋಟಿ ರೂ.ಗಳ ಪ್ಯಾಕೇಜ್ ಅನ್ನು ಘೋಷಣೆ ಮಾಡಿದರು. ಆದರೆ ಅವರ ಕಾಲದಲ್ಲಿ ಒಂದು ರೂಪಾಯಿಯೂ ಸಹ ಬರಲಿಲ್ಲ. ನಮ್ಮ ಸಮ್ಮಿಶ್ರ ಸರ್ಕಾರ ಬಂದಾಗ ಈ ಯೋಜನೆಗೆ ಮಾನ್ಯ ಈಶ್ವರಪ್ಪನವರು – ಇದ್ದಾಗ ಚಾಲನೆ ಸಿಕ್ಕಿತು. ಮಾನ್ಯ ಬೊಮ್ಮಾಯಿಯವರು 2008ರಿಂದ ಮಂತ್ರಿಗಳಾಗಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ಸಾಕಷ್ಟು ಪರಿಹಾರವನ್ನು ಕೊಟ್ಟಿದ್ದಾರೆ. ಅವರು 523ರ compensation ಸುಮಾರು 177 ಕೋಟಿ ರೂ.ಗಳನ್ನು ಕೊಟ್ಟರು. ಹಿಂದಿನ 20 ವರ್ಷಗಳ ಏನೊಂದು ಹಳೆಯ compensation ಪ್ರಕರಣಗಳು ಇದ್ದವೋ, ಲೋಕ್ ಅದಾಲತ್ ಮೂಲಕ ಕೋರ್ಟ್‌ನಲ್ಲಿ ಆ ಕೇಸ್‌ಗಳನ್ನು ಮುಗಿಸಿ, ಅಸಲು ಮತ್ತು ಬಡ್ಡಿ ಸೇರಿ ಒಟ್ಟು 217 ಕೋಟಿ ರೂ. ಗಳ compensation ಅನ್ನು ನೀಡಿ, ಆ ಬಾಕಿಯನ್ನು ಪೂರ್ಣ ತೀರಿಸಿದಂತಹ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲುತ್ತದೆ. 523 ರವರೆಗಿನ 177 ಕೋಟಿ ರೂ.ಗಳ compensation ಕೂಡ ಈಗಾಗಲೇ ನಾವು ವಿತರಣೆ ಮಾಡಿದ್ದೇವೆ. ಈಗ unit-2 ರದ್ದು 550 ಕೋಟಿ ರೂ. ಗಳಿಗೆ ಟೆಂಡರ್ ಆಗಿದೆ. ಇಷ್ಟರಲ್ಲೇ ಅದಕ್ಕೆ ಅಡಿಗಲ್ಲು ಇಟ್ಟು, 7600 ಸಂತ್ರಸ್ತರಿಗೆ ಸೈಟ್ ಕೊಡುವಂತಹ ಕಾರ್ಯ ಇನ್ನು ಕೆಲವೇ ದಿನಗಳಲ್ಲಿ ಪ್ರಾರಂಭವಾಗುತ್ತದೆ. ಅದರ ನಂತರದಲ್ಲಿ 524.260 ಡ್ಯಾಮ್ height ಆಯಿತು. ಕನಿಷ್ಠ 527 ರವರೆಗೆ ಸಿಟಿಗೆ ನೀರು ಬರುತ್ತದೆ. Affected area ಆಗುತ್ತದೆ. ಅದಕ್ಕೂ ಕೂಡ ನಾವು ಸುಮಾರು 3600 ಎಕರೆ ಜಮೀನನ್ನು NA ಮಾಡಬಾರದು ಎಂದು ಹಾಗೆಯೇ

ಇಟ್ಟಿದ್ದೇವೆ. ಅದಕ್ಕೆ ಈ 4[1] issue ಆಗಬೇಕು. ಇನ್ನು ಕೆಲವೇ ದಿನಗಳಲ್ಲಿ ಆ 4[1] ಆಗುತ್ತದೆ. ಏಕೆಂದರೆ, ರೈತರು ಜಮೀನನ್ನು ಕೊಡುವುದಿಲ್ಲ. ಆ ಜಮೀನು ಬಿಟ್ಟರೆ ನಮಗೆ ಊರು ಕಟ್ಟುವುದಕ್ಕೆ ಬೇರೆ ಜಮೀನಿಲ್ಲ. ಇದೇನು ಯಾವುದೇ ಕಾರ್ಖಾನೆ ಮಾಡುವುದಕ್ಕಲ್ಲ, ಮತ್ತೊಂದಕ್ಕಲ್ಲ, ಆ ಜಮೀನು ಬಿಟ್ಟರೆ, ನಮ್ಮ ಬಾಗಲಕೋಟೆ ಸ್ಥಳಾಂತರ ಮಾಡಲಿಕ್ಕೆ ಬೇರೆ ಜಮೀನು ಇಲ್ಲ. ಒಂದು ವರ್ಷದಿಂದ ಆ ಜಮೀನನ್ನು ನಾವು NA ಆಗಬಾರದು ಎಂದು ಇಟ್ಟುಕೊಂಡು ಕುಳಿತಿದ್ದೇವೆ. ಆ 3600 ಎಕರೆಯನ್ನು 4[1] issue ಮಾಡಿ Unit-3ಗೆ ಚಾಲನೆಯನ್ನು ಕೊಡುತ್ತೇವೆ. ಎನ್ನುವಂತಹ ಭರವಸೆಯನ್ನು ನಮ್ಮ ಮುಖ್ಯಮಂತ್ರಿಗಳು ಮತ್ತು ನೀರಾವರಿ ಮಂತ್ರಿಗಳು ಕೊಟ್ಟಿದ್ದಾರೆ. ಆದಷ್ಟು ಬೇಗ ಆ ಕೆಲಸ ಆಗಬೇಕು. 524.260 ಆದಾಗ ಕನಿಷ್ಠ 527ರವರೆಗೆ ಇದು ಆಗಲೇಬೇಕು. ಏಕೆಂದರೆ, 519.6 ಆದಾಗ 523 ರವರೆಗೆ acquire ಮಾಡಿಕೊಂಡಿದ್ದೇವೆ, affected area ಎಂದು ತಿಳಿದುಕೊಂಡು ಮಾಡಿದ್ದೇವೆ. ಆ ದೃಷ್ಟಿಯಲ್ಲಿ ಇದೂ ಆಗಬೇಕು. ಇನ್ನೊಂದು ಪ್ರಮುಖವಾದ ಅಂಶ ಏನೆಂದರೆ, ನಮ್ಮ ಬಾಗಕೋಟೆ 8–10 ತುಂಡಾಗಿ ಹೋಗಿತ್ತು. ಒಂದೊಂದು ವಾರ್ಡ್ ಆಗಿ ಹರಿದು ಹಂಚಿ ಹೋಗಿತ್ತು ನಮ್ಮ PWD ಸಚಿವರಾದ ಸನ್ಮಾನ್ಯ ಉದಾಸಿಯವರು 110 ಕೋಟಿ ರೂ.ಗಳನ್ನು ಖರ್ಚು ಮಾಡಿ, ಗದ್ದನಗೇರಿ ಕ್ರಾಸ್ ಮುಖಾಂತರ ಬೇವಿನಮಟ್ಟಿ ಕ್ರಾಸ್‌ನವರೆಗೆ 15 ಕಿ.ಮೀ. ನಾಲ್ಕು ದೊಡ್ಡ ದೊಡ್ಡ ಬ್ರಿಡ್ಜ್‌ಗಳನ್ನು ಮಾಡಿದರು. ಇದರಿಂದಾಗಿ ಬಾಗಲಕೋಟೆ ಮೊದಲಿನ ಹಾಗೆ ಒಂದಾಗಿರುವುದಕ್ಕೆ ಸಾಧ್ಯವಾಯಿತು. ಆ ನಿಟ್ಟಿನಲ್ಲಿ ಮುಖ್ಯಮಂತ್ರಿಗಳನ್ನು ಮತ್ತು ನೀರಾವರಿ ಸಚಿವರಾದ ಬೊಮ್ಮಾಯಿ ಯವರನ್ನು ಮತ್ತು ಲೋಕೋಪಯೋಗಿ ಇಲಾಖೆಯ ಸಚಿವರಾದ ಹಿರಿಯರಾದ ಉದಾಸಿಯವರನ್ನು ನಾನು ತುಂಬು ಹೃದಯದಿಂದ ಅಭಿನಂದನೆ ಸಲ್ಲಿಸುವುದಕ್ಕೆ ಬಯಸುತ್ತೇನೆ. ಆ ಭಾಗದ ಜನ ಈ ಕೆಲಸ ಮಾಡಿದ್ದನ್ನು ಎಂದಿಗೂ ಮರೆಯುವುದಿಲ್ಲ ಎಂದು ನಾನು ಹೇಳುತ್ತೇನೆ. ಸುಮಾರು ಅನೇಕ rehabilitation centerಗಳಿವೆ ಅವುಗಳಲ್ಲಿ ಮೂಲಭೂತ

ಸೌಕರ್ಯಗಳಿರಲಿಲ್ಲ. ಅದಕ್ಕೂ ಕೂಡ ಚಾಲನೆಯನ್ನು ಕೊಟ್ಟಿದ್ದಾರೆ. ಅದರೆ ಅದು ಸಂಪೂರ್ಣವಾಗಬೇಕು. ಒಮ್ಮೆ ಸಂಪೂರ್ಣವಾಗಿ ಅದನ್ನು ಅಭಿವೃದ್ಧಿ ಮಾಡಿ, ಅದನ್ನು ಗ್ರಾಮ ಪಂಚಾಯಿತಿಗೆ hand over ಮಾಡುವಂತಹ ಕೆಲಸವನ್ನು ಆದಷ್ಟು ಬೇಗ ಮಾಡಬೇಕು. 527ರ 3600 ಎಕರೆ ಜಮೀನಿನ 4[1] ಆಗಬೇಕು. 72 ಕೋಟಿ ರೂ. ಗಳದ್ದು ಕುಡಿಯುವ ನೀರಿನ ಯೋಜನೆ ಇತ್ತು. ನಿನ್ನೆಯೇ ಅದೂ ಕೂಡ ಅನುಮೋದನೆಯಾಗಿದೆ. Unit-1ರ ಅಭಿವೃದ್ಧಿಗೆ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ಒಟ್ಟಾರೆಯಾಗಿ ನಮ್ಮ ಸರ್ಕಾರದ ಬಂದ ಮೇಲೆ, ಈ 2008ರಿಂದ ಈ ಯೋಜನೆ ಅತ್ಯಂತ ವೇಗವಾಗಿ ಮುಗಿಯುತ್ತಿದೆ. ಈಗ ವಿರೋಧ ಪಕ್ಷದ ನಾಯಕರು, ತಮ್ಮ ಪಾಲಿನ ನೀರನ್ನು ಬಳಸಿಕೊಂಡಿಲ್ಲ ಎಂದು ಹೇಳಿದರು.. ಇನ್ನು ಮೂರು ವರ್ಷಗಳಲ್ಲಿ, ಈಗ ಏನೇನು ಅವರು foundation ಹಾಕಿದ್ದಾರೋ, ಇನ್ನು ಮೂರು ವರ್ಷಗಳಲ್ಲಿ ಆ ಎಲ್ಲಾ ಜಮೀನುಗಳಿಗೂ ನೀರು ಹೋಗುವಂತಹ ಒಂದು ವ್ಯವಸ್ಥೆಯಾಗುತ್ತದೆ ಎಂದು ಮೊನ್ನೆ ನಮ್ಮ ಸಚಿವರು ಹೇಳಿದರು. ಆ ನಿಟ್ಟಿನಲ್ಲಿ ನಮ್ಮ ಸರ್ಕಾರಕ್ಕೆ ನಾವು ಎಷ್ಟು ಅಭಿನಂದನೆಗಳನ್ನು ಸಲ್ಲಿಸಿದರೂ ಕೂಡ ಕಡಿಮೆಯೇ ಎನ್ನುವಂತಹ ಮಾತನ್ನು ಈ ಸಂರ್ಭದಲ್ಲಿ ಹೇಳುತ್ತೇನೆ. ಈ ವಿಷಯ ಪ್ರಸ್ತಾವ ಮಾಡಿದಂತಹ ವಿರೋಧ ಪಕ್ಷದ ನಾಯಕರು ಇವತ್ತು ಸದನದಲ್ಲಿ ಇರಬೇಕಾಗಿತ್ತು. ಅವರ ಎದುರಿಗೇ ಈ ಅನೇಕ ವಿಚಾರಗಳನ್ನು ಹೇಳಬೇಕೆಂದಿದ್ದೆ. ಆದರೆ ಅವರೂ ಕೂಡ ಇವತ್ತು ಇಲ್ಲ. ಇವತ್ತು ಅವರು ಹೋಗಿದ್ದಾರೆ. ಎಲ್ಲಾ ಕೆಲಸಗಳು ಇನ್ನೂ ಕೂಡ ಆಗಬೇಕಾಗಿದೆ. ಮಾನ್ಯ ಸಿದ್ದು ಸವದಿಯವರು ಸವಳು ಜವಳು ಭೂಮಿ ಬಗ್ಗೆ ಹೇಳಿದರು. ಮೊದಲನೆ ಬಾರಿಗೆ ಹಣ ಅದಕ್ಕೂ ಕೂಡ ಇವತ್ತು ಬಂದಿದೆ. ಕೇಂದ್ರ ಸರ್ಕಾರದಿಂದ ಸವಳು ಜವಳಿಗೆ ಹಣ ಬಂದಿದೆ. ಅದು ಮೊದಲು ಇರಲಿಲ್ಲ. ಯಾರ ಜಮೀನು ಸವಳು ಜವಳು ಆಗುತ್ತದೋ, ಅದಕ್ಕೆ ಒಂದು ಪೈಸೆಯನ್ನೂ ಕೊಟ್ಟಿರಲಿಲ್ಲ. ಈಗ ಸಾವಿರಾರು ಕೋಟಿ ರೂ.ಗಳಾದರೂ ಕೂಡ ಅದಕ್ಕೆ ಹಣ ತಂದು, ಎಲ್ಲಾ ಕ್ಷೇತ್ರಗಳಿಗೂ ಹಣವನ್ನು ಕೊಡುವಂತಹ ವ್ಯವಸ್ಥೆಯಾಗುತ್ತಿದೆ.

ಆ rehabilitation centers ಕೂಡ ಅಭಿವೃದ್ಧಿಯಾಗುತ್ತಿದೆ. ಆದಷ್ಟು ನಾಳೆ ಇನ್ನು 8–10 ದಿವಸಗಳಲ್ಲಿ ತಿಮ್ಮಾಪುರ ಲಿಫ್ಟ್ ಇರಿಗೇಷನ್ ಮುಗಿಯುತ್ತಿದೆ. 50 ಸಾವಿರ ಎಕರೆಗಳಿಗೆ ನೀರಾವರಿ ಆಗುತ್ತಿದೆ. ಮಾನ್ಯ ಈಶ್ವರಪ್ಪನವರು ಇದ್ದಾಗ ನಾವೇ ಅದಕ್ಕೆ ಅಡಿಗಲ್ಲು ಇಟ್ಟಿದ್ದೆವು. ಈಗ ಇನ್ನೊಂದೆರಡು ವಾರದಲ್ಲಿ ಅದರ ಉದ್ಘಾಟನೆಯಾಗುತ್ತದೆ. 50 ಸಾವಿರ ಎಕರೆಗಳ ಆ ಪ್ರದೇಶ ನೀರಾವರಿಯಾಗುತ್ತಿದೆ. ಆ ದೃಷ್ಟಿಯಲ್ಲಿ, ಹೆಚ್ಚು ಕಡಿಮೆ ಏನೊಂದು ಸಮಸ್ಯೆಗಳನ್ನು ಇಟ್ಟುಕೊಂಡು ನಾವು ಹೋರಾಟ ಮಾಡಿದ್ದೆವೋ, ಆ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಕೊಟ್ಟಂತಹ ಸರ್ಕಾರದ ಯಾವುದಾದರೂ ಇದ್ದರೆ, ಅದು ಭಾರತೀಯ ಜನತಾ ಪಕ್ಷದ ಸರ್ಕಾರ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮತ್ತೊಮ್ಮೆ ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತಿಗೆ ವಿರಾಮ ಕೊಡುತ್ತೇನೆ.

ಶ್ರೀ ಕಟಕದೊಂಡ ವಿಠ್ಠಲ ಧೋಂಡಿಭಾ (ನಾಗಠಾಣ) :– ಮಾನ್ಯ ಉಪಾಧ್ಯಕ್ಷರೆ, ಕೃಷ್ಣಾ ಕೊಳ್ಳದ ಯೋಜನೆ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಅಭಿನಂದನೆಗಳನ್ನು ಹೇಳಬಯಸುತ್ತೇನೆ. ಇವತ್ತು ಈ ಯೋಜನೆ ಅಡಿಯಲ್ಲಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರಣ 734 ಟಿಎಂಸಿ ನೀರನ್ನು ಬಳಸಿಕೊಳ್ಳಬೇಕಾಗಿದೆ. ಈ ಉಪ ನದಿ ಭೀಮಾ ನದಿಯೂ ಸಹಿತ, ಇದರಲ್ಲಿ ಕೂಡಿಕೊಂಡಿದೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಹಾರಾಷ್ಟ್ರದಲ್ಲಿ ಹುಟ್ಟಿ 487 ಕಿ.ಮೀ. ಹರಿದು, ಕರ್ನಾಟಕದಲ್ಲಿ 247 ಕಿ.ಮೀ. ಹರಿಯುವಂತಹ ಈ ಭೀಮಾ ನದಿ ಇವತ್ತು ವಿನಾಶದ ಅಂಚಿನಲ್ಲಿದೆ. ಈ ಭೀಮಾ ನದಿ ಸಂಪೂರ್ಣ ಬತ್ತಿ ಹೋಗಿದೆ. ಇದಕ್ಕೆ ಕಾರಣ ಇವತ್ತು ಮಹಾರಾಷ್ಟ್ರ ಅನಧಿಕೃತವಾಗಿ ಹೆಚ್ಚು ನೀರು ಬಳಸಿಕೊಂಡಿದೆ. ಅದು ತನ್ನ ಪಾಲಿಗೆ ಬಂದಂತಹ ಈ ಬಚಾವತ್ ತೀರ್ಪಿನ ಪ್ರಕಾರ 95 ಟಿಎಂಸಿ ನೀರೇನು ಬರುತ್ತಿತ್ತೋ, ಆ ನೀರನ್ನು ಇವತ್ತು ಬಳಸಿಕೊಳ್ಳದೆ, ಅದಕ್ಕಿಂತ ಹೆಚ್ಚಿನ ನೀರನ್ನು ಅಂದರೆ 135 ಟಿಎಂಸಿ ನೀರನ್ನು ಮಹಾರಾಷ್ಟ್ರ ಇವತ್ತು ಬಳಸಿಕೊಂಡಿದೆ. ಇವತ್ತು ನಮ್ಮ ಭೀಮಾ ನದಿಗೆ ನಮ್ಮ ಬಾರ್ಡರ್‌ನಲ್ಲಿ ಉಬರಕ್ ಏನು ಬಂದು ಜಾಯಿಂಟ್ ಆಗುತ್ತದೆ, ಆ ಭೀಮಾ

ನದಿ, ಅದನ್ನು ಇವತ್ತು ಸಂಪೂರ್ಣವಾಗಿ ಬಂದ್ ಮಾಡಿ, ಭೀಮಾ ಸಿನ್ನಾ ಎನ್ನುವಂತಹ ಜೋಡಿ ಕಾಲುವೆಯನ್ನು ನಿರ್ಮಾಣ ಮಾಡಿ ಸುಮಾರು 35 ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಿ ನಮ್ಮ ಭೀಮಾ ನದಿ ಸಂಪೂರ್ಣ ಬತ್ತಲಿಕ್ಕೆ ಕಾರಣೀಕರ್ತರಾಗಿದ್ದಾರೆ.

ಬಹುಶಃ ಬಚಾವತ್ ಆಯೋಗದ ತೀರ್ಪಿನ ನಂತರ ಬ್ರಿಜೇಶ್ ಕುಮಾರ್‌ರವರು ಏನು ತೀರ್ಮಾನವನ್ನು ಕೊಟ್ಟಿದ್ದಾರೆ. ಭೀಮಾ ನದಿಯನ್ನು ನೈಸರ್ಗಿಕವಾಗಿ ಹರಿಸಬೇಕು. ಅದಕ್ಕೆ ಸುಮಾರು ಪ್ರತಿ ದಿವಸ ೬೦ ರಿಂದ ೭೦ ಸಾವಿರ ಕ್ಯುಸೆಕ್ಸ್ ನೀರನ್ನು ಹರಿಸಬೇಕು ಎನ್ನುವಂಥ ಆದೇಶವನ್ನು ಕೊಟ್ಟಿದ್ದಾರೆ. ಆ ಆದೇಶವೇನಾಗಿದೆಯೆಂದರೆ, ಬಹುಶಃ ನೀವು ಕೊಯ್ನಾ ಡ್ಯಾಮ್‌ನಿಂದ ಈ ನೀರನ್ನು ಹರಿಸಬೇಕೆಂದು ತಪ್ಪಾಗಿದೆ, ನನಗನ್ನಿಸುತ್ತಿದೆ. ಅದು ತಪ್ಪಾಗಿ ಮಿಸ್ಟೇಕ್ ಆಗಿರಬಹುದೆಂದು. ಏಕೆಂದರೆ ಭೀಮಾ ನದಿಗೆ ನೀರು ಬರುವುದು ಉಜನಿ ಡ್ಯಾಮ್‌ನಿಂದ. ಉಜನಿ ಡ್ಯಾಮ್ ಇಷ್ಟು ಈ ತರಹವಾಗಿ ಕಟ್ಟಿದ್ದಾರಲ್ಲಾ, ಬಹುಶಃ ಇಡೀ ದೇಶದಲ್ಲೆ ಅಲ್ಲ, ಇಡೀ ಜಗತ್ತಿನಲ್ಲಿ ಅನ್–ಸೈಂಟಿಫಿಕ್ ರೀತಿಯಲ್ಲಿ ಡ್ಯಾಮ್‌ನ್ನು ಕಟ್ಟಿರುವುದು ಯಾವುದಾದರೂ ಇದ್ದರೆ ಅದು ಉಜನಿ ಡ್ಯಾಮ್ ಎಂದು ಹೇಳಬಯಸುತ್ತೇನೆ. ಅಲ್ಲಿ ಲೈವ್ ಸ್ಟೋರೇಜ್ ಕೇವಲ ೫೭ ಟಿ.ಎಂ.ಸಿ. ನೀರಿದ್ದರೆ ಡೆಡ್ ಸ್ಟೋರೇಜ್ ೬೦ ಟಿ.ಎಂ.ಸಿ. ನೀರಿದೆ. ಅದಕ್ಕಾಗಿ ನನ್ನ ವಿನಂತಿಯೇನೆಂದರೆ, ಇವತ್ತು ಮಾನ್ಯ ನೀರಾವರಿ ಸಚಿವರು ನಮ್ಮ ಭಾಗದಲ್ಲಿ ಅದರಲ್ಲಿಯೂ ವಿಶೇಷವಾಗಿ ವಿಜಾಪುರ ಜಿಲ್ಲೆಗೆ ಈ ಕೃಷ್ಣಾ ಕೊಳ್ಳದ ಯೋಜನೆಗಳನ್ನು ಅತ್ಯಂತ ಯಶಸ್ವಿಯಾಗಿ ರೂಪಿಸಿ ತನ್ನದೇ ಆದಂಥ ಒಂದು ಸಾಮರ್ಥ್ಯವನ್ನು ಮೆರೆದಂಥ ಸನ್ಮಾನ್ಯ ಬಸವರಾಜು ಬೊಮ್ಮಾಯಿಯವರಲ್ಲಿ ನನ್ನ ವಿನಂತಿಯೇನೆಂದರೆ, ಆ ಬತ್ತಿ ಹೋದಂಥ ಭೀಮಾ ನದಿಯನ್ನು ಇವತ್ತು ೮೯ ಕಿ.ಮೀ. ಏನು ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿ ಭಾಗದಲ್ಲಿ ಹರಿಯುತ್ತಿದೆ, ಇದರ ಸುತ್ತಮುತ್ತ ಸುಮಾರು ೨೦ ಕಿ.ಮೀ. ಈಚೆ ಮತ್ತು ೨೦ ಕಿ.ಮೀ. ಆಚೆಗೆ ಅಂದರೆ ಅಚ್ಚುಕಟ್ಟು ಪ್ರದೇಶದಲ್ಲಿ ಇವತ್ತಿನ ದಿವಸ ಒಂದು ಸಾವಿರ ಫೀಟ್ ಬೋರ್ ತೆಗೆದರೂ ಕೂಡ ನೀರು ಸಿಗುತ್ತಿಲ್ಲ. ಆದುದರಿಂದ ಇವತ್ತು ಅಂಥ

ಬತ್ತಿ ಹೋದ ನದಿಯನ್ನು ಸಂಪೂರ್ಣವಾಗಿ ಜೀವಂತ ಮಾಡುವುದಕ್ಕೆ ಇವತ್ತು ನಮ್ಮ ಕರ್ನಾಟಕ ಸರ್ಕಾರ ಯಾವ ಯಾವ ಯೋಜನೆಗಳನ್ನು, ಅಂದರೆ ಮಾನ್ಯ ಬ್ರಿಜೇಶ್‌ಕುಮಾರ್‌ರವರು ಹೇಳಿದಂತೆ ನೈಸರ್ಗಿಕ ಹರಿವು ೬೦ ಸಾವಿರದಿಂದ ೭೦ ಸಾವಿರ ಕ್ಯುಸೆಕ್ಸ್ ನೀರು ಪ್ರತಿ ದಿವಸ ಹರಿಸಬೇಕೆಂಬ ಯೋಜನೆಯನ್ನು ನೀವು ಬರುವಂಥ ದಿನಗಳಲ್ಲಿ ಕೋರ್ಟಿಗೆ ಹೋಗಿ. ಇದಕ್ಕೆ ಪ್ರೈವೇಟಾಗಿ ಭೀಮಾ ನದಿಯ ಹಿತರಕ್ಷಣಾ ಸಮಿತಿಯಿಂದ ಪಿ.ಐ.ಎಲ್. ಸಹಿತಿ ಹಾಕಿದ್ದಾರೆ, ಆದರೆ ಕರ್ನಾಟಕ ಸರ್ಕಾರ–ಸಿ.ಡ್ಬ್ಲ್ಯುಸಿ. ಗೆ ಪರ್ಮಿಷನ್ ಕೇಳಬೇಕು. ಇದನ್ನು ತಾವು ಮಾಡಿದರೆ ನಮಗೆ ಮಹಾನ್ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಭೀಮಾ ನದಿಯನ್ನು ಮತ್ತೆ ಜೀವಂತವಾಗಿ ಇಡುವು ದಕ್ಕೆ ಬಸವರಾಜ ಬೊಮ್ಮಾಯಿಯವರು ಕಾರಣೀಕರ್ತರಾಗುತ್ತಾರೆ ಎನ್ನುವಂಥ ಒಂದು ಭಾವನೆಯನ್ನು ಇಟ್ಟುಕೊಂಡು ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಯೇನೆಂದರೆ, ತಾವು ಕರ್ನಾಟಕ ಸರ್ಕಾರದಿಂದ ಇವತ್ತು ಸಿ.ಡಬ್ಲ್ಯುಸಿ. ಗೆ ತಾವು ಕೋಟಿಗೆ ಏನೇನು ಬೇಕೋ ಅದನ್ನು ಸೇರಿಸಿ ಮನವಿಯನ್ನು ಸಲ್ಲಿಸಬೇಕೆಂದು ನಾನು ಈ ಸದನದ ಮೂಲಕ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಈಗಾಗಲೇ ಪ್ರಸ್ತಾವ ಮಾಡಿದಂಥ ಸಂದರ್ಭದಲ್ಲಿ ಸನ್ಮಾನ್ಯ ಬಗಲಿಯವರು ಹೇಳಿದರು. ಮಾನ್ಯ ಬಗಲಿಯವರು ನನ್ನ ಪಕ್ಕದ ಕ್ಷೇತ್ರವಾದ ಇಂಡಿ ತಾಲ್ಲೂಕಿನವರು. ಇಂಡಿ ತಾಲ್ಲೂಕು ಅತ್ಯಂತ ಭೀಕರ ಬರಗಾಲಕ್ಕೆ ತುತ್ತಾದಂಥ ಕ್ಷೇತ್ರ. ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲಕ್ಕೆ ತುತ್ತಾದಂಥ ಕ್ಷೇತ್ರ ಯಾವುದಾದರೂ ಇದ್ದರೆ ಅದು ಇಂಡಿ ತಾಲ್ಲೂಕು. ಇಂಡಿ ತಾಲ್ಲೂಕಿಗೆ ಬರಬೇಕಾದಂಥ ಮೂರು ಏತ ನೀರಾವರಿಗಳು. ಅಂದರೆ ಗುತ್ತಿ ಬಸವಣ್ಣ ಏತನೀರಾವರಿ. ಚಿಮ್ಮಲಗಿ ಏತ ನೀರಾವರಿ. ಮುಳುವಾಡ ಏತ ನೀರಾವರಿ. ಈ ಏತ ನೀರಾವರಿಯಲ್ಲಿತಕ್ಕಂಥ ಮೂಲ ನಕಾಶೆ, ಬಾಳೆಕುಂದ್ರಿಯವರು ಏನು ಮೂಲ ನಕಾಶೆಗಳನ್ನು ಮಾಡಿದ್ದರೋ ಆ ನಕಾಶೆಯ ಪ್ರಕಾರ ಇವತ್ತು ೫ ಟಿ.ಎಂ.ಸಿ. ನೀರು ಗುತ್ತಿ ಬಸವಣ್ಣ ಎತ ನೀರಾವರಿ, ೫ ಟಿ.ಎಂ.ಸಿ. ನೀರು ಚಿಮ್ಮಲಗಿ ಏತ ನೀರಾವರಿ, ೫ ಟಿ.ಎಂ.ಸಿ. ನೀರು ಮುಳುವಾಡ ಏತ ನೀರಾವರಿ, ಈ ಎಲ್ಲಾ ಏತ ನೀರಾವರಿಗಳಲ್ಲಿ ಬರತಕ್ಕಂಥ ೨ ಟಿ.ಎಂ.ಸಿ.

ನೀರನ್ನು ಹಿಪ್ಪರಗಿ ಏತ ನೀರಾವರಿಯಿಂದ ತೆಗೆದು ೧೭ ಟಿ.ಎಂ.ಸಿ. ಒಟ್ಟು ನೀರನ್ನು ಇವತ್ತು ಕೊಪ್ಪಳ ಯೋಜನೆ ಎನ್ನುವಂಥ ಹೊಸ ಯೋಜನೆಯನ್ನು ಆ ಮೂಲ ನಕಾಶೆಯಲ್ಲಿ ತಿದ್ದುಪಡಿ ಮಾಡಿ ಇವತ್ತು ಅಲ್ಲಿ ಬೇರೆ ಯೋಜನೆಯನ್ನು ಮಾಡಿದ್ದಾರೆ ಆಲಮಟ್ಟಿಯಲ್ಲಿ. ಅದಕ್ಕಾಗಿ ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಅತ್ಯಂತ ಭೀಕರ ಬರಗಾಲಕ್ಕೆ ಯಾವತ್ತೂ ನೀರಾವರಿ ಆಗದಂಥ ಕ್ಷೇತ್ರ ಯಾವುದಾದರೂ ಇದ್ದರೆ ಅದು ಇಂಡಿ ತಾಲ್ಲೂಕಿನ ಚಡಚಾಣದ ಳಿಳ ಹೋಬಳಿಗಳು. ಇವು ನನ್ನ ಕ್ಷೇತ್ರಕ್ಕೆ ಬರುತ್ತವೆ. ಇವತ್ತು ಚಿಮ್ಮಲಗಿ ಏತ ನೀರಾವರಿಯನ್ನು ಇವತ್ತು ನಾಗಠಾಣ ನಾಲಾ ಎನ್ನುವಂಥ ಯೋಜನೆ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಇದು ವಿಜಾಪುರ ತಾಲ್ಲೂಕಿನ ಮಾತ್ರ ಸೀಮಿತವಾಗಿದೆ, ಅದನ್ನು ಇಂಡಿ ತಾಲ್ಲೂಕಿನ ನನ್ನ ಕ್ಷೇತ್ರಕ್ಕೆ, ಅಂದರೆ ಚಡಚಾಣತನಕ ಚಡಚಾಣ ಹಳ್ಳಕ್ಕೆ ಕೂಡುವಂಥ ಮೂಲ ನಕಾಶೆ ಏನಿತ್ತೋ ಅದರ ಪ್ರಕಾರ ಇವತ್ತು ಚಿಮ್ಮಲಗಿ ಏತ ನೀರಾವರಿಯನ್ನು ಆ ಮೂಲ ನಕಾಶೆ ಪ್ರಕಾರ ಇವತ್ತು ೨೦ ಟಿ.ಎಂ.ಸಿ. ನೀರನ್ನು ಅದಕ್ಕೆ ಏನು ಜೋಡಣೆಯನ್ನು ಮಾಡಿದ್ದಾರೆ, ಅದು ಮೊದಲು ೨೫ ಟಿ.ಎಂ.ಸಿ. ನೀರಿತ್ತು. ಆ ೫ ಟಿ.ಎಂ.ಸಿ. ನೀರನ್ನು ಜೊತೆಗೆ ಮುಳವಾಡ ಏತ ನೀರಾವರಿಯನ್ನು ಕೊಂಕಣಗಾವಿಗೆ ಏನು ಬರುತ್ತಿತ್ತು, ಅದನ್ನು ಮೂಲ ನಕಾಶೆ ಪ್ರಕಾರ ೫ ಟಿ.ಎಂ.ಸಿ. ನೀರನ್ನು, ಜೊತೆಗೆ ಈ ಗುತ್ತಿ ಬಸವಣ್ಣ ಏತ ನೀರಾವರಿಯನ್ನು ಕೊನೆಯ ಮಹಾರಾಷ್ಟ್ರದ ಗಡಿ ಹಳ್ಳಿ ರೇವತಗಾಂವಗೆ ಏನು ಕೂಡಬೇಕಾಗಿತ್ತೋ ಅದರ ೫ ಟಿ.ಎಂ.ಸಿ. ನೀರನ್ನು ಸನ್ಮಾನ್ಯ ಸಚಿವರು ಇವತ್ತು ನಮ್ಮ ಭಾಗಕ್ಕೆ ಕೊಟ್ಟು ಖಾಯಂ ಬರಗಾಲ ಪೀಡಿತವಾದಂಥ ಇಂಡಿ ತಾಲ್ಲೂಕನ್ನು ತಾವು ಉದ್ಧಾರ ಮಡುತ್ತೀರಿ ಎನ್ನುವಂಥ ವಿಶ್ವಾಸವನ್ನು ವ್ಯಕ್ತಮಾಡುತ್ತಾ, ಇದರ ಜೊತೆಗೆ ಇವತ್ತು ಕೆರೆ ನೀರು ತುಂಬುವಂಥ ಯೋಜನೆ ಬಗ್ಗೆ ಹೇಳಬೇಕೆಂದರೆ, ಪ್ರಥಮ ಹಂತದ ಯೋಜನೆಯನ್ನು ಇವತ್ತು ಸಂಪೂರ್ಣವಾಗಿ ಪ್ರಾರಂಭವಾಗುವುದಕ್ಕೆ ಕಾರಣೀಕರ್ತರಾದಂಥ ಮಾನ್ಯ ಸಚಿವರಿಗೂ ಮತ್ತು ನಮ್ಮ ಸರ್ಕಾರಕ್ಕೂ ಅಭಿನಂದನೆಗಳನ್ನು

ಹೇಳುತ್ತಾ, ಎರಡನೆಯ ಹಂತದ ಯೋಜನೆಯಲ್ಲಿ ಈಗಾಗಲೇ ಅಣಚಿ ಪ್ಯಾಕೇಜ್ ಪ್ರಾರಂಭವಾಗಿದೆ. ಮೂರನೆಯ ಹಂತದ ಯೋಜನೆ ಬಗ್ಗೆ ಹೇಳಬೇಕೆಂದರೆ, ತಾವು ಈ ಬಗ್ಗೆ ನೋಡಿದ್ದೀರಿ, ಇವತ್ತಿಗೂ ಕೂಡ ಟ್ಯಾಂಕರ್ ಮೂಲಕ ನೀರು ಕೊಡುವಂಥ ಕ್ಷೇತ್ರ ಇಡೀ ಕರ್ನಾಟಕ ರಾಜ್ಯದ ೨೨೪ ವಿಧಾನಸಭಾ ಕ್ಷೇತ್ರಗಳಲ್ಲಿ ಯಾವುದಾದರೂ ಇದ್ದರೆ ಅದು ನನ್ನ ಕ್ಷೇತ್ರ ಇವತ್ತು ಮೂರು ಕಡೆ ಟ್ಯಾಂಕರ್ ಮೂಲಕ ನೀರನ್ನು ಹಾಕುತ್ತಿದ್ದೇವೆ. ಇವತ್ತು ಅಂಥ ಸ್ಥಿತಿಯಲ್ಲಿರತಕ್ಕಂಥ ನಮ್ಮ ಕ್ಷೇತ್ರದ ಜನರಿಗೆ ತಾವು ಈ ಕೆರೆ ನೀರು ತುಂಬುವಂಥ ಹೊಳೆಸಂಕ ಪ್ಯಾಕೇಜ್ ಏನಿದೆ, ಆ ಹೊಳೆಸಂಕ ಪ್ಯಾಕೇಜ್‌ನ್ನು ದಯಮಾಡಿ ತಾವು ಮಾಡಿಕೊಡಬೇಕು. ಈಗಾಗಲೇ ಅದು ಟಿ.ಎ.ಸಿ. ಯಡಿಯಲ್ಲಿ ಬಂದಿದೆ. ಅದು ಈಗ ಟೆಕ್ನಿಕಲ್ ಅಡ್ವೈಸರಿ ಕಮಿಟಿ ಹತ್ತಿರವಿದೆ. ತಾವು ಇವತ್ತು ವಾಟರ್ ಅಲೋಕೇಷನ್‌ನ್ನು ಏನು ಕೇಳುತ್ತಿದ್ದೀರಿ, ಭೀಮಾ ನದಿಯೊಳಗೆ ನಮಗೆ ಬಹುಶಃ ೧೩ ಟಿ.ಎಂ.ಸಿ. ನೀರನ್ನು ಮಾತ್ರ ನಾವು ಉಪಯೋಗ ಮಾಡಿಕೊಂಡಿದ್ದೇವೆ, ಇನ್ನೂ ೨ ಟಿ.ಎಂ.ಸಿ. ನೀರನ್ನು ಬಳಕೆ ಮಾಡಿಕೊಳ್ಳಬೇಕಾಗಿದೆ. ನಮ್ಮ ಹಕ್ಕು ೧೫ ಟಿ.ಎಂ.ಸಿ. ನೀರನ್ನು ಭೀಮಾ ನದಿಯಲ್ಲಿ ನಾವು ಪಡೆದುಕೊಂಡಂಥ ನೀರಿನಲ್ಲಿ ೨ ಟಿ.ಎಂ.ಸಿ. ನೀರು ನಮಗೆ ಉಳಿಯುತ್ತದೆ. ನಮಗೆ ಬೇಕಾಗಿರುವುದು ಕೇವಲ ೦.೦೩ ಟಿ.ಎಂ.ಸಿ. ನೀರು ಬೇಕಾಗಿದೆ. ಅದಕ್ಕಾಗಿ ಮಾನ್ಯ ಸಚಿವರು ಹೊಳೆಸಂಕ ಕೆರೆ ನೀರು ತುಂಬುವಂಥ ಯೋಜನೆಯ ಬಗ್ಗೆ ಇವತ್ತು ತಾವು ಉತ್ತರ ಕೊಡುವಾಗ ಹೇಳಬೇಕೆಂದು ವಿನಂತಿ ಮಾಡಿಕೊಂಡು, ಬಹುಶ: 48 ವರ್ಷಗಳಿಂದ ಆಗದಂಥ ಯೋಜನೆಯನ್ನು ನಮ್ಮ ಸರ್ಕಾರ ಬಂದಮೇಲೆ ಈ ಯೋಜನೆ ಜಾರಿಯಾಗಿ ಇವತ್ತು ಕೃಷ್ಣಾ ಕೊಳ್ಳಕ್ಕೆ ಇಂಥ ಮಹತ್ವ ಬಂದಿದೆ, ಇದರ ಜೊತೆ ಜೊತೆಗೆ ಇವತ್ತು ಬೆಳಗಾವಿಯ ಸುವರ್ಣಸೌಧದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಮಗೇನು ಈ ಕೃಷ್ಣಾ ಕೊಳ್ಳದ ಯೋಜನೆಗಳ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಂಥ ಘನ ಸರ್ಕಾರಕ್ಕೆ ನಾನು ಅಭಿನಂದನೆಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ರಮೇಶ್ ಬಾಳಪ್ಪ ಭೂಸನೂರು (ಸಿಂಧಗಿ) :- ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಭಾರತೀಯ ಜನತಾ ಪಕ್ಷ 2008 ರಲ್ಲಿ ಕರ್ನಾಟಕದಲ್ಲಿ ರಚನೆಯಾದಾಗ ಈ ದೇಶದ ರೈತರ ಬೆನ್ನೆಲುಬಾದಂಥ ರೈತರನ್ನು ಹಾಗೂ ರೈತರ ಹಿತವನ್ನು ಹಾಗೂ ರಾಷ್ಟ್ರದ ಹಿತವನ್ನು ಕಾಪಾಡಿಕೊಂಡು ಬರುವುದು ನಮ್ಮ ಆದ್ಯ ಕರ್ತವ್ಯವಾಗಿತು. ಈ ಕಾರಣಕ್ಕಾಗಿ ನೀರಾವರಿ ಖಾತೆಯನ್ನು ಹೊತ್ತಂಥ ಸನ್ಮಾನ್ಯ ಬಸವರಾಜ ಬೊಮ್ಮಾಯಿ ಯವರ ನೇತೃತ್ವದಲ್ಲಿ ಕೃಷ್ಣಾ ಜಲಭಾಗ್ಯ ನಿಗಮದಿಂದ ಬರದ ನಾಡು ಎಂಬ ಹಣೆಪಟ್ಟಿಯನ್ನು ಹೊತ್ತಂಥ ನನ್ನ ಸಿಂಧಗಿ ಕ್ಷೇತ್ರದ ಅನೇಕ ಹಳ್ಳಿಗಳು ಉತ್ತರ ಕರ್ನಾಟಕದ ಜೀವನಾಡಿಯಾದ ಕೃಷ್ಣ ನದಿಯ ಕಾಲುವೆಯ ಜಾಲದಿಂದ ನೀರಾವರಿಯ ಸೌಲಭ್ಯವನ್ನು ಕಲ್ಪಿಸಿ ಹಸಿರುನಾಡು ಎಂದು ಪರಿವರ್ತಿಸ ಲಾಗಿದೆ. ಈಗ ರೈತರು ನೀರಾವರಿ ಸೌಲಭ್ಯದಿಂದ ಸ್ವಾವಲಂಬಿಗಳಾಗಿದ್ದು ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದ ಕೃಷಿ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ರಸ್ತೆ ಸಂಪರ್ಕವು ಬಹಳ ಪ್ರಾಮುಖ್ಯವಾಗಿದೆ. ಇದನ್ನು ಜಾರಿಗೆ ತರಲು ಸುಮಾರು ಅಚ್ಚುಕಟ್ಟು ರಸ್ತೆಗಳನ್ನು ಇವತ್ತು ಮಂಜೂರು ಮಾಡಿ ಅನೇಕ ಗ್ರಾಮಗಳಲ್ಲಿ ಬರುವ ಅಚ್ಚುಕಟ್ಟೆ ರಸ್ತೆಗಳ ಕಾಮಗಾರಿಗಳು ಈಗಾಗಲೇ ಹಲವಾರು ಗ್ರಾಮಗಳಲ್ಲಿ ಭರದಿಂದ ಸಾಗಿದೆ. ಇದರ ಜೊತೆಗೆ ಈ ಕೃಷ್ಣ ನದಿ ಸುಮಾರು ೧೪೦೦ ಕಿ.ಮೀ. ಹರಿಯುವ ನದಿಯಾಗಿದೆ. ಈ ಕೃಷ್ಣಾ ನದಿಗೆ ಕರ್ನಾಟಕದಲ್ಲಿ ೫೨೩೬ ಕಿ.ಮೀ. ನಷ್ಟು ದೂರ ನಮ್ಮ ಕರ್ನಾಟಕದಲ್ಲಿ ಈ ನದಿ ಹರಿದಿದೆ. ಇವತ್ತು ಪೂರ್ಣ ಕೃಷ್ಣ ನದಿಯ ನೀರನ್ನು ಬಳಕೆ ಮಾಡಿ ಕೊಂಡಾಗ ಬಹುಶಃ ನನ್ನ ಕ್ಷೇತ್ರದಲ್ಲಿ ಇನ್ನು ೪೦ ಹಳ್ಳಿಗಳು ಉಳಿದಿವೆ, ಆ ಚಿಮ್ಮಲಗಿ ಏತ ನೀರಾವರಿಯಿಂದ ಸುಮಾರು ಈ ೪೦ ಹಳ್ಳಿಗಳಿಗೆ ನೀರಾವರಿ ಸೌಲಭ್ಯವನ್ನು ಕೊಟ್ಟರೆ ಇಡೀ ಕರ್ನಾಟಕ ರಾಜ್ಯದ ಭೂಪಟದಲ್ಲಿ ಸಂಪೂರ್ಣವಾಗಿ ನೀರಾವರಿಯಾದ ಕ್ಷೇತ್ರ ಯಾವುದಾದರೂ ಇದ್ದರೆ ಅದು ಸಿಂಧಗಿ ಕ್ಷೇತ್ರವೆಂದು ನಾನು ಹೆಮ್ಮೆಯಿಂದ ಹೇಳಬಹುದು. ಅದಕ್ಕಾಗಿ ಚಿಮ್ಮಲಗಿ ಏತ ನೀರಾವರಿಯ ಕಾಮಗಾರಿಯ ವೇಗವೇನಿದೆ, ಆ ವೇಗವನ್ನು

ಇನ್ನೂ ಹೆಚ್ಚಿಸಬೇಕು. ಇದಕ್ಕಾಗಿ ನೀರಾವರಿ ಸಚಿವರಾದ ಬಸವರಾಜ ಬೊಮ್ಮಾಯಿಯವರಲ್ಲಿ ನಾನು ವಿನಂತಿಯನ್ನು ಮಾಡುತ್ತಿದ್ದೇನೆ, ಚಿಮ್ಮಲಗಿ ಏತ ನೀರಾವರಿಯ ಕಾಮಗಾರಿಯ ವೇಗವನ್ನು ಹೆಚ್ಚಿಸಿ ಸಿಂಧಗಿ ಕ್ಷೇತ್ರ ನೂರಕ್ಕೆ ನೂರು ನೀರಾವರಿ ಕ್ಷೇತ್ರವೆಂಬ ಹಣೆಪಟ್ಟಿಯನ್ನು ತಂದುಕೊಡ ಬೇಕೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿ ಕೊಂಡು ಇಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಎಲ್ಲಾ ಹಿರಿಯರಿಗೂ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಜೈಹಿಂದ್.

ಶ್ರೀ **ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನರಿಬೋಳ್ (ಜೇವರ್ಗಿ)** :- ಮಾನ್ಯ ಉಪಾಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ರಾಜ್ಯ ಸರ್ಕಾರ ೨೦೦೮ ರಲ್ಲಿ ಅಧಿಕಾರಕ್ಕೆ ಬಂದ ಮೇಲೆ ವಿಶೇಷವಾಗಿ ನಮ್ಮ ಜೇವರ್ಗಿ ತಾಲ್ಲೂಕಿನ ಬಹಳಷ್ಟು ರೈತರ ಬಹುದಿನಗಳ ಬೇಡಿಕೆಯಾದಂಥ ಮಲ್ಲಾಬಾದ್ ಏತ ನೀರಾವರಿ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಸನ್ಮಾನ್ಯ ಸಚಿವರಾದ, ಹಿರಿಯರಾದ ಮಾನ್ಯ ಬಸವರಾಜ ಬೊಮ್ಮಾಯಿಯವರು ರೈತರು, ಮಠಾಧೀಶರುಗಳೆಲ್ಲರೂ ಹೋರಾಟ ಮಾಡಿದ್ದರು, ಇಂದಿನ ಸರ್ಕಾರದಲ್ಲಿ ಕೂಡ ಹೋರಾಟ ಮಾಡತಕ್ಕಂಥ ಪ್ರವೃತ್ತಿಯಲ್ಲಿ ಬಂದಂಥ ಸಂದರ್ಭದಲ್ಲಿ ಸನ್ಮಾನ್ಯ ಸಚಿವರಿಗೆ ಇವತ್ತು ಆ ಭಾಗದ ರೈತರರ ಬಗ್ಗೆ ಮನವರಿಕೆ ಮಾಡಿಕೊಟ್ಟಾಗ, ಇವತ್ತು ವಿಶೇಷವಾಗಿ ಗುಲ್ಬರ್ಗಾದಲ್ಲಿ ನಡೆದಂಥ ಸಚಿವ ಸಂಪುಟದಲ್ಲಿ ಈ ಒಂದು ಮಲ್ಲಾಬಾದ್ ಏತ ನೀರಾವರಿಯ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಂದಾಗಿದ್ದಾರೆ.

ಮಾನ್ಯ ಸಚಿವರಿಗೆ ಆ ಭಾಗದ ರೈತರ ಬಗ್ಗೆ ಮನವರಿಕೆ ಮಾಡಿಕೊಟ್ಟಾಗ ವಿಶೇಷವಾಗಿ ಗುಲ್ಬರ್ಗದಲ್ಲಿ ನಡೆದಂತಹ ಸಚಿವ ಸಂಪುಟದಲ್ಲಿ ಮಲ್ಲಾಬಾದ್ ಏತ ನೀರಾವರಿ ಯೋಜನೆಯನ್ನು ಜೇವರ್ಗಿಗೆ ಅಷ್ಟೇ ಅಲ್ಲ, ನಮ್ಮ ಇಡೀ ರಾಜ್ಯದಲ್ಲಿ ನೀರಾವರಿ ಯೋಜನೆಯನ್ನು ನೂರಕ್ಕೆ

ನೂರರಷ್ಟು ಅನುಷ್ಠಾನಕ್ಕೆ ತರುವಲ್ಲಿ ಈ ರಾಜ್ಯದ ಹಸಿರು ಕ್ರಾಂತಿ ಹರಿಕಾರ ಸನ್ಮಾನ್ಯ ಬಸವರಾಜ ಬೊಮ್ಮಾಯಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇಡೀ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳ ಜೊತೆಗೆ ನಮ್ಮ ಕೃಷ್ಣಾ ಮೇಲ್ದಂಡೆ ಯೋಜನೆ ಕೊನೆ ದಂಡೆಯಲ್ಲಿ ಬರುವುದರಿಂದ ಆ ಭಾಗದ ರೈತರಿಗೆ IBC ಮತ್ತು ಇಂಡಿ ಬ್ರಾಂಚ್ ಕೆನಾಲ್ ಆಗಿರಬಹುದು, ಮುಧೋಳ ಬ್ರಾಂಚ್ ಕೆನಾಲ್ ಮತ್ತು ಜೇವರ್ಗಿ ಬ್ರಾಂಚ್ ಕೆನಾಲ್ ಈ ಮೂರು ಪ್ರತ್ಯೇಕ ಕೆನಾಲ್‌ಗಳು ನಮ್ಮ ಕ್ಷೇತ್ರದಲ್ಲಿ ಬರುವುದರಿಂದ ರೈತರಿಗೆ ನೀರು ಸರಿಯಾಗಿ ಬಿಡುತ್ತಿಲ್ಲ. ಇವತ್ತು ಅದರ ಉದ್ದೇಶವೇನೆಂದರೆ ಈಗಾಗಲೇ ಮಾನ್ಯ ಬಸವರಾಜ ಬೊಮ್ಮಾಯಿಯವರು ೪,೧೦೦ ಕೋಟಿ ರೂಪಾಯಿಯಲ್ಲಿ ಮೂರು ಶಾಖಾ ಕಾಲುವೆಯನ್ನು re-modernization ಮಾಡುವುದರ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಈಗಾಗಲೇ ಹಣವನ್ನು ತಂದಿದ್ದಾರೆ. ಆದಷ್ಟು ಬೇಗ ಆ ಯೋಜನೆಗೆ ಟೆಂಡರನ್ನು ಕರೆದು ಇಡೀ ನಮ್ಮ ಕ್ಷೇತ್ರದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೆಳುತ್ತೇನೆ. ಅದಲ್ಲದೆ ನಮ್ಮ ತಾಲ್ಲೂಕಿನ ಕಬ್ಬು ಬೆಳೆಯುವಂತಹ ರೈತರಾಗಿರಬಹುದು, ಬೇರೆ ರೈತರಿಗಿರಬಹುದು/ ಅಚ್ಚುಕಟ್ಟು ರಸ್ತೆಗಳನ್ನು ಮಾಡುವುದಕ್ಕಾಗಿ ನಮ್ಮ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಕೊಟ್ಟಿದ್ದಕ್ಕಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ಎಸ್‌ಸಿಪಿ/ ಟಿಎಸ್‌ಪಿ ಯೋಜನೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಳಪಟ್ಟಿರುವಂತಹ ಒಂದೊಂದು ಗ್ರಾಮಗಳಿಗೆ, ಆ ಗ್ರಾಮದ ಎಸ್‌ಸಿ/ಎಸ್‌ಟಿ ಬಡವಾಣೆಯಲ್ಲಿ 30 ರಿಂದ 40 ಲಕ್ಷ ರೂಪಾಯಿಯಲ್ಲಿ ಮೂಲಭೂತ ಸೌಕರ್ಯವನ್ನು ಒದಿಸುವುದರ ಮೂಲಕ ಸಿ.ಸಿ. ರಸ್ತೆ ಮತ್ತು ಚರಂಡಿ ಮಾಡುವ ನಿಟ್ಟಿನಲ್ಲಿ ಕೂಡ ಮಾನ್ಯ ಸಚಿವರು ಹೆಚ್ಚಿನ ಆಸಕ್ತಿ ವಹಿಸಿರುವುದರಿಂದ ಮುಂದಿನ ದಿನಗಳಲ್ಲಿ ಮಲ್ಲಾಬಾದ್ ಏತ ನೀರಾವರಿ ಮೂರು ಲಿಫ್ಟ್‌ಗಳಲ್ಲಿ ಒಂದು ಲಿಫ್ಟ್ ಟೆಂಡರ್ ಆಗಿ ಅದು ಎರಡು–ಮೂರು ತಿಂಗಳುಗಳಲ್ಲಿ ಮುಗಿಯುವ ಹಂತದಲ್ಲಿದ್ದು, ಮುಂದಿನ ಎರಡು ಲಿಫ್ಟ್‌ಗಳಿಗೆ ಮಾನ್ಯ ಸಚಿವರು ಟೆಂಡರನ್ನು ಕರೆದಿದ್ದಾರೆ. ರೈತರಿಗೆ ನೀರನ್ನು ಒದಗಿಸುವ ನಿಟ್ಟಿನಲ್ಲಿ ಆ ಒಂದು

ಯೋಜನೆಯನ್ನು ಅತೀ ಶೀಘ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಇಲಾಖೆಯ ಅಧಿಕಾರಿಗಳಿಗೆ ಮಾನ್ಯ ಸಚಿವರು ಆದೇಶವನ್ನು ನೀಡಬೇಕು. ಮಲ್ಲಾಬಾದ್ ಏತ ನೀರಾವರಿಗೆ ಯಾವುದೇ ಅಡಿಗಲ್ಲು ಕಾರ್ಯಕ್ರಮವನ್ನು ಮಾಡದೇ ಇವತ್ತು ಎರಡು ಮತ್ತು ಮೂರನೇ ಹಂತದ ಟೆಂಡರ್ ಕರೆದಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಚಿವರು ಎರಡನೇ ಹಂತದ ಯೋಜನೆಗೆ ಅತೀ ಶೀಘ್ರವಾಗಿ ಅಡಿಗಲ್ಲು ಸಮಾರಂಭ ನೆರವೇರಿಸಿ, ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಒದಿಗಿಸಿಕೊಡಬೇಕೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ದೊಡ್ಡಣ್ಣಗೌಡರು ಮತ್ತು ಶ್ರೀಕಾಂತ್ ಕುಲಕರ್ಣಿಯವರು ಮೊನ್ನೆ ಮಾತನಾಡಿದ್ದಿರಿ. ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ clarification ಕೇಳಿ.

ಶ್ರೀ ಶ್ರೀಕಾಂತ್ ಸುಬ್ಬಾರಾವ್ ಕುಲರ್ಣಿ : ನನಗೆ ಎರಡೇ ನಿಮಿಷ ಸಮಯ ಕೊಟ್ಟರೆ, ಕೆಲವು ಅಂಶಗಳನ್ನು ಮರೆತಿದ್ದೆವು, ತಮ್ಮ ಮಂತ್ರಿಗಳ ಗಮನಕ್ಕೆ ತರುತ್ತೇವೆ, ಆಮೇಲೆ ಉತ್ತರ ಕೊಡಿ.

ಉಪಾಧ್ಯಕ್ಷರು : ಆಯಿತು ಮಾತನಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ : ಶ್ರೀಕಾಂತ್‌ರವರು ಮತ್ತು ಗೌಡರು ಮೊನ್ನೆ ಮಾತನಾಡಿದ್ದಾರೆ. ಅವರು ನನಗೆ clarification ಕೇಳಬಹುದು.

ಶ್ರೀ ಶ್ರೀಕಾಂತ್ ಸುಬ್ಬಾರಾವ್ ಕುಲಕರ್ಣಿ : ಒಂದೇ ನಿಮಿಷ ಕೇಳುತ್ತೇನೆ. ಇದು ನಮ್ಮ ಭಾಗದ ಜ್ವಲಂತ ಸಮಸ್ಯೆ. ಇದರ ಬಗ್ಗೆ ಚರ್ಚೆಯಾಗುವುದಕ್ಕೆ ಸಾಕಷ್ಟು ಸಮಯ ನಮಗೆ ಸಿಕ್ಕಿಲ್ಲ. ನಿಯಮ 69ರಲ್ಲಿ ನಾನು ಸೂಚನೆ ಕೊಟ್ಟಿದ್ದೆ.

ಉಪಾಧ್ಯಕ್ಷರು : ಶ್ರೀಕಾಂತ್‌ರವರೇ, ರಾಮಚಂದ್ರರವರು ಮಾತನಾಡಿದ ಮೇಲೆ ಮಾತನಾಡಿ.

ಶ್ರೀ ಶ್ರೀಕಾಂತ್ ಸುಬ್ಬಾರಾವ್ ಕುಲಕರ್ಣಿ : ಮಾನ್ಯ ಉಪಾಧ್ಯಕ್ಷರೆ, ಕಾವೇರಿ ವಿಚಾರದಲ್ಲಿ ಮೊದಲನೇ ದಿವಸ ಕಾಲಹರಣ ಆಗಿಹೋಯಿತು. ನಮಗೆ ಸಮಸ್ಯೆಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಆಗಲಿಲ್ಲ.

ಶ್ರೀ ಎಸ್.ವಿ. ರಾಮಚಂದ್ರ (ಜಗಳೂರು) : ಮಾನ್ಯ ಉಪಾಧ್ಯಕ್ಷರೆ, ತಾವು ಇವತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನ್ನದೊಂದು ಸಣ್ಣ ಮನವಿ ಏನೆಂದರೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳಾದಂತಹ ಧೀಮಂತ ವ್ಯಕ್ತಿ ಯಡಿಯೂರಪ್ಪನವರು ಹಾಗೂ ಶ್ರೀಯುತ ಬಸವರಾಜ್ ಬೊಮ್ಮಾಯಿಯವರ ಚಾಣಾಕ್ಷತನದಿಂದ ಬುದ್ಧಿವಂತಿಕೆ ಮಾಡಿ ನಮ್ಮ ಭಾಗಕ್ಕೆ ಎರಡು ಟಿಎಂಸಿ ನೀರು ಕೊಡಲು ಆದೇಶ ಮಾಡಿದ್ದಾರೆ. ನಮ್ಮ ಭಾಗ ಸುಮಾರು ನೂರು ವರ್ಷಗಳ ಇತಿಹಾಸದಲ್ಲಿ 70 ವರ್ಷ ಬರಗಾಲ ಕಂಡಂತಹ ಪ್ರದೇಶ. ಯಾವುದೇ ರೀತಿಯ ಕೈಗಾರಿಕೆಗಳಾಗಲಿ, ನೀರಾವರಿ ಸೌಲಭ್ಯಗಳಾಗಲಿ ಇಲ್ಲ. ನಾವು ಮಳೆಯನ್ನೇ ನಂಬಿಕೊಂಡು ಆಕಾಶ ನೋಡಿಕೊಂಡು ಬದುಕುತ್ತಿರು ವಂತಹ ಜನ. ಆದರೆ ಮಾನ್ಯ ಬಸವರಾಜ ಬೊಮ್ಮಾಯಿಯವರು ಬಹಳ ಕಷ್ಟಪಟ್ಟು ಕೊಟ್ಟಿದ್ದಾರೆ. ಅದಕ್ಕೆ ಈಗ ಇರುವಂತಹ ಮೂರ್‍ನಾಲ್ಕು ತಿಂಗಳಲ್ಲಿ ಏನಾದರೂ ಮಾಡಿ ಟೆಂಡರ್ ಕರೆಯುವ ನಿಟ್ಟಿನಲ್ಲಿ ಕಾರ್ಯ ರೂಪಕ್ಕೆ ತಂದರೆ ನಾನು ನಮ್ಮ ಜನ ಮತ್ತು ಮುಂದಿನ ಪೀಳಿಗೆ ಸಹ ಮಾನ್ಯ ಸಚಿವರಿಗೆ ಬಹಳ ಕೃತಜ್ಞರಾಗುತ್ತೇವೆ. ದಯಮಾಡಿ ಏನೂ ಸಿಗದಂತಹ ಪ್ರದೇಶದಕ್ಕೆ ನಮ್ಮ ಬಸವರಾಜಣ್ಣ ನೀರು ಹರಿಸುತ್ತಾರೆ ಎಂದು ನಂಬಿರುತ್ತೇವೆ. ಇದರ ಬಗ್ಗೆ ದಯಮಾಡಿ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಶ್ರೀಕಾಂತ್ ಸುಬ್ಬಾರಾವ್ ಕುಲಕರ್ಣಿ (ಜಮಖಂಡಿ) : ಮಾನ್ಯ ಉಪಾಧ್ಯಕ್ಷರೆ, ಮುಳುಗಡೆ ಹಿನ್ನೆಲೆಯಲ್ಲಿ ಸಾಕಷ್ಟು ವಿಷಯಗಳನ್ನು ಮಾನ್ಯ ಬೃಹತ್ ನೀರಾವರಿ ಸಚಿವರ ಗಮನಕ್ಕೆ ತೆಗೆದುಕೊಂಡು ಬಂದಿದ್ದೇವೆ. ಈಗಾಗಲೇ ಮುಳುಗಡೆಯಾದಂತಹ ಗ್ರಾಮಗಳಿಗೆ ಪುನರ್ವಸತಿ ಕೇಂದ್ರ ಗಳನ್ನು (ಆರ್.ಸಿ) ಸರ್ಕಾರ ಮಾಡಿದ. ಆ ಪುನರ್ವಸತಿ ಕೇಂದ್ರಗಳಲ್ಲಿ ಇನ್ನೂ ಸಾರ್ವಜನಿಕರಿಗೆ ಬೇಕಾಗುವಂತಹ ಮೂಲಭೂತ ಸೌಲಭ್ಯಗಳು

ವ್ಯವಸ್ಥೆಗಳು ಸಂಪೂರ್ಣವಾಗಿ ಆಗಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿ ಜನ ವಲಸೆ ಮಾಡದಿದ್ದರೂ ಸುಮಾರು 10 ರಿಂದ 15% ಜನ ಈಗಾಗಲೇ ಪುನರ್ವಸತಿ ಕೇಂದ್ರಗಳಿಗೆ ಹೋಗಿದ್ದಾರೆ. ಇತ್ತೀಚೆಗೆ ಆ ಕೇಂದ್ರದಲ್ಲಿ ಕುಡಿಯುವ ನೀರು ಮತ್ತು ರಸ್ತೆ ಅಭಿವೃದ್ಧಿ ಇತ್ಯಾದಿಗಳ ಕುರಿತು ಸರ್ಕಾರ ಒಂದು ಯೋಜನೆಯನ್ನು ಮಾಡಿತ್ತು. ಆದರೆ ಯಾವ ಪುನರ್ವಸತಿ ಕೇಂದ್ರವನ್ನು ಗ್ರಾಮ ಪಂಚಾಯತ್‌ಗಳು adopt ಮಾಡಿಕೊಳ್ಳುತ್ತದೆ, ಸ್ವೀಕಾರ ಮಾಡುತ್ತದೆ ಎನ್ನುವ condition ಹಾಕಿ ಕೆಲವು ಅಧಿಕಾರಿಗಳು ಅಭಿವೃದ್ಧಿ ಕಾರ್ಯಗಳನ್ನು ತಡೆಹಿಡಿದಿದ್ದಾರೆ. ಅದರಲ್ಲೂ ವಿಶೇಷವಾಗಿ capital grantನಲ್ಲಿ ಹಳೇ ಗ್ರಾಮದಿಂದ ಹೊಸ rehabilitation centre ಹೋಗತಕ್ಕಂಥ ರಸ್ತೆಗಳು ಮತ್ತು ಇತ್ಯಾದಿ ಅಭಿವೃದ್ಧಿ ಸಂಬಂಧಪಟ್ಟಂತೆ ಕೆಲಸ ಕಾರ್ಯಗಳು ಆಗಬೇಕೆಂದು ಬೇಡಿಕೆ ಇಟ್ಟು ಮನವಿ ಕೊಟ್ಟಾಗ ಅಧಿಕಾರಿಗಳು ಅದಕ್ಕೆ ಒಪ್ಪಿಗೆ ಕೊಟ್ಟಿಲ್ಲ. ಅದರಿಂದ ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಈ capital grant ನಲ್ಲಿ RC ಮಧ್ಯದಲ್ಲಿ ಮತ್ತು RCಗೆ ಹೋಗತಕ್ಕಂಥ ರಸ್ತೆಗಳಿಗೆ ಹಣವನ್ನು ಏನು ಮೀಸಲಿಟ್ಟಿದ್ದೀರಿ, ಅದಕ್ಕೆ ತಕ್ಷಣ ಟೆಂಡರ್ ಪ್ರಕ್ರಿಯೆ ಮಾಡಿ, ಆ ಕೆಲಸ ಕಾರ್ಯಗಳು ಆಗುವಂತೆ ತಕ್ಷಣ ಕ್ರಮತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಇದೇ ಸಂದರ್ಭ ದಲ್ಲಿ 524 ಆಗುವವರೆಗೂ ಹಳೆಯ ಮುಳುಗಡೆ ಆದಂತಹ ಗ್ರಾಮಗಳ ಜನರು ಹೊರಗಡೆ ಹೋಗುವುದಕ್ಕೆ ತಯಾರಿಲ್ಲ. ಅವರು ತಮ್ಮ ಕೃಷಿ, ಪಂಪ್‌ಸೆಟ್, ಹಳೆ ಚಟುವಟಿಕೆ, ಹಳೆ ಗ್ರಾಮವನ್ನು ಮತ್ತು ತಮ್ಮ ಜಾನುವಾರು ಬಿಟ್ಟು ಹೋಗುವುದಕ್ಕೆ ಆಗುವುದಿಲ್ಲ. ಹೀಗಾಗಿ ಅಲ್ಲಿರುವಂತಹ ಅನೇಕ ಕಡುಬಡವರ ಹಳೆ ಮನೆಗಳು ಬಿದ್ದುಹೋಗಿವೆ. ಅಲ್ಪ ಪ್ರಮಾಣದಲ್ಲಿ ಸುಮಾರು 15–20 ವರ್ಷದ ಹಿಂದೆ ಏನು ಪರಿಹಾರ ಕೊಟ್ಟಿದ್ದರು, ಆ ದುಡ್ಡೆಲ್ಲಾ ಖರ್ಚಾಗಿ ಅವರು ಹೊಸ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಆಗಿಲ್ಲ. ಆದರಿಂದ ಒಂದು ವಿನಂತಿ ಏನೆಂದರೆ ಇವತ್ತೇ 524 ಕ್ಕೆ ಸರ್ಕಾರ ಯೋಜನೆ ಮಾಡಿಕೊಂಡೂ ಕೂಡ ಅವರಿಗೆಲ್ಲ ಯೋಗ್ಯ ಪರಿಹಾರ ಕೊಟ್ಟು, ಹೊಸದಾಗಿ

22 ಗ್ರಾಮಗಳು ಏನು ಮುಳುಗುತ್ತವೆ, ಅವುಗಳಿಗೆ ಪುನರ್ವಸತಿ ಮಾಡಿದ ನಂತರವೇ 524 ನೀರು ಬರುತ್ತದೆ. ಆ ನೀರು ಬರುವವರೆಗೂ ಈ ಹಳ್ಳಿಗಳಿಂದ ಜನ ಹೊಸ ಕೇಂದ್ರಗಳಿಗೆ ಹೋಗುವುದಿಲ್ಲ. ಆದುದರಿಂದ ಅಲ್ಲಿರುವಂತಹ ಕಡು ಬಡವರು ಯಾರು ಇವತ್ತು ಗುಡಿಸಲಿನಲ್ಲಿ, ಬಯಲಿನಲ್ಲಿ ಮತ್ತು ಇನ್ನೊಬ್ಬರ ಮನೆಯಲ್ಲಿ ಬಾಡಿಗೆ ಕೊಟ್ಟುಕೊಂಡು ವಾಸ ಮಾಡುತ್ತಿದ್ದಾರೆ, ಅಂತಹ ಬಡ ಕುಟುಂಬಗಳನ್ನು ಗುರುತಿಸಿ ಹೊಸ ವಸತಿ ಯೋಜನೆಯಲ್ಲಿ ಅವರನ್ನೂ ಕೂಡ ಫಲಾನುಭವಿಗಳು ಎಂದು ತೀರ್ಮಾನ ಮಾಡಿ, ಅವರಿಗೂ ಮನೆ ಕೊಡುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಅದರ ಜೊತೆಗೆ ನಮ್ಮ ಕರ್ನಾಟಕ ಸರ್ಕಾರದ ಸಚಿವರು ಒಂದು ಕ್ರಾಂತಿಕಾರಿ ನಿರ್ಣಯವನ್ನು ತೆಗೆದುಕೊಂಡಿದೆ ಎಂದು ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಕೊಯ್ನಾ ಡ್ಯಾಂ ಕಟ್ಟುವಾಗ ಅಲ್ಲಿಂದ ಹೆಚ್ಚಾದಂತಹ 25 ಟಿಎಂಸಿ ನೀರು ಹರಿದು ಬರಪೀಡಿತ ಪ್ರದೇಶವಾದಂತಹ ಸಾವಳಗಿ, ವಿಜಾಪುರ ಜಿಲ್ಲೆಯ ವಿಜಾಪುರ ಪಟ್ಟಣದವರೆಗೆ 25 ಟಿಎಂಸಿ ನೀರು ಹರಿದು ಬರಬೇಕಾಗಿತ್ತು. ಅವಕಾಶ ವಂಚಿತವಾದಂತಹ ಆ ಪ್ರದೇಶಕ್ಕೆ ನೀರಾವರಿ ಆಗಬೇಕೆನ್ನುವ ನೂರಾರು ವರ್ಷದ ಬೇಡಿಕೆಗೆ ನಮ್ಮ ಸರ್ಕಾರ ಅತ್ಯಂತ ಕ್ರಿಯಾಶೀಲವಾಗಿ ಸ್ಪಂದನೆ ಮಾಡಿ, ಈ ಒಂದು ಯೋಜನೆಯನ್ನು ಸಾವಳಗಿಯವರೆಗೆ ಲಿಫ್ಟ್ ಮಾಡಬೇಕೆಂದು ಈಗಾಗಲೇ ಗೋದಾವರಿ diversionನಲ್ಲಿ ಉಳಿದಿರುವಂತಹ 23 ಟಿಎಂಸಿಯಲ್ಲಿ 2.8 ಟಿಎಂಸಿ ನೀರನ್ನು ಮೀಸಲಿಟ್ಟು allocation ಮಾಡಿ ಆದೇಶ ಮಾಡಿದೆ. ನಾನು ಮಾನ್ಯ ಮಂತ್ರಿಗಳಿಗೆ ಆ ಭಾಗದ ಜನರ ಪರವಾಗಿ ಮತ್ತೊಮ್ಮೆ ವಿನಂತಿ ಮಾಡುವುದೇನೆಂದರೆ 2.8 ಟಿಎಂಸಿ ನೀರು ಸಾಲುವುದಿಲ್ಲ. ಇನ್ನೂ ಒಂದು ಟಿಎಂಸಿ ನೀರನ್ನು ಹೆಚ್ಚು allocation ಮಾಡಿ ಬರುವಂತಹ ಜನವರಿ ತಿಂಗಳಿನಲ್ಲಿ ಡಿಪಿಆರ್ ರೆಡಿ ಮಾಡಿ ಟೆಂಡರ್ ಪ್ರಕ್ರಿಯೆ ಮಾಡಿ, ತಕ್ಷಣ ಕಾರ್ಯ ಪ್ರಾರಂಭ ಮಾಡಿ ಮಾನ್ಯ ಬಸವರಾಜ ಬೊಮ್ಮಾಯಿಯವರ ಕಲ್ಪನೆ ಪ್ರಕಾರ ಡ್ರಿಪ್ ಇರಿಗೇಷನ್ ಮುಖಾಂತರ ಲಕ್ಷಾಂತರ ಎಕರೆ ಜಮೀನಿಗೆ

ನೀರು ಕೊಟ್ಟರೆ ಒಳ್ಳೆಯದು. ನನಗೆ ಅನಿಸುತ್ತದೆ ಇನ್ನೂ ಒಂದು ಟಿಎಂಸಿ ನೀರು ಜಾಸ್ತಿ ಮಾಡಿದರೆ 32,000 ದಷ್ಟು ಹೆಕ್ಟೇರ್ ಜಮೀನಿಗೆ ನೀರು ಕೊಡುವುದಕ್ಕೆ ಆಗುತ್ತದೆ. ಆ ಒಂದು ಹಿನ್ನೆಲೆಯಲ್ಲಿ ಒಂದು ಕ್ರಾಂತಿಕಾರಿ ಕಾರ್ಯಕ್ರಮ ಮಾನ್ಯ ಸಚಿವರು ಕರ್ನಾಟಕ ಸರ್ಕಾರದ ಮೂಲಕ ಈಡೇರಿಸಬೇಕು ಎನ್ನುವ ವಿನಂತಿಯನ್ನು ಮತ್ತೊಮ್ಮೆ ಮಾಡುತ್ತೇನೆ. ಅದೇ ರೀತಿ ಹಿಪ್ಪರಗಿ ಜಲಾಶಯದಿಂದ ಚಿಮ್ಮಲಗಿ ಲಿಫ್ಟ್ ಇರಿಗೇಷನ್ ಯೋಜನೆ ಜಾರಿಗೆ ತಂದರೆ ಮುಧೋಳ್, ಬೀಳಗಿ, ಜಮಖಂಡಿ ಆ ಭಾಗದ ಲಕ್ಷಾಂತರ ಎಕರೆ ಜಮೀನಿನ ರೈತರಿಗೆ ನೀರಾವರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ಅದನ್ನೂ ಕೂಡ ಸಮಯಕ್ಕೆ ಸರಿಯಾಗಿ ಕ್ರಮ ತೆಗೆದುಕೊಂಡು ಹಣ ಬಿಡುಗಡೆ ಮಾಡಿ ಆ ಯೋಜನೆಯನ್ನು ಜಾರಿಗೆ ತರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದೊಡ್ಡನಗೌಡ ಜಿ.ಪಾಟೀಲ್ (ಹುನಗುಂದ) : ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಕೃಷ್ಣಾ ಕಣಿವೆ ಯೋಜನೆ ಬಗ್ಗೆ ಮಾತನಾಡಿದ್ದೇನೆ. ಕೆಲವು ಪ್ರಮುಖವಾದ ವಿಚಾರಗಳನ್ನು ವ್ಯಕ್ತಪಡಿಸಬೇಕೆನ್ನುವ ಉದ್ದೇಶದಿಂದ ಈಗ ತಮ್ಮ ಅಪ್ಪಣೆಯನ್ನು ಪಡೆದುಕೊಂಡು ಮಾತನಾಡುತ್ತಿದ್ದೇನೆ. ಈಗಾಗಲೇ ನಮ್ಮ ಕ್ಷೇತ್ರದಲ್ಲಿ 82ರ ದಶಕದಲ್ಲಿ ಮುಳುಗಡೆಯಾದಂಥ ಸುಮಾರು 11 ಗ್ರಾಮಗಳಲ್ಲಿ ಕೆಲವು ಗ್ರಾಮಗಳಿಗೆ ರಸ್ತೆ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಆದರೆ ಇನ್ನು ಕೆಲವು ಗ್ರಾಮಗಳು ಕಮಲದಿನ್ನಿ, ಒಡೆಯರ ಗೋನಾಳ ಈ ಗ್ರಾಮಗಳಿಗೆ ಇವತ್ತಿಗೂ ಕೂಡ ರಸ್ತೆ ನಿರ್ಮಾಣವಾಗಿಲ್ಲ, ಮತ್ತೆ ಈ ಗ್ರಾಮಗಳಿಗೆ ಬೇಕಾದಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಇನ್ನು ಪ್ರಾರಂಭವಾಗಿಲ್ಲ. ಸುಮಾರು 20 ವರ್ಷಗಳಿಂದಲೂ ಆತಂಕದಲ್ಲಿರುವ ಜನರಿಗೆ ಇವತ್ತು ಹಲವಾರು ಮೂಲಭೂತ ಸೌಲಭ್ಯಗಳ ಕೊರತೆ ಏನು ಇವೆ, ಅದನ್ನು ನೀಗಿಸಬೇಕೆಂದು ಮಾನ್ಯ ಜಲ ಸಂಪನ್ಮೂಲ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕಮಲದಿನ್ನಿ, ಒಡೆಯರ್ ಗೋನಾಳ್‌ದಿಂದ ದಾಸವಾಳ್ ಆರ್.ಸಿ.ವರೆಗೂ ಒಂದು ರಸ್ತೆ ನಿರ್ಮಾಣ ಮತ್ತು ಈ ಗ್ರಾಮಗಳಿಗೆ ಕುಡಿಯುವ ನೀರಿನ

ವ್ಯವಸ್ಥೆಯನ್ನು ಮಾಡಬೇಕು. ಅದೇ ರೀತಿಯಲ್ಲಿ ದನ್ನೂರು ಗ್ರಾಮದಲ್ಲಿ ಹಕ್ಕುಪತ್ರವನ್ನು ಇನ್ನೂ ಕೊಟ್ಟಿಲ್ಲ, ಇದಕ್ಕೆ ಕಾರಣವೇನೆಂದರೆ, ಅಲ್ಲಿ ಯಾರಿಗೂ ಒಂದು ಮನೆಯೂ ಇಲ್ಲ, ಆಶ್ರಯ ಮನೆಯೂ ಇಲ್ಲ, ಯಾವುದೇ ಮನೆಗಳು ಇಲ್ಲದೇ ಇರುವ ಸಾಕಷ್ಟು ಜನರು ಆ ಗ್ರಾಮದಲ್ಲಿರುವುದರಿಂದ ಅವರಿಗೆ ಹಕ್ಕುಪತ್ರವನ್ನು ಕೊಟ್ಟು, ಅವರಿಗೂ ಸಹಿತ ಬಸವ ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕೊಡುವಂಥ ಕೆಲಸವಾಗ ಬೇಕೆಂಬ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಿಕೊಳ್ಳಲಿಚ್ಛಿಸುತ್ತೇನೆ. ಅದೇ ರೀತಿಯಲ್ಲಿ R & R ನಲ್ಲಿರುವಂಥ ಇಂಜಿನಿಯರ್‌ಗಳು ಸುಮಾರು 20 ವರ್ಷಗಳಿಂದಲೂ ಅಲ್ಲೇ ಇದ್ದಾರೆ. ಇಲ್ಲವೆಂದರೆ, ಅಲ್ಲೇ sub-division 1,2,3,4 ಎಂದು transfer ಮಾಡಿಕೊಳ್ಳುತ್ತಾ ಅಲ್ಲಿ ಆಲಮಟ್ಟಿ ಮತ್ತು ನಾರಾಯಣಪುರ ಇಲ್ಲಿ ಅವರು AEE ಇರಬಹುದು, Executive Engineer ಮತ್ತು A.E ಗಳು ಮತ್ತು J.E ಗಳು, ಎಲ್ಲಾ Section Officer ಗಳು ಪ್ರಾರಂಭದಿಂದಲೂ ಅಲ್ಲೇ ಇದ್ದಾರೆ. ಅವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಬೇಕು. ಅಲ್ಲಿ ಏನಾಗಿದೆಯೆಂದರೆ, ಯಾವುದೇ ಒಂದು ಕೆಲಸವನ್ನು ಮಾಡಬೇಕೆಂದರೆ ತಿಂಗಳಾನುಗಟ್ಟಲೆ ಮಾಡುತ್ತಾರೆ. ಒಂದು estimate ಮಾಡಬೇಕೆಂದರೆ ಒಂದು ತಿಂಗಳ ಕಾಲಾವಕಾಶವನ್ನು ತೆಗೆದು ಕೊಳ್ಳುತ್ತಾರೆ. ಇಂಥ ಒಂದು ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಆ ಕಾರಣದಿಂದ ಇಲ್ಲಿನ ಇಂಜಿನಿಯರ್‌ಗಳನ್ನು ಸಂಪೂರ್ಣವಾಗಿ ವರ್ಗಾವಣೆ ಮಾಡುವಂಥ ಕೆಲಸವಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಯೋಜನೆಯಲ್ಲಿ ಭೂಮಿಯನ್ನು ಕಳೆದುಕೊಂಡಂಥ ರೈತರಿಗೆ ನಮ್ಮ ಭಾಗದಲ್ಲಿ ಸಾಕಷ್ಟು ಭೂಮಿ ಬೆಲೆ ಏರಿಕೆಯಾಗಿರುವುದರಿಂದ ಅವರಿಗೆ ಸೂಕ್ತವಾದಂಥ ಪರಿಹಾರ ಕೊಡುವಂಥದ್ದು ಆಗಬೇಕು. ಈಗ ಒಂದೂವರೆ ಲಕ್ಷ ರೂ.ಗಳು, ಎರಡು ಲಕ್ಷ ರೂ.ಗಳನ್ನು ಕೊಟ್ಟರೆ ಸಾಕಾಗಾವುದಿಲ್ಲ. ಇದರ ಪಕ್ಕದಲ್ಲೇ ಕೂಡಗಿ ವಿದ್ಯುತ್ ಸ್ಥಾವರಕ್ಕೆ ಸರ್ಕಾರ 8 ಲಕ್ಷ ರೂ. ಗಳ ಪರಿಹಾರವನ್ನು ಕೊಟ್ಟಿರುವುದರಿಂದ ಆ ಭಾಗದ ರೈತರೆಲ್ಲರೂ ಆ

ಪ್ರಮಾಣದಲ್ಲಿ ಅಂದರೆ 8 ಲಕ್ಷ ರೂ.ಗಳಿಂದ 10 ಲಕ್ಷ ರೂ. ಗಳವರೆಗೂ ಡಿಮಾಂಡ್ ಮಾಡುತ್ತಿದ್ದಾರೆ. ಇವರಿಗೆ ಕನಿಷ್ಠ 10 ಲಕ್ಷ ರೂ.ಗಳ ಪಪರಿಹಾರವನ್ನು ಕೊಡುವಂಥ ಕೆಲಸ ಸರ್ಕಾರದಿಂದ ಆಗಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಇನ್ನೂ ಮೂರು ಗ್ರಾಮಾಗಳು ನಾರಾಯಣಪುರ ಹಿನ್ನೀರಿನಲ್ಲಿ ಮುಳುಗಡೆಯಾಗಿದೆ. ಇವು CWC norms ಪ್ರಕಾರ ಬರುವುದಿಲ್ಲವೆಂದು ಹೇಳಿದರು. 2009ರಲ್ಲಿ ಫ್ಲಡ್ ಬಂದಾಗ ಆ ಊರು ಸಂಪೂರ್ಣವಾಗಿ ಜಲಾವೃತಗೊಂಡು ಇವತ್ತಿಗೂ ಉನ್ನೂರು, ಬೆಳಗಲ್ ಮತ್ತು ಚೌಡಕಲ್ಲು ದಿನ್ನಿ ಗ್ರಾಮಸ್ಥರು ಶೆಡ್‌ಗಳಲ್ಲಿ ವಾಸವಾಗಿದ್ದಾರೆ. ಆ ಕಾರಣದಿಂದ ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಮೂರು ಗ್ರಾಮಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ಗ್ರಾಮಗಳನ್ನು ಸ್ಥಳಾಂತರ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ಪೂರ್ವ ಭಾಗದ ನೀರಾವರಿ ಯೋಜನೆ ಈಗಾಗಲೇ ಸರ್ವೆ ಆಗಿದೆ. ನಮ್ಮ ಭಾಗದ ಸುಮಾರು 30,000 ಹೆಕ್ಟೇರ್‌ಗಳಿಗೆ ನೀರಾವರಿ ಮಾಡುತ್ತೇವೆಂದು ಹೇಳಿ, ಮಾನ್ಯ ಸಚಿವರು ಈ ಪೂರ್ವ ಭಾಗದ ಸರ್ವೆ ಕಾರ್ಯವನ್ನು ಮಾಡಿದ್ದಾರೆ. ಇದಕ್ಕೆ ತೀವ್ರಗತಿ ಚಾಲನೆ ನೀಡಬೇಕೆಂದು ವಿನಂತಿ ಮಾಡುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಬೆಳಗಾಂನಲ್ಲಿ ಅಧಿವೇಶನ ನಡೆಯುವಂಥ ಸಂದರ್ಭದಲ್ಲಿ ಇಡೀ ಉತ್ತರ ಕರ್ನಾಟಕದ ಜನರ ಆಶೋತ್ತರಗಳು ಸಹಜವಾಗಿ ಹೆಚ್ಚಾಗುತ್ತದೆ. ಕೃಷ್ಣಾ ನದಿ ಉತ್ತರ ಕರ್ನಾಟಕದ ಜೀವ ನದಿಯಾಗಿರುವುದರಿಂದ, ಇದರ ಬಗ್ಗೆ ಸಹಜವಾಗಿ ಚರ್ಚೆಗೆ ಬರುತ್ತದೆ, ಹಲವಾರು ವಿಷಯಗಳು ಪ್ರಸ್ತಾಪವಾಗುತ್ತದೆ. ಮತ್ತೆ ಇದಕ್ಕೆ ಸರ್ಕಾರ ಸ್ಪಂದಿಸುವ ಅವಕಾಶ ಸಿಗುತ್ತದೆನ್ನುವ ಭರವಸೆಯೊಂದಿಗೆ ಈ ಚರ್ಚೆ ತಡವಾಗಿ ಆರಂಭವಾದರೂ, ಆಯಿತು ಎನ್ನುವ ಸಮಾಧಾನವಿದ್ದರೂ, ಇವತ್ತು ಕೇವಲ ಅವರು ತಮ್ಮ ಮನಸ್ಸಿನಲ್ಲಿ ಏನಿದೆ, ತಮ್ಮ ಹತ್ತಿರ ಇರುವ ಮಾಹಿತಿಯನ್ನು ಇಟ್ಟುಕೊಂಡು ಮಾತನಾಡಿ, ಈ ಬಗ್ಗೆ ನಿಜವಾಗಿಯೂ ಸರ್ಕಾರ ಏನು

ತೀರ್ಮಾನಗಳನ್ನು ತೆಗೆದುಕೊಂಡಿದೆ, ಏನು ಅನುಷ್ಠಾನ ಮಾಡುತ್ತದೆನ್ನುವ ಬಗ್ಗೆ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಕಾಳಜಿ ಇದ್ದಿದ್ದರೆ ಇಲ್ಲಿ ಅವರು ಇರುತ್ತಿದ್ದರು. ಇವತ್ತು ಅವರಲ್ಲಿ ಈ ಕಾಳಜಿ ಇಲ್ಲದ ಕಾರಣದಿಂದ ಇವತ್ತು ಇಲ್ಲಿ ನಾನು ಏನು ಹೇಳುತ್ತೇನೆ. ನಾನು ಇಲ್ಲಿ ಹೇಳಿದ್ದೆಲ್ಲಾ ಸರಿ ಎಂಬ ಭಾವನೆ ಇಲ್ಲ. ನಾವು ಹೇಳಿದ್ದನ್ನು ಸರಿ ಇದೆಯೆಂದು ಒಪ್ಪಿಕೊಂಡು, ಇಲ್ಲವೆಂದರೆ ಅದರಲ್ಲಿ ಏನಾದರೂ ತಿದ್ದುಪಡಿ ತರುವಾಂಥ ವಿಚಾರಗಳು ಇದ್ದರ, ಇಲ್ಲೇ ಚರ್ಚೆ ಮಾಡಿ ತೀರ್ಮಾನ ಮಾಡಲು ಸಾಧ್ಯವಿತ್ತು. ಆದರೆ ಇದ್ಯಾವುದನ್ನು ಮಾಡದೇ ಜವಾಬ್ದಾರಿಯಿಂದ ನುಣುಚಿಕೊಂಡು, ಇವತ್ತು ಕೇವಲ ಉತ್ತರ ಕರ್ನಾಟದ ಕೃಷ್ಣಾ ನದಿಯ ಬಗ್ಗೆ ಪ್ರಸ್ತಾಪ ಮಾಡಿದ್ದೇವೆಂದು ಹೇಳಿ ತೋರಿಕೆಯ ಕೆಲಸ ಮಾಡಿರುವಂಥದ್ದು ಬಹಳ ಸ್ಪಷ್ಟವಾಗುತ್ತದೆ. ಆದಾಗ್ಯೂ ಕೂಡ ನನ್ನ ಕರ್ತವ್ಯವಿದೆ. ಜನತೆಗೆ ತಮ್ಮ ಮುಖಾಂತರ, ಈ ಸದನದ ಮುಖಾಂತರ ನಾವು ಮಾಡಿರುವಂಥ ಕೆಲಸಗಳು, ಆದರ ಪ್ರಗತಿ ಬಗ್ಗೆ ಹೇಳಲು ತಮ್ಮ ಮುಂದೆ ನಿಂತಿದ್ದೇನೆ. ಇವತ್ತು ಕೃಷ್ಣಾ ನದಿ ಒಂದು ಜೀವನದಿಯಾಗಿದ್ದು, ಇದರಲ್ಲಿ ಅಪರ್ ಕೃಷ್ಣಾ ಯೋಜನೆ ಒಂದು ಬಹಳ ಮಹತ್ವದ ಯೋಜನೆಯಾಗಿದೆ. ಈ ಒಂದು ಯೋಜನೆ 1964ರಲ್ಲಿ ಮಾನ್ಯ ಲಾಲ್ ಬಹದ್ದೂರ್ ಶಾಸ್ತ್ರಿಯಯವರು ಆಲಮಟ್ಟಿಗೆ ಅಡಿಗಲ್ಲು ಇಟ್ಟು ಪ್ರಾರಂಭ ಮಾಡಿದರು. ಆದರೆ ಕೃಷ್ಣಾ ನದಿ ನೀರಿನ ಉಪಯೋಗ ನಮ್ಮ ರಾಜ್ಯದ ಪುನರ್ ವಿಂಗಡಣೆಗಿಂತ ಮುಂಚೆ ಆಗಿತ್ತೆನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಡುತ್ತಿದ್ದೇನೆ. ಅಂದು ಮುಂಬೈ ಕರ್ನಾಟಕದಲ್ಲಿ ಹಲವಾರು ನೀರಾವರಿ ಕಾಮಗಾರಿಗಳು ನಡೆದಿತ್ತು. 1964ರಲ್ಲಿ ಅಡಿಗಲ್ಲು ಹಾಕಿದ ಸಂದರ್ಭದಲ್ಲಿ ಇದೇ ನದಿ ಪಾತ್ರದಲ್ಲಿರುವಂತಹ ಇನ್ನು ಎರಡು ರಾಜ್ಯಗಳು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಿಗೆ ಅಂದೇ ನೀರಾವರಿ ಬಗ್ಗೆ ಜಾಗ್ರತೆ ಇತ್ತು. ಅದರಲ್ಲೂ ವಿಶೇಷವಾಗಿ ಆಂಧ್ರದ ಕೆ.ಎಲ್.ರಾವ್‌ರವರ ನೇತೃತ್ವದಲ್ಲಿ ಅಂದು ಅವರು ತೆಗೆದುಕೊಂಡಿರುವಂಥ ಕೆಲವು ಮಹತ್ವದ ತೀರ್ಮಾನಗಳು, ಎಲ್ಲಾ ಕಾಮಗಾರಿಗಳನ್ನು ನಿಲ್ಲಿಸಿ, ನಾಗಾರ್ಜುನ ಸಾಗರವನ್ನು ಕಟ್ಟುವಂಥದ್ದು ಮತ್ತು ಶ್ರೀಶೈಲಂ ಕಟ್ಟುವಂಥದ್ದು,

ಇದಕ್ಕೆ ನೀರಾವರಿ ಯೋಜನೆಗಳನ್ನು ಮಾಡಿರುವಂಥದ್ದು. ಇವತ್ತು ಇವೆಲ್ಲವನ್ನು ಮಾಡಿದ ಹಿನ್ನೆಲೆಯಲ್ಲಿ ನೀರಾವರಿಯಲ್ಲಿ ನಮಗಿಂತ ಅವರು ಪ್ರಗತಿಯನ್ನು ಸಾಧಿಸಿದ್ದಾರೆ. ಅಂದು ಅವರು ತೆಗೆದುಕೊಂಡಿರುವಂಥ ತೀರ್ಮಾನಗಳ ಪ್ರತಿಫಲ ಆ ರಾಜ್ಯಕ್ಕೆ ಸಿಗುತ್ತಿದೆ. ಬಹುತೇಕವಾಗಿ ನಮ್ಮ ರಾಜ್ಯದಲ್ಲೂ ಕೂಡ ಅದೇ ನಿಲುವನ್ನು, ತೀರ್ಮಾನವನ್ನು ತೆಗೆದುಕೊಂಡು ಅನುಷ್ಠಾನ ಮಾಡಿದ್ದರೆ, ಇವತ್ತು ಈ ಚರ್ಚೆಯ ಸ್ವರೂಪವೇ ಬದಲಾವಣೆ ಯಾಗುತ್ತಿತ್ತು. ಇವತ್ತು ಕೃಷ್ಣಾ stage-1 ಮತ್ತು stage-2 ಇವೆರಡೂ ಕೂಡ ಸಂಪೂರ್ಣವಾಗಿ ಮುಗಿದಿದೆ. ಆರು ಲಕ್ಷಕ್ಕಿಂತ ಹೆಚ್ಚು ನೀರನ್ನು ಏನು ಕೊಡಬೇಕಾಗಿತ್ತು, ಅದನ್ನು ಈಗಾಗಲೇ ಒದಗಿಸಿದ್ದೇವೆ. ಅದರ ಬಗ್ಗೆ ವಿವರವಾಗಿ ಉತ್ತರವನ್ನು ಕೊಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಈಗಾಗಲೇ ಇದು ಸಂಪೂರ್ಣವಾಗಿ ಆಗಿದೆ. ಆದರೆ ಒಂದು ವಿಚಾರವೇ ನೆಂದರೆ, ಮಾನ್ಯ ವಿರೋಧಪಕ್ಷದ ನಾಯಕರು ಹಲವು ಪ್ರಶ್ನೆಗಳನ್ನು ಕೇಳಿದ್ದರು. ಅವುಗಳಿಗೆ ಉತ್ತರಿಸುವಂಥ ಪ್ರಯತ್ನವನ್ನು ನಾನು ಈಗ ಮಾಡುತ್ತಿದ್ದೇನೆ. ಕೃಷ್ಣಾ ಮೊದಲನೆಯ ನ್ಯಾಯಾಧಿಕರಣದಲ್ಲಿ 734 ಟಿ.ಎಂ.ಸಿ. ನೀರನ್ನು ಒದಗಿಸಿದೆ. ಆದರೆ 5 ಟಿ.ಎಂ.ಸಿ.ನೀರನ್ನು ಚನ್ನೈಗೆ ಕೊಡಬೇಕ್ಕಾಗಿದ್ದರಿಂದ 729 ಟಿ.ಎಂ.ಸಿ. ನೀರು ನಮಗೆ ಲಭ್ಯವಾಗಿತ್ತು. ಅದರಲ್ಲಿ ಯು.ಕೆ.ಪಿ.ಗೆ 173 ಟಿ.ಎಂ.ಸಿ, ಘಟಪ್ರಭಾ, ಮಲಪ್ರಭಾ, ಭದ್ರಾ, ತುಂಗಭದ್ರ, ಈ ಎಲ್ಲಾ ಪ್ರಮುಖ ಯೋಜನೆಗಳು ಇವತ್ತು ಅನುಷ್ಠಾನ ಗೊಂಡಿವೆ. ಕೇವಲ ಇನ್ನು ಮೂರ್ನಾಲ್ಕು ಯೋಜನೆಗಳು ಪೂರ್ತಿಯಾಗುವ ಹಂತದಲ್ಲಿರುವುದನ್ನು ಇವತ್ತು ಸಂಪೂರ್ಣವಾಗಿ ಮಾಡುವುದಕ್ಕೆ ನಾವು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲೂ ವಿಶೇಷವಾಗಿ ಅಪ್ಪರ್ ತುಂಗಾ ಯೋಜನೆ 1,50,000 ಕ್ಕಿಂತ ಹೆಚ್ಚು ನೀರನ್ನು ಕಳೆದ ಎರಡು ವರ್ಷಗಳಲ್ಲಿ ಕೊಟ್ಟಿದ್ದೇವೆ. ಇನ್ನು 40 ಕಿ.ಮೀ. main canalಗೆ tender ಕರೆದಿದ್ದೇವೆ. ಇದು ಮಾತ್ರ ಬಾಕಿ ಇದೆ, ಇದು ಆದರೆ ಅಪ್ಪರ್ ತುಂಗಾ ಯೋಜನೆ ಪೂರ್ಣವಾಗುತ್ತದೆ. ಆಗ 12 ಟಿ.ಎಂ.ಸಿ. ನೀರನ್ನು ಬಳಕೆ ಮಾಡಿದ ಹಾಗೆ ಆಗುತ್ತದೆ. ಇವತ್ತು ಸಿಂಗಟಾಲೂರು ಬಲ ಭಾಗದಲ್ಲಿ

50,000 ಕ್ಕಿಂತ ಹೆಚ್ಚು ನೀರಾವರಿ ಪ್ರದೇಶದಕ್ಕೆ ಈಗಾಗಲೇ ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ನೀರು ಹರಿಸುವ ಮುಖಾಂತರ ಚಾಲನೆಯನ್ನು ಕೊಟ್ಟಿದ್ದಾರೆ. ಎಡ ಭಾಗದ್ದು ಕೂಡ ಮುಂದಿನ ಮಾರ್ಚ್–ಏಪ್ರಿಲ್ ಒಳಗಾಗಿ ನೀರನ್ನು ಕೊಡುವಂಥ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿವೆ. ಇನ್ನು ಬಾಕಿ ಇರುವಂಥ ಸೊನ್ನ, ಸೊನ್ನತ್ತಿ ಮುಂತಾದವುಗಳೆಲ್ಲವೂ ಸೇರಿ ಸುಮಾರು 30 ಟಿ.ಎಂ.ಸಿ. ನೀರಿನ ಕಾಮಗಾರಿಗಳು ಪ್ರಗತಿಯಲ್ಲಿವೆ. ಅವೆಲ್ಲವನ್ನೂ ಮಾಡಿದರೆ ನಮ್ಮ ಪಾಲಿನ 729 ಟಿ.ಎಂ.ಸಿ. ನೀರು ಸಂಪೂರ್ಣವಾಗಿ ಬಳಕೆಯಾಗಲಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಎರಡನೆಯದಾಗಿ, ಮೊದಲನೇ ಹಂತದ R & R ನಲ್ಲಿ 172 ಹಳ್ಳಿಗಳನ್ನು ನಾವು rehabilitate ಮಾಡಿದ್ದೇವೆ. 136 R.C Centers ಕೂಡ ನಾವು ತೆಗೆದಿದ್ದೇವೆ. R.C Centersಗಳು ಯಾವ ರೀತಿ ದುಸ್ಥಿತಿಯಲ್ಲಿವೆ ಎನ್ನುವುದನ್ನು ಶ್ರೀಕಾಂತ್ ಕುಲಕರ್ಣಿಯವರು ಹೇಳುತ್ತಿದ್ದರು. ಶ್ರೀಕಾಂತ್‌ರವರು ಗಮನಕ್ಕೆ ಒಂದು ವಿಷಯವನ್ನು ತರಲು ಇಚ್ಛೆಪಡುತ್ತೇನೆ, ಹಿಂದಿನ ಎಲ್ಲಾ ಸರ್ಕಾರಗಳು ಒಮ್ಮೆ R.C Centers ಮಾಡಿದರೆ ನಮ್ಮ ಕೆಲಸ ಮುಗಿಯಿತು, ಅವೆಲ್ಲವೂ ಗ್ರಾಮ ಪಂಚಾಯಿತಿಗೆ hand over ಆಗಿವೆ, assumed charge ಎಂದು ಮಾಡಿ ಒಂದು ನಯಾಪೈಸೆಯನ್ನೂ ಕೂಡ R.C Centersಗಳಿಗೆ ಕೊಡುತ್ತಿರಲಿಲ್ಲ. ಆದರೆ ಇವತ್ತುನಾವು 136 R.C Centersಗಳಿಗೆ ಸಂಪೂರ್ಣವಾಗಿ ರಸ್ತೆಗಳು, ಶಾಲೆಗಳು ಮುಂತಾದ ಮೂಲಭೂತ ಸೌಕರ್ಯಗಳನ್ನು ಕೊಡಲು 112 ಕೋಟಿ ರೂಪಾಯಿಗಳನ್ನು ಒದಗಿಸಿ, ಅದನ್ನು ಬಿಡುಗಡೆ ಮಾಡಿದ್ದು, ಈಗಾಗಲೇ ಕಾಮಗಾರಿಗಳು ಕೂಡ ಪ್ರಾರಂಭವಾಗಿವೆ. ಸುಮಾರು 30 ವರ್ಷಗಳ ನಂತರ ಯಾವುದಾದರೂ ಸರ್ಕಾರ ಈ R.C. ಸೆಂಟರ್‌ಗಳಿಗೆ ಮೊತ್ತೊಮ್ಮೆ ಪುನಶ್ಚೇತನವನ್ನು ಮಾಡಿ ಸ್ಪಂದಿಸಿರುವಂಥಾದ್ದು ಇದ್ದರೆ ಅದು ನಮ್ಮ ಸರ್ಕಾರ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ, ಎರಡನೇ ಹಂತದಲ್ಲಿ ನಾವು ಮಾಡಬೇಕಾಗಿರುವ R & R ಗೆ ಒಂದು ವಿನೂತವಾಗಿರುವಂಥ

ಪಾಲಿಸಿಯನ್ನು ಮಾಡಬೇಕಾಗಿದೆ. ಅದಕ್ಕೆ ನಾವು ಈಗಾಗಲೇ ಎರಡು ಸಂಸ್ಥೆಗಳಿಗೆ consultancyಗೆ ಕೊಟ್ಟಿದ್ದೇವೆ. Advising R & R Frame Work for U.K.P.-III, C.M.D.R., Dharwad and Base Line Socio Economic Survey ಕೆಲಸಗಳಿಗಾಗಿ R.V. Associates ಎನ್ನುವವರಿಗೆ ಕೊಟ್ಟಿದ್ದೇವೆ. R & R Frame Work ಮಾರ್ಚ್ ಅಂತ್ಯದೊಳಗಾಗಿ ನಮಗೆ ಬರುತ್ತದೆ. Base Line Socio-Economic Survey ಬಹಳ ಮಹತ್ವದ್ದು. ಒಂದು ಊರಿನಲ್ಲಿ ಎಷ್ಟು ಕುಟುಂಬಗಳಿವೆ, ಅವರ economic condition ಏನು? ಅವರ ಸಾಮಾಜಿಕ ಪರಿಸ್ಥಿತಿ ಏನು? ಎಷ್ಟು ಮಕ್ಕಳಿದ್ದಾರೆ? ದುಡಿಯುವವನ ಮೇಲೆ ಎಷ್ಟು ಜನ ಅವಲಂಬಿತರಾಗಿದ್ದಾರೆ? ಈ ಎಲ್ಲ ಅಂಶಗಳನ್ನು ಸಂಪೂರ್ಣವಾಗಿ ನೋಡಿ ಒಂದು base lineಅನ್ನು create ಮಾಡುತ್ತಾರೆ. ಅದರ ಆಧಾರದ ಮೇಲೆ ನಮ್ಮ R & R Frame Work ಅನ್ನು ನಾವು ಮಾಡಿಕೊಳ್ಳಬೇಕಾಗುತ್ತದೆ. ಅದೂ ಕೂಡ ಫೆಬ್ರವರಿ ಅಂತ್ಯದಲ್ಲಿ ಮುಗಿಯುತ್ತದೆ. ನಾವು ಒಂದು ನೀತಿಯನ್ನು ಪ್ರತಿಪಾದನೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ನೀರಾವರಿ ಬಂದ ಮೇಲೆ ಅಲ್ಲಿನ ಜನರ ಜೀವನದ ಗುಣಮಟ್ಟ ಹೆಚ್ಚಾಗುತ್ತದೆ, ಆದಾಯ ಹೆಚ್ಚಾಗುತ್ತದೆ. ಮುಳುಗಡೆಯಿಂದಾಗಿ ಯಾರು ಜಮೀನು, ಮನೆ, ಊರು ಮತ್ತು ಬದುಕನ್ನು ಕಳೆದುಕೊಳ್ಳುತ್ತಾರೆ, ಅವರ ಜೀವನ ಗುಣಮಟ್ಟವು, ನೀರಾವರಿ ಬಂದ ಮೇಲೆ ಗುಣಮಟ್ಟ ಹೆಚ್ಚಾಗುವ ಜನರಿಗಿಂತ ಚೆನ್ನಾಗಿರಬೇಕು ಎನ್ನುವ ನೀತಿಯನ್ನು ನಾವು ಅನುಸರಿಸುತ್ತಿದ್ದೇವೆ. ಇವತ್ತಿನವರೆಗೆ ಆ ನೀತಿ ಇಲ್ಲದ ಕಾರಣದಿಂದ ಸಂತ್ರಸ್ತರು ನಿಜವಾಗಲೂ ಇವತ್ತಿಗೂ ಕೂಡ, ಸುಮಾರು 30 ವರ್ಷವಾದರೂ ಕೂಡ, ಎರಡನೇ ಜನರೇಷನ್ ಬಂದರೂ ಕೂಡ ಅತ್ಯಂತ ಸಂಕಷ್ಟದಲ್ಲಿದ್ದಾರೆ, ಈ ತಪ್ಪನ್ನು ಈ ಸಲ ನಾವು ಮಾಡಬಾರದೆಂದು ಹೇಳಿ ಮುಳುಗಡೆಯಾಗುವ 20 ಹಳ್ಳಿಗಳಿಗೆ ನಾವು ಆ ನೀತಿಯನ್ನು ಇವತ್ತು ಅಳವಡಿಸುತ್ತಿದ್ದೇವೆ. ಅದಕ್ಕಾಗಿ ಎಲ್ಲ data ಬಂದ ಕೂಡಲೇ ನಾವು R & R Frame Work ಅನ್ನು ಮಾಡುತ್ತೇವೆ.

ಇನ್ನು, ಸಿದ್ದು ಸವದಿಯವರು compensation ಬಗ್ಗೆ ಕೇಳಿದರು. ಈಗಾಗಲೇ ನಾವು F.R.L. ಸರ್ವೆಗಳನ್ನು ಮಾಡುತ್ತಿದ್ದೇವೆ. ಪ್ರಪ್ರಥಮ ಬಾರಿಗೆ ಒಂದು Lidar Technologyಯನ್ನು ಉಪಯೋಗ ಮಾಡುತ್ತಿದ್ದೇವೆ. ಒಂದು Laser camera ಅದು ಎಲ್ಲಿ ಹೋಗುತ್ತದೋ ಅದರ 500 ಮೀಟರ್ ಈ ಕಡೆ ಮತ್ತು 500 ಮೀಟರ್ ಆ ಕಡೆ ಸಂಪೂರ್ಣವಾಗಿ Laser beam ಅನ್ನು ಹಿಡಿದುಕೊಳ್ಳುತ್ತದೆ. ಅದಕ್ಕೆ ಒಂದು G.O. connection ಇರುತ್ತದೆ. Latitude, Longitude ಎಲ್ಲವೂ ಕೂಡ ಬರುತ್ತದೆ. ಒಂದು ಸಣ್ಣ ವಸ್ತುವಿನ ಮೇಲೆ ಒಂದು ಲಕ್ಷ ಲೇಸರ್ ಬೀಮ್‌ಗಳು ಬೀಳುತ್ತವೆ. ಅದನ್ನು ನಾವು ಮತ್ತೆ digitalನಲ್ಲಿ convert ಮಾಡಿ mappingನಲ್ಲಿ convert ಮಾಡುತ್ತೇವೆ. ಸುಮಾರು 6–8 ತಿಂಗಳುಗಳ ಕಾಲ ತೆಗೆದುಕೊಳ್ಳುವಂಥ ಸರ್ವೆಗಳನ್ನು 20–25 ದಿವಸಗಳಲ್ಲಿ ಮುಗಿಸುವಂಥ ಒಂದು ಹೊಸ ಟೆಕ್ನಾಲಜಿ ಇದೆ. ಈಗಾಗಲೇ ಅದರ ಪ್ರಯೋಗವನ್ನು ನಾವು ಹೇಮಾವತಿ ಮತ್ತು ಕಾವೇರಿಯಲ್ಲಿ ಮಾಡಿದ್ದು, ಅದು ಯಶಸ್ವಿಯಾಗಿದೆ. ಅದೇ ಟೆಕ್ನಾಲಜಿಯನ್ನು ಇಲ್ಲಿ ಉಪಯೋಗ ಮಾಡುತ್ತಿದ್ದೇವೆ. F.R.L. line fix ಮಾಡುವುದಕ್ಕೆ ಸುಮಾರು ಒಂದೂವರೆ ವರ್ಷ ತೆಗೆದು ಕೊಳ್ಳಬೇಕಾಗಿತ್ತು. ಅದನ್ನು ಇವತ್ತು ನಾವು ಕೇವಲ 3–4 ತಿಂಗಳಲ್ಲಿ ಮಾಡುತ್ತಿದ್ದೇವೆ. ಜನವರಿ ಅಂತ್ಯಕ್ಕೆ ಬಂದ ತಕ್ಷಣವೇ ಅದಕ್ಕೆ ನಾವು land acquisitionಅನ್ನು ಪ್ರಾರಂಭ ಮಾಡುತ್ತೇವೆ. land acquisition ಮಾಡುವಂಥ ಸಂದರ್ಭದಲ್ಲಿ ನಾವು consent acquisitionಗೆ ಮೊದಲನೇ ಪ್ರಾಶಸ್ತ್ಯ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. D.C.ಯವರ ನೇತೃತ್ವದಲ್ಲಿ consent acquisitionಗೆ ಒಂದು Valuation committeeಯನ್ನು ಮಾಡುತ್ತಿದ್ದೇವೆ. ಅಲ್ಲಿ ರೈತರಿಗೆ ಯಾವುದೇ ರೀತಿ ಅನ್ಯಾಯವಾಗದಂತೆ ನಾವು ನೋಡಿಕೊಳ್ಳುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

(ಈ ಹಂತದಲ್ಲಿ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು, ಬಾಗಲಕೋಟೆ ಟೌನ್ ಬಗ್ಗೆ ಶಾಸಕರಾದಂಥ ಚರಂತಿಮಠ್ ರವರು ಹೇಳಿದ್ದಾರೆ. ಸುಮಾರು ವರ್ಷಗಳಿಂದ ಅಲ್ಲಿ compensation ಕೊಡುವುದು ಬಾಕಿ ಇತ್ತು. ಹಲವಾರು ಚಳುವಳಿಗಳು, ಉಪವಾಸ ಸತ್ಯಾಗ್ರಹಗಳು ಕೂಡ ಅದಕ್ಕಾಗಿ ನಡೆದಿದ್ದವು. 521ಕ್ಕೆ ಕೊಡಬೇಕೇ ಅಥವಾ 523ಕ್ಕೆ ಕೊಡಬೇಕೇ ಎನ್ನುವುದು ತೀರ್ಮಾನವಾಗಿರಲಿಲ್ಲ. 523ಕ್ಕೆ ಕೊಡಬೇಕೆಂದು ತೀರ್ಮಾನವಾದ ಮೇಲೂ ಕೂಡ ಅವರಿಗೆ compensation ಸಿಕ್ಕಿರಲಿಲ್ಲ. ಹೆಚ್ಚುವರಿ compensation ಬಗ್ಗೆ ಹಲವಾರು ವ್ಯಾಜ್ಯಗಳು ಎಷ್ಟೋ ವರ್ಷಗಳಿಂದ ನಡೆದಿದ್ದವು. ಲೋಕ್ ಅದಾಲತ್‌ನಲ್ಲಿ ತೀರ್ಮಾನವಾದರೂ ಕೂಡ ಹಣ ಕೊಟ್ಟಿರಲಿಲ್ಲ. ನಾವು ಬಂದ ತಕ್ಷಣವೇ ಲೋಕ್ ಅದಾಲತ್ ಮುಖಾಂತರ ಸಂಪೂರ್ಣ compensation ಕೊಡುವಂಥ ಕೆಲಸವನ್ನು ಮಾಡಿದ್ದೇವೆ. ಮತ್ತು ಬಾಗಲಕೋಟೆ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಕ್ಕಾಗಿ ಪ್ರತಿವರ್ಷವೂ ಹಣ ಕೊಡುವಂಥ ತೀರ್ಮಾನವನ್ನು ಈಗಾಗಲೇ ಮಾಡಿದ್ದೇವೆ. ಈ ವರ್ಷ ಎರಡನೇ ಯೂನಿಟ್ಟಿಗೆ ಅಂದರೆ 523ರ ನಂತರ ಬರುವಂಥ ಪ್ರದೇಶಗಳಿಗೆ ರಸ್ತೆ, ಒಳಚರಂಡಿ, rain water drain, ವಿದ್ಯುದೀಕರಣ ಮುಂತಾದ infrastructure ಗಳನ್ನು ಸಂಪೂರ್ಣವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಡಬೇಕೆಂದು ಹೇಳಿ 550 ಕೋಟಿ ರೂಪಾಯಿಗಳ ಕಾಮಗಾರಿಗೆ ಈಗಾಗಲೇ ಟೆಂಡರ್ ಆಗಿದೆ. ಮುಂದಿನ ತಿಂಗಳಿಂದ ಆ ಕಾಮಗಾರಿ ಕೂಡ ಪ್ರಾರಂಭವಾಗುತ್ತದೆ. ಇಷ್ಟು ದೊಡ್ಡ ಮೊತ್ತದ ಹಣವನ್ನು ಬಾಗಲಕೋಟೆಗೆ ಪ್ರಥಮ ಬಾರಿಗೆ ಕೊಟ್ಟಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಉಲ್ಲೇಖ ಮಾಡಲು ಇಚ್ಛಿಪಡುತ್ತೇನೆ.

ಇನ್ನು, U.K.P. Stage-3 ನಲ್ಲಿ ಕೆಲಸವೇ ಪ್ರಾರಂಭವಾಗಿಲ್ಲ ಎನ್ನುವ ಮಾತನ್ನು ವಿರೋಧ ಪಕ್ಷದ ನಾಯಕರು ಹೇಳಿದರು. ಅದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾಗಿದೆ. ಏಕೆಂದರೆ ನಾವು ಮಾತನಾಡಬಾರದು, ನಾವು ಮಾಡುವಂಥ ಕೆಲಸಗಳು ಮಾತನಾಡಬೇಕು ಎನ್ನುವ

ಉದ್ದೇಶ ನಮ್ಮದಾಗಿದೆ. 9 ಉಪ ಯೋಜನೆಗಳು U.K.P. Stage-3ನಲ್ಲಿ ಬರುತ್ತವೆ. ಇವುಗಳ ಸಂಪೂರ್ಣವಾದಂಥ ವಿವರಗಳನ್ನು ಈಗಾಗಲೇ ನಾನು ರೈಟಿಂಗ್‌ನಲ್ಲಿ ಕೂಡ ಕೊಟ್ಟಿದ್ದೇನೆ. ಅವುಗಳೆಂದರೆ, ಮುಳುವಾಡ ಏತ ನೀರಾವರಿ ಯೋಜನೆ, ಚಿಮ್ಮಲಗಿ ಏತ ನೀರಾವರಿ ಯೋಜನೆ, ಇಂಡಿ ಏತ ನೀರಾವರಿ ಯೋಜನೆ (ಗುತ್ತಿಬಸವಣ್ಣ), ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ, ರಾಂಪೂರ ಏತ ನೀರಾವರಿ ಯೋಜನೆ, ಮಲ್ಲಾಬಾದ್ ಏತ ನೀರಾವರಿ ಯೋಜನೆ, ಕೊಪ್ಪಳ ಏತ ನೀರಾವರಿ ಯೋಜನೆ, ಹೆರಕಲ್ ಏತ ನೀರಾವರಿ ಯೋಜನೆ ಮತ್ತು ಭೀಮಾ ಫ್ಲ್ಯಾಂಕ್. Scheme-A, Scheme-B ಎನ್ನುವುದು ಬಹಳ ವರ್ಷಗಳಿಂದ ಇವತ್ತು Scheme-Bನಲ್ಲಿ ಯಾವುದೇ ಯೋಜನೆಗಳನ್ನು ತೆಗೆದಯಕೊಳ್ಳಬಾರದು ಎನ್ನುವ ಮನಸ್ಥಿತಿ ಹಿಂದಿನ ಸರ್ಕಾರಗಳಲ್ಲಿತ್ತು. ಆ ಸ್ಕೀಮನ್ನು ಮುಟ್ಟಬೇಡಿ, ಚರ್ಚೆ ಕೂಡ ಮಾಡಬೇಡಿ ಎನ್ನುವ ಮಟ್ಟದಲ್ಲಿತ್ತು. ನಾನು ಸಚಿವನಾಗಿ ಬಂದ ಮೇಲೆ ನಾರೀಮನ್ ಸಮೇತವಾಗಿ ಎಲ್ಲರ ಜೊತೆ ಚರ್ಚೆ ಮಾಡಿದೆವು. ಆಂಧ್ರದಲ್ಲಿ Scheme-A, Scheme-B ಇಲ್ಲ, ಮಹಾರಾಷ್ಟ್ರದಲ್ಲಿ ಇಲ್ಲ. ನಮ್ಮ ರಾಜ್ಯದಲ್ಲಿ ಮಾತ್ರ ಏಕೆ ಎಂದು ಕೇಳಿದಾಗ ಹೆಚ್ಚುವರಿ ನೀರು ಇರುವುದರಿಂದ ಅದನ್ನು ನಾವು ಮಾಡಿಕೊಂಡಿದ್ದೇವೆ ಎಂದು ಹೇಳಿದರು. ಹೆಚ್ಚುವರಿ ನೀರು ಬಂದಾಗ ಅದನ್ನು ಬಳಕೆ ಮಾಡಿಕೊಳ್ಳುವುದಕ್ಕೆ infrastructure create ಮಾಡಿದರೆ ಏನು ತಪ್ಪಿದೆ? ಎಷ್ಟು ನೀರು ಬರುತ್ತದೆ ಎನ್ನುವುದು ಟ್ರಿಬ್ಯುನಲ್‌ನಲ್ಲಿ ಅಂತಿಮವಾಗುತ್ತದೆ. ಕನಿಷ್ಠ ಹೆಚ್ಚುವರಿ ನೀರು ಏನು ಬರುತ್ತದೆ, ಅದರ ಆಧಾರದ ಮೇಲೆ ಏಕೆ ಮಾಡಬಾರದು ಎನ್ನುವ ರೀತಿಯಲ್ಲಿ ಹಲವಾರು ಚರ್ಚೆಗಳಾದ ಮೇಲೆ ನಾವು preliminary works ಮಾಡಬಹುದು ಎಂದು ಅವರು ಒಪ್ಪಿಗೆ ಕೊಟ್ಟರು. ಹಾಗೆ ಒಪ್ಪಿಗೆ ಕೊಟ್ಟ ತಕ್ಷಣ ಅದರ advantage ಅನ್ನು ನಾನು ತೆಗೆದುಕೊಂಡೆ. ಇದರಲ್ಲಿ 4 ಪ್ರಮುಖ ಯೋಜನೆಗಳಿವೆ. ಒಂದು ಚಿಮ್ಮಲಗಿ ಏತ ನೀರಾವರಿ ಯೋಜನೆ, ಇನ್ನೊಂದು ಮುಳುವಾಡ ಏತ ನೀರಾವರಿ ಯೋಜನೆ, ಇನ್ನೊಂದೆ ಇಂಡಿ ಏತ ನೀರಾವರಿ ಯೋಜನೆ

(ಗುತ್ತಿಬಸವಣ್ಣ), ಮತ್ತು ಮಲ್ಲಾಬಾದ್ ಏತ ನೀರಾವರಿ ಯೋಜನೆ. ನಾವೇನು ಮಾಡಿದೆವು ಎಂದರೆ Scheme-Aನಲ್ಲಿ ಎಲ್ಲೆಲ್ಲಿ ಸೇವಿಂಗ್ಸ್ ಮಾಡಲು ಸಾಧ್ಯವಿದೆ ಎಂದು ನೋಡಿ ಆ ಸೇವಿಂಗ್ಸ್‌ನಲ್ಲಿ ಕೆಲಸವನ್ನು ಪ್ರಾರಂಭ ಮಾಡಿದೆವು. ಆದರೆ Scheme-Bಗೆ ಏನು ಬೇಕೋ ಆ infrastructure ಅನ್ನೂ ನಾವು ಮಾಡಿಕೊಂಡೆವು. ಉದಾಹರಣೆಗೆ ಚಿಮ್ಮಲಗಿ ಏತ ನೀರಾವರಿ ಯೋಜನೆಯಲ್ಲಿ ಕೇವಲ–5 ಸಾವಿರ ಹೆಕ್ಟೇರ್ ಮಾತ್ರ ಸೇವಿಂಗ್ಸ್‌ನಲ್ಲಿತ್ತು. ಆದರೆ jackwell, intake, compose, delivery chamber, raising main, common canal, east canal, west canal ಇವೆಲ್ಲವನ್ನೂ ನಾವು Scheme-Aನ ಸೇವಿಂಗ್ಸ್ ಆಧಾರದಲ್ಲಿ, advance actionಆಗಿ ಕಂಪ್ಲೀಟ್‌ಆಗಿ ಮಾಡಲು ಸಿದ್ಧವಿದೆ. ಅದೇ ರೀತಿ ಇಂಡಿ ಏತ ನೀರಾವರಿ (ಗುತ್ತಿ ಬಸವಣ್ಣ) ಯೋಜನೆಯಲ್ಲಿ 97 ಇತ್ತು, ಅದರಲ್ಲಿ ಒಂದೆರಡು ಕಿಲೋಮೀಟರ್ aqueduct ಬಿಟ್ಟರೆ, 120ರವರೆಗೂ ಕಾಮಗಾರಿಯನ್ನು ಮಾಡಿದ್ದೇವೆ. ಮುಳವಾಡದ್ದು ಸಂಪೂರ್ಣವಾಗಿ topographical survey ಮಾಡಿದ್ದೇವೆ. ಮಲ್ಲಾಬಾದ್ first lift ಮಾಡಿ second and third lift irrigation ಗೆ ತಯಾರು ಮಾಡಿದ್ದೇವೆ. ನಾವು ಈ ಯೋಜನೆಯನ್ನು ಮಾಡಿ ಈ ಕೆಲಸವನ್ನು ನಾವು advance action ತೆಗೆದುಕೊಳ್ಳದೇ ಇದ್ದರೆ ಇದನ್ನೆಲ್ಲ ಇವತ್ತಿನಿಂದ ಪ್ರಾರಂಭ ಮಾಡಬೇಕಾಗುತ್ತಿತ್ತು. ಅಂದರೆ, ಇದನ್ನು ಸುಮಾರು 2009ರಿಂದ ಮಾಡಿದ್ದೇವೆ. ಅದಕ್ಕೆ ಅವರು ಯಾವುದೇ ಉದ್ಘಾಟನೆ ಪೂಜೆ ಇಲ್ಲದೆ ಇವರು ಮಾಡಿಬಿಟ್ಟಿದ್ದಾರೆಂದು ಹೇಳಿದರು. ಪೂಜೆ ಏಕೆ ಮಾಡಲಿಲ್ಲವೆಂದರೆ, ಇವತ್ತು Tribunal ನಡೆಯುವಂಥ ಸಂದರ್ಭದಲ್ಲಿ ಈ ಯೋಜನೆಗಳಿಗೆ ತೊಂದರೆ ಆಗದ ರೀತಿಯಲ್ಲಿ, ನಮ್ಮ ಕೆಲಸಗಳೂ ಆಗಬೇಕು, ಯಾವುದೇ ರೀತಿ ಕಾನೂನಿನ ತೊಂದರೆ ಆಗಬಾರದೆನ್ನುವ ದೃಷ್ಟಿಯಿಂದ ನಮ್ಮ ಪ್ರಚಾರಕ್ಕಿಂತ ನಮ್ಮ ರಾಜ್ಯದ ಹಿತಾಸಕ್ತಿ ಮುಖ್ಯವೆಂದು ಆ ಕೆಲಸವನ್ನು ಮಾಡಿದ್ದೇವೆನ್ನುವುದನ್ನು ಅತ್ಯಂತ ಸಂತೋಷದಿಂದ ಹೇಳುತ್ತೇನೆ. ಗುತ್ತಿಬಸವಣ್ಣದಲ್ಲಿ 97 ಇದ್ದದ್ದು

ಇವತ್ತು 110 ರವರೆಗೆ ನೀರು ಕೊಟ್ಟಿದ್ದೇವೆ. ಬಹುತೇಕವಾಗಿ, ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ ಮಿಕ್ಕಿಂಥ 127ರವರೆಗೆ ನೀರು ಕೊಡುವ ವ್ಯವಸ್ಥೆ ಮಾಡುತ್ತೇವೆ. ನಾನು ಡಾ: ಸಾರ್ವಭೌಮ ಬಗಲಿಯವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. 147 ರವರೆಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭ ವಾಗಿದೆ. 147ರವರೆಗೂ ಕೂಡ ಕೆಲಸವನ್ನು ಇನ್ನೆರಡು ತಿಂಗಳಲ್ಲಿ ಆ ಕೆಲಸವನ್ನು ಕೂಡ ನಾವು ಪ್ರಾರಂಭ ಮಾಡುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಚಿಮ್ಮಲಗಿ ಏತ ನೀರಾವರಿ ಕೂಡ ಚಿಮ್ಮಲಗಿಯಲ್ಲಿ ಇವತ್ತು head work ಸಂಪೂರ್ಣವಾಗಿ ಮುಗಿದಿದೆ. East canal, west canal 50 ಕಿ.ಮೀ.ವರೆಗೂ ಈಗಾಗಲೇ tender ಆಗಿದೆ. ಮುಂದೆ 100 ಕಿ.ಮೀ. ವರೆಗೆ ಕೂಡ ಟೆಂಡರ್ ಆಗುವ ಪ್ರಕ್ರಿಯೆ ನಡೆಯುತ್ತಿದೆ. ಆದ್ದರಿಂದ ಈ advance action ತೆಗೆದು ಕೊಂಡಿರುವುದು ನಮ್ಮ ಸರ್ಕಾರದ ದಿಟ್ಟ ನಿಲುವು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು, ನಾರಾಯಣಪುರ ಬಲದಂಡೆ, ರಾಂಪುರ ಇವೆಲ್ಲವನ್ನೂ ಕೂಡ ಈಗಾಗಲೇ ಕ್ರಮ ಕೈಗೊಂಡು 9 ಯೋಜನೆಯಲ್ಲಿ ಭೀಮಾ ಫ್ಲಾಂಕ್, ಮತ್ತು ಹರಿಕಲ್, ಕೊಪ್ಪಳ ಇವುಗಳನ್ನು ಬಿಟ್ಟು ಬೇರೆ ಎಲ್ಲವೂ ground ಆಗಿದೆ. ಕೊಪ್ಪಳ ಮತ್ತು ಹರಿಕಲ್ ಈಗಾಗಲೇ ಅವೆಲ್ಲಕ್ಕೂ ಕೂಡ DPR ಸಿದ್ಧವಾಗಿದೆ. ಬಹುತೇಕವಾಗಿ ಮುಂದಿನ ತಿಂಗಳು administrative sanction ಕೊಡುತ್ತೇವೆ. ನಾವು ಕೂಡ tender ಪ್ರಕ್ರಿಯೆ ಪ್ರಾರಂಭ ಮಾಡುತ್ತೇವೆ. ಅಂದರೆ 9 ಯೋಜನೆಗಳಲ್ಲಿ 8 ಯೋಜನೆಗಳಿಗೆ ನಾವು administrative sanction ಕೊಟ್ಟು ಒಂದು ವರ್ಷದೊಳಗಡೆ ಅವುಗಳನ್ನು ground ಮಾಡುವುದಕ್ಕೆ ಎಲ್ಲಾ ಸಿದ್ಧತೆ ಮಾಡಿ ground ಮಾಡುತ್ತಿದ್ದೇವೆನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪ ಡುತ್ತೇನೆ. ವಿವರಗಳನ್ನು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಇದರ ಜೊತೆಗೆ ಇವತ್ತು R&R policyಯನ್ನೂ ಕೂಡ simultaneously ಮಾಡುವ ದೃಷ್ಟಿಯಿಂದ ಈಗಾಗಲೇ ನಾನು ಹೇಳಿದಂತೆ ಆ ಕ್ರಮವನ್ನು

ನಾವು ಜರುಗಿಸುತ್ತಿದ್ದೇವೆ. ಇವತ್ತು ನಮಗೆ ಹಣಕಾಸಿನ ಕೊರತೆ ಇದೆ, ನೀವು ಹೆಚ್ಚಿನ ಹಣ ಒದಗಿಸಿಲ್ಲ ಎನ್ನುವ ಆರೋಪ ಬಂದಿತ್ತು. ನಾವು ನಮ್ಮ ಬಜೆಟ್‌ನಲ್ಲಿ 24–25% ಇಟ್ಟಿದ್ದೇವೆ, ನೀವು ಅದನ್ನು 14%ಗೆ ಕಡಿಮೆ ಮಾಡಿದ್ದೀರಿ ಎನ್ನುವ ಮಾತನ್ನು ಹೇಳಿದರು. ನಾನು ಸದನದ ಗಮನಕ್ಕೆ ತರುವುದೇನೆಂದರೆ, 2006–07ರಲ್ಲಿ KBJNL ಗೆ 1938 ಕೋಟಿ ರೂಪಾಯಿಗಳನ್ನು ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ ಒದಗಿಸಿದ್ದರು. ಆದರೆ, ಆ 1938 ಕೋಟಿ ರೂಪಾಯಿಗಳಲ್ಲಿ 1255 ಕೋಟಿ ರೂಪಾಯಿಗಳು ಸಾಲ ತೀರಿಸುವುದಕ್ಕೆ ಹೋಯಿತು. ಇದು ಅನಿವಾರ್ಯ, ಅವರು ಕೊಡಲೇ ಬೇಕಾಯಿತು. ಸಾಲ ತೀರಿಸುವುದಕ್ಕೆ instalment ಬಂದಿತ್ತು. ಅಂದರೆ, 64% of the budget provision made for KBJNL for Upper Krishna Project, ಆ ವರ್ಷ 64% ಹಣ ಸಾಲ ತೀರಿಸುವುದಕ್ಕೆ ಹೋಗಿದೆ. ಹಾಗಾದರೆ, ಕಾಮಗಾರಿಗೆ ಇನ್ನೆಷ್ಟು ಹಣ ಉಳಿದಿದೆ ಎನ್ನುವುದನ್ನು ತಾವು ಯೋಚನೆ ಮಾಡಿ. ಅದೇ ರೀತಿ 2007–08ರಲ್ಲಿ 57% of the budget provision ಸಾಲ ತೀರಿಸುವುದಕ್ಕೆ ಹೋಗಿದೆ. ಇವತ್ತು ಕೇವಲ 10% ಗೆ ಅದನ್ನು ನಾವು ಇಳಿಸಿದ್ದೇವೆ. ಸಾಲವನ್ನೂ ತೀರಿಸಿದ್ದೇವೆ, ಕೆಲಸವನ್ನೂ ಕೂಡ ಮಾಡಿದ್ದೇವೆ, ಸುಮಾರು 61 ಸಾವಿರ ಎಕರೆ ಪ್ರದೇಶ ಉಳಿದಿರುವುದನ್ನೂ ಕೂಡ UKP ಯಲ್ಲಿ ನಾವು ನೀರಾವರಿಗೆ ತಂದಿದ್ದೇವೆ. ಅದರ ಜೊತೆಗೆ ಈ ಸವಳು–ಜವಳು ಏನಾಗಿದೆ ಎಂದರೆ ರೈತರು ಯಥೇಚ್ಛವಾಗಿ ನೀರು ಬಳಕೆ ಮಾಡಿ ಎಲ್ಲಾ ಹಳ್ಳಗಳನ್ನು ವ್ಯವಸಾಯಕ್ಕೆ ಉಪಯೋಗ ಮಾಡಿಕೊಂಡಿದ್ದರಿಂದ ನೀರು ಹೊರಗಡೆ ಹೋಗದೆ water clogging ಆಗಿದೆ. ಇದರಿಂದ ಭೂಮಿ ಸವಳು–ಜವಳು ಆಗಿದೆ, agricultural production ಇಲ್ಲ, ಈ ತರಹ ಸುಮಾರು 20 TMC ನೀರು ಇಡೀ ರಾಜ್ಯದಲ್ಲಿ ಇವತ್ತು lock ಆಗಿದೆ. ಸವಳು–ಜವಳು ವಿಶೇಷ ಕಾರ್ಯಕ್ರಮ ಮಾಡಿ ಸುಮಾರು ಎರಡೂವರೆ ಲಕ್ಷಕ್ಕಿಂತ ಹೆಚ್ಚು ಪ್ರದೇಶವನ್ನು ಈ ಸವಳು–ಜವಳಿನಿಂದ ಕಳೆದ ಎರಡು ವರ್ಷಗಳಲ್ಲಿ ನಾವು ತೆಗೆದಿದ್ದೇವೆ.

606 ಕೋಟಿ ರೂಪಾಯಿಗಳನ್ನು Government of India ಜೊತೆ MoU ಮಾಡಿಕೊಂಡು ಈ ಕೆಲಸವನ್ನು ನಾವು ಮಾಡಿದ್ದೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು, ಎಷ್ಟು power ಬೇಕೆನ್ನುವ ವಿಚಾರವನ್ನೂ ಕೂಡ ಅವರು ಹೇಳಿದರು. ಈ ಎಲ್ಲಾ 9 ಏತ ನೀರಾವರಿ ಯೋಜನೆಗಳಿಗೆ 240 daysಗೆ, ಒಂದು ವರ್ಷಕ್ಕೆ 240 ದಿವಸ ಎಂದು ತಿಳಿದಕೊಂಡು 1172.62 MU ನಷ್ಟು ಬೇಕಾಗುತ್ತದೆ. ಇದನ್ನು ಒದಗಿಸುವುದಕ್ಕೆ ನಾವು ನಮ್ಮ power Minister ರವರ ಜೊತೆಗೆ ಮತ್ತು ಇಲಾಖೆಯ ಜೊತೆಗೆ ಸಂಪರ್ಕವನ್ನು ಮಾಡುತ್ತಿದ್ದೇವೆ. ನಾವು ನಮ್ಮ canal ಮೇಲೆ solar energy ಅನ್ನು ಬಳಕೆ ಮಾಡುವುದಕ್ಕೆ ಈಗಾಗಲೇ ಒಂದು draft proposal ready ಆಗಿದೆ. ಅದಕ್ಕೆ ಇಂಧನ ಇಲಾಖೆಯವರು solar policy ಬಂದ ತಕ್ಷಣವೇ ನಮ್ಮ canal ಮೇಲೆ solar power ಅನ್ನು ತಯಾರು ಮಾಡುವಂಥ ಕೆಲಸಕ್ಕೆ ನಾವು immediatly ಚಾಲನೆಯನ್ನು ಕೊಡಲಿದ್ದೇ ವೆನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೇಪಡುತ್ತೇನೆ. ಇದರ ಜೊತೆಗೆ, ಮುಳುವಾಡ ಏತ ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ, ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ಕಾಮಗಾರಿಗೆ ಈಗಾಗಲೇ ನಾವು ಅಡಿಗಲ್ಲು ಹಾಕಿ ಕಾಮಗಾರಿ ಕೂಡ ಪ್ರಾರಂಭವಾಗುತ್ತದೆ. ಮುಳುವಾಡ ಏತ ನೀರಾವರಿ ಯೋಜನೆಯಲ್ಲಿ 5 ಲಕ್ಷಕ್ಕಿಂತ ಹೆಚ್ಚು ಎಕರೆ ಪ್ರದೇಶ ಇವತ್ತು ನೀರಾವರಿ ಆಗಲಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಎಲ್ಲಾ ಕೆಲಸಗಳನ್ನು ಮಾಡಿದ ಪರಿಣಾಮದಿಂದ ಒಂದು vision ಅನ್ನು draw ಮಾಡಿದ್ದೇವೆ. ಏನೆಂದರೆ, UKP stage-3 ಯಲ್ಲಿ ಈಗಿರುವಂಥ ಕೆಲಸ ಮತ್ತು ವೇಗ ಇದು ಇದೇ ತರಹ ಹೋದರೆ ಮುಂದಿನ 2013–14ರ ಅಂತ್ಯದೊಳಗೆ ಸುಮಾರು ಒಂದು ಲಕ್ಷ ಎಕರೆಗೆ ನೀರಾವರಿಯನ್ನು ನಾವು ಒದಗಿಸಬಹುದು. 3 ವರ್ಷಗಳ ನಂತರ ಅಂದರೆ 2015–16ರಲ್ಲಿ 5 ಲಕ್ಷದ 40 ಸಾವಿರ ಎಕರೆಗೆ ನೀರಾವರಿಯನ್ನು ನಾವು ಒದಗಿಸಬಹುದು. ಅಂದರೆ ಸುಮಾರು 6–6 1/2 ಲಕ್ಷ ಎಕರೆಯನ್ನು 3

ವರ್ಷಗಳಲ್ಲಿ ನಾವು ನೀರಾವರಿಗೆ ಅಳವಡಿಸಬಹುದು. ಅದೇ ರೀತಿ ಎರಡನೇ ಹಂತದ ಕೆಲಸಕ್ಕೆ ಕೂಡ ವೇಗವನ್ನು ಕೊಟ್ಟರೆ ಇನ್ನಷ್ಟು ಹೆಚ್ಚಿನ ಭೂಮಿಯನ್ನು ನಾವು ನೀರಾವರಿಗೆ ಅಳವಡಿಸಬಹುದೆನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು ಇವತ್ತಿನ ಹಣಕಾಸಿನ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ಹಣಕಾಸಿನ ವ್ಯವಸ್ಥೆಗಳನ್ನು ನೀವು ಸರಿಯಾಗಿ ಮಾಡಿಲ್ಲ ಎನ್ನುವ ಮಾತನ್ನು ಕೂಡ ಅವರು ಹೇಳಿದರು. ಇವತ್ತು ನಾವು ಇದನ್ನು 7 ವರ್ಷಗಳಲ್ಲಿ ಮಾಡುತ್ತೇವೆಂದು road map ಮಾಡಿದ್ದೇವೆ. ಮೊದಲನೇ ವರ್ಷ 1%, ಎರಡನೇ ವರ್ಷ 7%, ಮೂರನೇ ವರ್ಷ 20%, ಆಮೇಲೆ 28%, 25%, 13%, 6% ಈ ತರಹ road map ಮಾಡಿದ್ದೇವೆ. ಈ ವರ್ಷ 1377 ಕೋಟಿ ರೂ. ಇದೆ. ಅದರ ಜೊತೆಗೆ ನಮ್ಮ ಬಜೆಟ್‌ನಲ್ಲಿ 1194 ಕೋಟಿ ರೂ. Budget provision ಇದೆ ಮತ್ತು ನಮ್ಮ HUDCO ದಿಂದ 628 ಕೋಟಿ ರೂ. ಸಾಲಕ್ಕೆ ಅನುಮತಿ ಸಿಕ್ಕಿದೆ. ನಮ್ಮ IEBR bonds ನಿಂದ 700 ಕೋಟಿ ರೂ. ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. Last year ನಾವು bond ತೆಗೆದುಕೊಂಡಿರುವ opening balance 512 ಕೋಟಿ ರೂ. ಇದೆ. ಒಟ್ಟು 3034 ಕೋಟಿ ರೂ. ಪ್ರಸ್ತುತ ವರ್ಷದಲ್ಲಿ ನಾವು ಕಾಮಗಾರಿ ತೆಗೆದು ಕೊಳ್ಳುವುದಕ್ಕೆ ಅವಕಾಶವಿದೆ. ಅದರಲ್ಲಿ 2500 ಕೋಟಿ ರೂ.ಗಳಿಗಿಂತ ಹೆಚ್ಚು ಕೆಲಸಗಳಿಗೆ ನಾವು ಮುಂದಿನ ಜನವರಿ, ಫೆಬ್ರವರಿ ಅಂತ್ಯದೊಳಗೆ ಕೂಡ ground ಮಾಡುತ್ತಿದ್ದೇವೆ. ಆದ್ದರಿಂದ, ಹಣಕಾಸಿನ ಕೊರತೆ ಇಲ್ಲ. ಯೋಜನೆಯನ್ನು ಮಾಡಿದ್ದೇವೆ. Advance action ಕೂಡ ತೆಗೆದುಕೊಂಡಿ ದ್ದೇವೆ, ಒಂದು vision ಕೂಡ ಇದೆ. ಆದ್ದರಿಂದ, ಉತ್ತರ ಕರ್ನಾಟಕದ ರೈತರ, ಸಾಮಾನ್ಯ ಜನರ ಜೀವನದಿ ಇರುವ ಕೃಷ್ಣಾಕ್ಕೆ ಸಂಪೂರ್ಣವಾಗಿ ನಮ್ಮ ಸರ್ಕಾರ ಬದ್ಧತೆಯಿಂದ ಕೆಲಸ ಮಾಡಿದೆ. ಕಾಳಜಿ ಇದೆ. ಇದನ್ನು ಸಮಯಬದ್ಧವಾಗಿ ಈ UKP Stage-3 ಅನ್ನು ಅತ್ಯಂತ ಯಶಸ್ವಿಯಾಗಿ ನಾವು ಕಾರ್ಯಾಚರಣೆ ಮಾಡುತ್ತಿದ್ದೇವೆ. ಕನ್ನಡ ಗಂಗಾ ಎನ್ನುವ

ಕಾರ್ಯಕ್ರಮವನ್ನು ನಮ್ಮ ಸರ್ಕಾರ ಮಾಡಿದೆ. ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಯೋಜನೆಗೆ ಈಗಾಗಲೇ ಇಡೀ ವಿಜಾಪುರ ಜಿಲ್ಲೆಗೆ ಕುಡಿಯುವ ನೀರಿಗಾಗಿ 960 ಕೋಟಿ ರೂ.ಗಳ ಅನುದಾನ ಬೇಕಾಗುತ್ತದೆ, ಇದಕ್ಕೆ DPR ಈಗಾಗಲೇ ಆಗಿದೆ. ಇದಕ್ಕೆ ಸುಮಾರು 4 ಟಿಎಂಸಿ ನೀರಿನ ನಮ್ಮ ನೀರಾವರಿ ಇಲಾಖೆಯಿಂದ ಅನುಮತಿಯನ್ನೂ ಸಹ ಇದಕ್ಕೆ ಕೊಟ್ಟಿದೆ. ಅಂದರೆ, ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಪ್ರಥಮ ಪ್ರಾಶಸ್ತ್ಯ, ನೀರಾವರಿಗೆ ಅಷ್ಟೇ ಪ್ರಾಶಸ್ತ್ಯವನ್ನು ಇವತ್ತು ನಾವು ಕೊಟ್ಟಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ, ನಮ್ಮ ಶಾಸಕರು ಹಲವಾರು ವಿಚಾರಗಳನ್ನು ಹೇಳಿದ್ದಾರೆ. ಕುಡಚಿ, ಬಬಲೇಶ್ವರ ಯೋಜನೆಯನ್ನು ಕೂಡಲೇ ಮಾಡಬೇಕೆಂದು ಶ್ರೀಕಾಂತ್ ಎಸ್. ಕುಲಕರ್ಣಿಯವರು ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಅವರಿಗೆ ಗೊತ್ತಿದೆ. ಅಲೊಕೇಷನ್ ಇರಲಿಲ್ಲ, ನಾನು ಬಂದ ಮೇಲೆ 2.84 ಟಿಎಂಸಿ ನೀರಿಗೆ ಅಲೊಕೇಷನ್ ಮಾಡಿದ್ದೇನೆ. DPR ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ. ಆದಷ್ಟು ಬೇಗನೆ DPR ವರದಿಯನ್ನು ತೆಗೆದುಕೊಂಡು ಆ ಕಾಮಗಾರಿಯನ್ನು ನಾವು ತೆಗೆದುಕೊಳ್ಳುತ್ತೇವೆ. ಇದಕ್ಕೆ ಹೆಚ್ಚುವರಿಯಾಗಿ 1 ಟಿಎಂಸಿ ನೀರನ್ನು ಅಲೊಕೇಷನ್ ಕೊಡುವುದಕ್ಕೆ Revised Master Plan ನಲ್ಲಿ ಪರಿಶೀಲನೆ ಯಲ್ಲಿದೆ. ಕೂಡಲೇ ಅದಕ್ಕೂ ಕೂಡ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅದೇರೀತಿ, ಚಿಮ್ಮಡ, ಶಾಸನಲಟ್ಟಿ ಯೋಜನೆಯೂ ಕೂಡ ಈಗಾಗಲೇ ನಮ್ಮ ಪರಿಶೀಲನೆಯಲ್ಲಿದೆ. ಅದೂ ಸಹ ನಮ್ಮ ಹಿನ್ನೀರಿನಿಂದ ಏನು ಆಗಬೇಕಾಗಿದೆ, ಅದಕ್ಕೆ ಈಗಾಗಲೇ feasibility study ಮಾಡಿ ಎನ್ನುವ ಆದೇಶವನ್ನು ಕೊಟ್ಟಿದ್ದೇನೆ. ಅದು ಬಂದ ತಕ್ಷಣ ಆ feasibility ನೋಡಿಕೊಂಡು ಕೂಡಲೇ ಚಾಲನೆಯನ್ನು ಕೊಡುತ್ತೇವೆ. ಇನ್ನು, ಬಸವೇಶ್ವರ ಏತ ನೀರಾವರಿ ಯೋಜನೆ ಬಗ್ಗೆ ನಮ್ಮ ಅಥಣಿ ಮತ್ತು ಕಾಗವಾಡ ತಾಲ್ಲೂಕುಗಳಲ್ಲಿ ಅತ್ಯಂತ ಬರಗಾಲ ಇರುವಂಥ ಪರಿಸ್ಥಿತಿ ಇರುವುದರಿಂದ, ಆ ಎರಡು ತಾಲ್ಲೂಕುಗಳಿಗೆ ನೀರು ಒದಗಿಸುವ ಸಲುವಾಗಿ ಅಲ್ಲೇನು ಹೋರಾಟ ನಡೆಯುತ್ತಿತ್ತು, ಅದಕ್ಕೆ

ಈಗಾಗಲೇ Revised Master Plan ನಲ್ಲಿ proposal ಕೂಡ ಇದೆ. ಅದರ report ಬಂದ ತಕ್ಷಣವೇ ಅದರ DPR ಅನ್ನು ಸಿದ್ಧತೆ ಮಾಡಿ ಅದಕ್ಕೂ ಕೂಡ ಖಂಡಿತವಾಗಿ ಚಾಲನೆ ಕೊಡುತ್ತೇವೆ. ಇನ್ನು, ನಮ್ಮ ವಿಠಲ ಧೋಂಡಿಬಾರವರು 2–3 ವಿಚಾರಗಳನ್ನು ಹೇಳಿದ್ದಾರೆ. ಭೀಮಾ ನದಿಯ ವ್ಯಾಪ್ತಿಯಲ್ಲಿ ಬರುವ ಸಂಕ ಕೆರೆ ತುಂಬಿಸುವ ಬಗ್ಗೆ ಹೇಳಿದ್ದಾರೆ. ಇದಕ್ಕೆ 0.15 ಟಿಎಂಸಿ ನೀರು ಬೇಕಾಗುತ್ತದೆ. ಇದನ್ನೂ ಕೂಡ ನಮ್ಮ ಭೀಮಾ ನದಿಯ ನೀರಿನಲ್ಲಿ ಒಟ್ಟಾರೆ savings ಏನು ಬರುತ್ತದೆ, ಅದನ್ನು ತೆಗೆದುಕೊಂಡು ಮಾಡುವುದಕ್ಕೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದೇವೆ. ಅದಕ್ಕೆ ಈಗಾಗಲೇ ನಾನು ಆಜ್ಞೆಯನ್ನು ಕೂಡ ಕೊಟ್ಟಿದ್ದೇನೆ. ಅದನ್ನು ಸಂಪೂರ್ಣ ವಾಗಿ ಸರ್ವೆ ಮಾಡಿ, ಅದರ feasibility report ಬಂದ ಮೇಲೆ ಅದಕ್ಕೆ ಖಂಡಿತವಾಗಿಯೂ ಚಾಲನೆಯನ್ನು ಕೊಡುತ್ತೇನೆ. ಚಿಮ್ಮಲಗಿ ಏತ ನೀರಾವರಿ ಯೋಜನೆಯಿಂದ ಚಡಚಣ–ಇಂಡಿ ಏತ ನೀರಾವರಿ ಯೋಜನೆವರೆಗೂ ಕ್ಷೇತ್ರಗಳ ನೀರಾವರಿ ಸೌಲಭ್ಯಗಳ ಕುರಿತು ಹೆಚ್ಚುವರಿಯಾಗಿ ಬೇಕಾಗಿರುವ ನೀರಿನ ಬಳಕೆ ಬಗ್ಗೆ detailed investigative survey ಮಾಡಬೇಕಾಗುತ್ತದೆ. ಅದಕ್ಕೂ ಕೂಡ ಈಗಾಗಲೇ ಆಜ್ಞೆ ಮಾಡಿದ್ದೇನೆ. ಬುಯ್ಯಾರ್ ಟ್ಯಾಂಕ್ ಬಗ್ಗೆ ಏನು ಹೇಳಿದ್ದಾರೆ, ಅದೂ ಕೂಡ ನಮ್ಮ savings ನಲ್ಲಿ ಬರುತ್ತದೆ. savings ಎಷ್ಟಾಗುತ್ತದೆಂಬುದನ್ನು ನೋಡಿಕೊಂಡು ಅದಕ್ಕೂ ಕೂಡ ಚಾಲನೆಯನ್ನು ಕೊಡುತ್ತೇವೆ. ರಾಮಚಂದ್ರಪ್ಪ ಜಗಳೂರು ರವರ ಕ್ಷೇತ್ರಕ್ಕೆ ಈಗಾಗಲೇ 2.5 ಟಿಎಂಸಿ ನೀರನ್ನು ಹಂಚಿಕೆ ಮಾಡಿದ್ದೇವೆ. DPR ಸಿದ್ಧವಾಗಿದೆ. ಸುಮಾರು 16 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕೊಡಲು ಆದಷ್ಟು ಬೇಗನೆ ಅನುಮತಿಯನ್ನು ಕೊಡುತ್ತೇವೆ. ನೀರಿನ ಅವಶ್ಯಕತೆ ಪ್ರತಿವರ್ಷ ಕೂಡ ಹೆಚ್ಚಾಗುತ್ತದೆ. ಜನಸಂಖ್ಯೆ ಹೆಚ್ಚಾದಹಾಗೆ ಹೆಚ್ಚಾಗುತ್ತದೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ : Upper Bhadra ಬಗ್ಗೆ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ : ನೀರಿನ ಬಳಕೆ ಜನಸಂಖ್ಯೆಯಂತೆ ಹೆಚ್ಚಾಗುತ್ತದೆ. ಆದರೆ, ಇವತ್ತು climate condition variation ಇರುವು

ದರಿಂದ ನಮ್ಮ rain fed area ಏನಿದೆ ಅಲ್ಲಿ ಕಡಿಮೆಯಾದಾಗ ಇಡೀ ನದಿ ಪಾತ್ರದ ಜನತೆಗೆ ತೊಂದರೆಯಾಗುತ್ತದೆ. ಇದರಲ್ಲಿ ಆಧುನಿಕತತೆ ತರಬೇಕೆನ್ನುವ ದೃಷ್ಟಿಯಿಂದ ನಮ್ಮ ಸರ್ಕಾರ ಕಳೆದ 4 ವರ್ಷಗಳಲ್ಲಿ ಹಲವಾರು ಕ್ರಮಗಳನ್ನು ಜರುಗಿಸಿದೆ. ಮೊದಲನೆಯದಾಗಿ, ನಮ್ಮ ನೀರಿನ accountability ಇರಲಿಲ್ಲ. Audit ಅಂತೂ ದೂರದ ಮಾತು. ಯಾವ ನೀರನ್ನು ಯಾರು, ಎಷ್ಟು ಬಳಕೆ ಮಾಡುತ್ತಿದ್ದಾರೆ? Cropping pattern ಇರಲಿಲ್ಲ. ನಾವು ಯೋಜನೆ ಮಾಡುವುದು semi-dry cropಗೆ. ಗೋವಿನ ಜೋಳ, ಜೋಳಕ್ಕೆ ಮಾಡಿದರೆ ಬತ್ತ ಬೆಳೆಯುತ್ತಾರೆ. ಬತ್ತ ಬೆಳೆದಂಥ ಸಂದರ್ಭದಲ್ಲಿ ಖಂಡಿತವಾಗಿಯೂ ಹಿಂಭಾಗದ ಜನರಿಗೆ ನೀರು ಸಿಗುವುದಿಲ್ಲ. ಮತ್ತೆ ನೀರೇ ಬಂದಿಲ್ಲವೆನ್ನುವ ಆರೋಪ ಕೂಡ ಮಾಡುತ್ತಾರೆ. ಒಂದು ಬತ್ತದ ಬೆಳೆಯಲ್ಲ, ಒಂದು ವರ್ಷದಲ್ಲಿ ಎರಡು ಬತ್ತದ ಬೆಳೆಯನ್ನು ಬೆಳೆಯುವಂಥ ಪದ್ಧತಿ ಕೂಡ ಪ್ರಾರಂಭವಾಗಿದೆ. ಕಬ್ಬು ಬೆಳೆಯುತ್ತಾರೆ. ನಿರಂತರವಾಗಿ ಇದಕ್ಕೆ ನೀರು ಬೇಕು. ಇವತ್ತು ಅವರು ಹೊಳೆಯಿಂದ, canal ನಿಂದ ನೀರು ತೆಗೆದುಕೊಳ್ಳುತ್ತಾರೆ. ಆದರೂ ಕೂಡ ಬೇಸಿಗೆಯಲ್ಲಿ ನೀರಿನ ಕೊರತೆ ಇದೆ ಎನ್ನುವ ಒಂದು ವಿಚಾರ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ, ಇದಕ್ಕೇನಾದರೂ ಶಾಶ್ವತವಾದ ಪರಿಹಾರವಾಗಬೇಕಾದರೆ, ನಮ್ಮ capital cost ಹೆಚ್ಚಿಗೆಯಾದರೂ ಚಿಂತೆ ಇಲ್ಲ, ದೂರಗಾಮಿ ದೃಷ್ಟಿಯಿಂದ ನಾವು micro irrigation ಗೆ ಅತಿ ಹೆಚ್ಚು ಮಹತ್ವ ಕೊಡುವಂಥ ಒಂದು ತೀರ್ಮಾನವನ್ನು ಮಾಡಿದ್ದೇವೆ. ಈಗ ಅದರ trial basis ಮೇಲೆ ಶಿಗ್ಗಾಂವ್ ಏತ ನೀರಾವರಿಯಲ್ಲಿ 26 ಸಾವಿರ ಎಕರೆ ಪ್ರದೇಶದಲ್ಲಿ sprinkler ನಿಂದ ಮಾಡಿದ್ದೇವೆ. ಅದು ಬಹಳ ಯಶಸ್ವಿಯಾಗಿದೆ. ಎಲ್ಲಾ ರಾಜ್ಯದ ಜನರೂ ಬಂದು ನೋಡಿಕೊಂಡು ಹೋಗುತ್ತಿದ್ದಾರೆ. ಇಡೀ ದೇಶದಲ್ಲೇ ಇದು ಮಾದರಿಯಾಗಿದೆ. ಅದೇರೀತಿ, ದೊಡ್ಡನಗೌಡರವರ ಕ್ಷೇತ್ರದಲ್ಲಿ 60 ಸಾವಿರ ಎಕರೆಗೆ drip irrigation ಗೆ ಚಾಲನೆಯನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಇದು ವಿಶ್ವದಲ್ಲಿಯೇ single plot drip ಇರುವಂಥ ಅತಿ

ಹೆಚ್ಚಿನ ಪ್ರದೇಶಕ್ಕೆ ನಾವು ಮಾಡಿದ್ದೇವೆ. ಅದನ್ನು ಬಳಕೆ ಮಾಡುವುದರಲ್ಲಿ ಮತ್ತು ನಿರ್ವಹಣೆಯಲ್ಲಿ ರೈತರ ಸಹಕಾರ ಸಿಕ್ಕಿದ್ದೇ ಆದರೆ ಬಹಳ ಅದ್ಭುತವಾದ ಕೆಲಸವಾಗುತ್ತದೆ. ಶೇ.50–60ರಷ್ಟು ನೀರಿನ saving ಆಗುತ್ತದೆ. ಸವಳು–ಜವಳಾಗುವುದಿಲ್ಲ. ನಿಗದಿತ ಸಮಯದಲ್ಲಿ ಬಿತ್ತನೆ ಮಾಡಬಹುದು. Cropping pattern maintain ಮಾಡಬಹುದು, yield ಹೆಚ್ಚಾಗುತ್ತದೆ. ಇವೆಲ್ಲವೂ ಕೂಡ trial ನಲ್ಲಿ ಗೊತ್ತಾಗುತ್ತದೆ. ಇದಕ್ಕೆ ಉತ್ತೇಜನ ಕೊಡುವ ದೃಷ್ಟಿಯಿಂದ ಉದಾ: NLBCಯಲ್ಲಿ ಅಂದಿನ ಕಾಮಗಾರಿ ಸರಿಯಾಗದ ಕಾರಣದಿಂದ ಕೊನೆ ಭಾಗದ ರೈತರಿಗೆ ಅನುಕೂಲವಾಗುತ್ತಿದೆ. ಅದು JBC, IBC ಇರಬಹುದು, MBC ಇರಬಹುದು ಮೂರು canal ಗಳು, NLBC ಸುಮಾರು 5 ಲಕ್ಷ ಎಕರೆ ಪ್ರದೇಶದ ವ್ಯಾಪ್ತಿಯಲ್ಲಿ ಇವು ಬರುತ್ತವೆ. ಆದರೆ, ಸಮರ್ಪಕವಾಗಿ ನೀರು ಸಿಗದ ಕಾರಣದಿಂದ ಇದನ್ನು re-modeling ಮಾಡುವುದಕ್ಕೆ ಎತ್ತಿಕೊಳ್ಳಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. Government of India ದವರು ಇದಕ್ಕೆ ಒಪ್ಪಿಕೊಂಡಿದ್ದಾರೆ. Water Mission ಎನ್ನುವ ಹೊಸ ಕಾರ್ಯಕ್ರಮವನ್ನು ಸರ್ಕಾರ ರೂಪಿಸಿದೆ. ಇದಕ್ಕೆ ಸ್ಫೂರ್ತಿ ನಮ್ಮ ಕರ್ನಾಟಕ ಎಂದು ಅತ್ಯಂತ ಹೆಮ್ಮೆಯಿಂದ ಹೇಳಬಯಸುತ್ತೇನೆ. ನಾವು ಮಾಡಿರುವ ಕೆಲಸ ಅಂದರೆ ಅದು micro irrigation sprinkler ಇರಬಹುದು, re-modeling ಮಾಡಿರುವಂಥ ತುಂಗಭದ್ರಾ, ಭದ್ರಾದಲ್ಲಿರಬಹುದು, ಬೆಳಗಾಂ ಜಿಲ್ಲೆಯ ದುದ್ದನಾಳದಲ್ಲಿ electro flow meter ಮಾಡಿ accountability ಏನು ತಂದಿದ್ದೇವೆ, concurrent audit ಎಂದು ತಂದಿದ್ದೇವೆ, ಅದೆಲ್ಲವನ್ನೂ ನೋಡಿ ಅದನ್ನು ingrate ಮಾಡಿ water conservation ಸಲುವಾಗಿ ಏನು ಮಾಡಿದ್ದಾರೆ, ಅದರಲ್ಲಿ ಸುಮಾರು 2600 ಕೋಟಿ ರೂ.ಗಳಿಗೆ ತಾತ್ವಿಕ ಒಪ್ಪಿಗೆ ಕೊಟ್ಟಿದ್ದಾರೆ. ERM ನಲ್ಲಿ ಸುಮಾರು 1800 ಕೋಟಿ ರೂ. ಕೊಟ್ಟಿದ್ದಾರೆ. ಒಟ್ಟು 4400 ಕೋಟಿ ರೂ.ಗಳನ್ನು 5 ಲಕ್ಷಕ್ಕಿಂತ ಹೆಚ್ಚು ಎಕರೆ stabilization ಗೆ ಕೊಟ್ಟಿದ್ದು,

ಅದರಲ್ಲಿ 1 ಲಕ್ಷದ 5 ಸಾವಿರ micro irrigation ಗೆ ಅನುಮತಿ ಕೊಟ್ಟಿದೆ. micro irrigation ಸಲುವಾಗಿ ಚೈನಾ ದೇಶದ ಜೊತೆಗೆ ನಮ್ಮ ಭಾರತ ದೇಶ ಒಪ್ಪಂದ ಮಾಡಿಕೊಂಡಿದೆ. ಅದರ ಪ್ರಯೋಗವನ್ನು ಮೊದಲನೆಯದಾಗಿ ಕರ್ನಾಟಕದಲ್ಲಿ ಮಾಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಆಧುನಿಕ ತಂತ್ರ ಜ್ಞಾನವನ್ನೂ ಕೂಡ ಬಳಕೆ ಮಾಡುತ್ತಿದ್ದೇವೆ. Lidar camera ಇರಬಹುದು, micro irrigation ಇರಬಹುದು, electro flow meter ಇರಬಹುದು, ಒಂದು ಕಡೆ ಆಧುನಿಕ ತಂತ್ರಜ್ಞಾನ ಇದೆ. ಅದಕ್ಕೆ ಬೇಕಾಗಿರುವಂಥ ಬದ್ಧತೆ ಮತ್ತು ಹಣಕಾಸು, ಅನುಷ್ಠಾನ ಇವೆಲ್ಲವನ್ನೂ ಮಾಡುತ್ತಿದ್ದೇವೆ. micro irrigation ಅನ್ನು ನಾವು ಇವತ್ತು ಯಶಸ್ವಿಯಾಗಿ ಮಾಡಿದರೆ ಇದೊಂದು ಹೊಸ ಕ್ರಾಂತಿ ನೀರಾವರಿ ಕ್ಷೇತ್ರದಲ್ಲಾಗುತ್ತದೆ. ಹೊಸ ಮನ್ವಂತರ ನೀರಾವರಿ ಯಲ್ಲಾಗುತ್ತದೆ. ಆ ಕೆಲಸಕ್ಕೆ ಭದ್ರವಾದ foundation ಅನ್ನು ನಾವು ಹಾಕಿದ್ದೇವೆ. ಮುಂದಿನ ದಿನಗಳಲ್ಲಿ micro irrigation will be a very very relevant method of irrigation ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದನ್ನು ಮಾಡುವಂಥ ಅವಕಾಶ ಇವತ್ತು ನಮಗೆ ಸಿಕ್ಕಿದ್ದು, ಅದನ್ನು ಯಶಸ್ವಿಯಾಗಿ ಮಾಡುವುದಕ್ಕೆ ನಾವೆಲ್ಲ ಪ್ರಯತ್ನ ಮಾಡಿದ್ದೇವೆ. ವಿಶೇಷವಾಗಿ, UKP Stage-3 ಯಲ್ಲಿ ನಮ್ಮ notification ಆದ ವರ್ಷದಲ್ಲಿ administrative sanction ಕೊಟ್ಟು, 2ನೇ ವರ್ಷದಲ್ಲಿ ಅನುಷ್ಠಾನ ಮಾಡಿದ್ದೇವೆ. ಇದೊಂದು ದಾಖಲೆ. ಏಕೆಂದರೆ, UKP Stage-2 ಗೆ Planning Commission approval ತೆಗೆದುಕೊಳ್ಳುವುದಕ್ಕೆ 14 ವರ್ಷ ಬೇಕಾಯಿತು. UKP Stage-1 ಅನ್ನು ಪೂರ್ತಿ ಮಾಡುವುದಕ್ಕೆ 40 ವರ್ಷಗಳು ಬೇಕಾಯಿತು. ಅದನ್ನೆಲ್ಲ ನೋಡಿದಾಗ ಅತಿ ವೇಗದಲ್ಲಿ UKP Stage-3 ಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಇಷ್ಟು ವೇಗದಲ್ಲಿ ಹಿಂದಿನ ಯಾವುದೇ ಸರ್ಕಾರಗಳು ಮಾಡಿರಲಿಲ್ಲ. ಅವರು ಪ್ರಸ್ತಾಪ ಮಾಡಿರುವ ಎಲ್ಲಾ ಪ್ರಶ್ನೆಗಳಿಗೆ ನಾವು ಸಮರ್ಪಕವಾಗಿ ಉತ್ತರ ಕೊಟ್ಟಿದ್ದೇವೆ. 3300 ಕೋಟಿ

ರೂ. ಇದೆ. Land acquisition ಅನ್ನು ಕೂಡಲೇ ಪ್ರಾರಂಭಿಸುತ್ತಿದೇವೆ. ಆ 100 ಟಿಎಂಸಿ ನೀರು ಸಂಪೂರ್ಣವಾಗಿ ಬಳಕೆಯಾಗುವುದಕ್ಕೆ ಎಲ್ಲ ಕ್ರಮವನ್ನು ತೆಗೆದುಕೊಂಡಿದ್ದೇವೆ. UKP Stage-3 ground ಮಾಡಿದ್ದೇವೆ. R & R ಗೆ ಹೊಸ ನೀತಿಯನ್ನು ತಂದು, ಮುಳುಗಡೆ ಸಂತ್ರಸ್ತರಿಗೆ ಮತ್ತು ರೈತರಿಗೆ ತೊಂದರೆಯಾಗದಂತೆ ಯೋಜನೆಯನ್ನು ರೂಪಿಸುತ್ತಿದ್ದೇವೆ. Government of India ದವರೇನು Parliament ಮುಂದೆ ಹೊಸ Land Acquisition Bill draft ಅನ್ನು ತರುತ್ತಿದ್ದಾರೆ, ಅದರಲ್ಲಿ R & R policy ಕೂಡ ಇದೆ. ಆ draft ಅನ್ನೂ ತರಿಸಿಕೊಂಡು ಅದರಲ್ಲಿರುವ ಅಂಶಗಳನ್ನೂ ಅಳವಡಿಸಿದೆ. ಏಕೆಂದರೆ, ನಾಳೆ Government of India ದವರು ನಮ್ಮ R & R policy ಗಿಂತ ವ್ಯತಿರಿಕ್ತವಾಗಿತ್ತೆಂದರೆ ತೊಂದರೆಯಾಗುತ್ತದೆ ಎಂದು ಮುಂಜಾಗ್ರತೆಯ ಕ್ರಮವನ್ನೂ ಕೂಡ ನಾವು ತೆಗೆದುಕೊಳ್ಳುತ್ತಿದ್ದೇವೆ. HUDCO, NABARD, ಇತರೆ ಸಂಸ್ಥೆಗಳ ಜೊತೆಗೆ bond ಮುಖಾಂತರ non-budget funding ಗೆ ನಾವು provision ಎಲ್ಲ ಮಾಡಿದ್ದೇವೆ. ಆ ಎಲ್ಲಾ ಹಿನ್ನೆಲೆಯಲ್ಲಿ ದೂರದೃಷ್ಟಿ ಇಟ್ಟುಕೊಂಡು ಯೋಜನಾಬದ್ಧವಾಗಿ ಕಾಮಗಾರಿಯನ್ನು ತೀವ್ರವಾಗಿ ಅನುಷ್ಠಾನ ಮಾಡುವಂಥ ಕೆಲಸವಿರುವು ದರಿಂದ ಈ ಭಾಗದ ಜನರಿಗೆ ನಾವು ಮಾಡಿರುವ ಕೆಲಸಗಳು ಮುಂದಿನ ದಿನಗಳಲ್ಲಿ ರೈತರಿಗೆ ನೀರು ಕೊಡುವ ಮುಖಾಂತರ ಸಂಪೂರ್ಣವಾಗಿ ನ್ಯಾಯವನ್ನು ಒದಗಿಸುತ್ತೇವೆ ಎನ್ನುವ ಮಾತನ್ನು ತಮ್ಮ ಮುಖಾಂತರ ಈ ಭಾಗದ ಜನರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ (ಜಮಖಂಡಿ) : ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದೆರಡು ಅಂಶಗಳನ್ನು ಸನ್ಮಾನ್ಯ ನೀರಾವರಿ ಮಂತ್ರಿ ಗಳಿಂದ ಸ್ಪಷ್ಟೀಕರಣ ಕೇಳುತ್ತೇನೆ. ಜಮಖಂಡಿ ವಿಧಾನಸಭಾ ಕ್ಷೇತ್ರದ ಹಳ್ಯಾಳ್ ಮೂಲಕ ಅಥಣಿ ತಾಲ್ಲೂಕು ಮೂಲಕ ಸಾವಳಗಿ, ಚಿಮ್ಮಲಗಿ Lift

Irrigation ಯೋಜನೆ ಜಾರಿಯಾಗಿ ಲೋಕಾರ್ಪಣೆಯಾಗಿದೆ. 20,000 ಎಕರೆಗೆ ನೀರು ಬರತಕ್ಕಂಥ ವ್ಯವಸ್ಥೆಯಾಗಿದೆ. ಅಲ್ಲಿ ಇನ್ನೂ ಸಣ್ಣ ಪುಟ್ಟ ಕೆಲಸಗಳು ಉಳಿದಿದ್ದರು ಮೂರು pumpsetಗಳ ಖರೀದಿಯಾಗಬೇಕಾಗಿದೆ. FIC ಕೆಲಸಕ್ಕೆ ಸಂಬಂಧಿಸಿದಂತೆ ಇನ್ನೂವರೆಗೆ tendering ಪ್ರಕ್ರಿಯೆಯಾಗಿಲ್ಲ. ಉಪ ಕಾಲುವೆಗಳ ನಿರ್ಮಾಣ ಇತ್ಯಾದಿ ಅಲ್ಪಸ್ವಲ್ಪ ಕೆಲಸಗಳು ಉಳಿದಿದ್ದು, ಅದನ್ನು ಆದಷ್ಟು ಬೇಗ ಜಾರಿಗೆ ತಂದು ಕೆಲಸಗಳನ್ನು ಬರುವಂಥ ಬೇಸಿಗೆಯಲ್ಲಿ ಮಾಡಿಬಿಟ್ಟರೆ ಮುಂದಿನ ಹಂಗಾಮಿ ಜೂನ್ ತಿಂಗಳ ನಂತರ ಹೊಳೆಗೆ ನೀರು ಬಂದಾಗ ಯಶಸ್ವಿಯಾಗಿ ಆ ಭಾಗದ ರೈತರಿಗೆ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಅದನ್ನು ತಕ್ಷಣ ಕೈಗೆತ್ತಿಕೊಳ್ಳಬೇಕು ಎನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಮಾಡುತ್ತೇನೆ. ಇದರ ಜೊತೆಗೆ ಮಾನ್ಯ ಸಿದ್ದು ಸವದಿಯವರು ಪ್ರಸ್ತಾಪ ಮಾಡಿದಂತೆ ನಾವು ಚಿಕ್ಕಪಡಸಲಗಿ ಬ್ಯಾರೇಜ್ ಮತ್ತು ಗಲಗಲಿ ಬ್ಯಾರೇಜ್ ತುಂಬಬೇಕು, ಅದಕ್ಕೆ 1.5 ಟಿ.ಎಂ.ಸಿ. ನೀರು reservation ಆಗಬೇಕು, allocation ಆಗಬೇಕು. ಅದನ್ನು ಎತ್ತಿ ಹಾಕುವಂಥ ಖರ್ಚನ್ನೂ ಕೂಡ ಸರ್ಕಾರ ಕೊಡಬೇಕು ಎನ್ನುವುದರ ಬಗ್ಗೆ ಕೂಡ ಸನ್ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು. ಆ ಭಾಗದಲ್ಲಿ, ಹಿಪ್ಪರಗಿಯಿಂದ ಗಲಗಲಿವರೆಗೆ ಆಗುವಂಥ ಭಯಾನಕ ಬೇಸಿಗೆಯಲ್ಲಿ ಕುಡಿಯಲೂ ನೀರು ಇಲ್ಲದಂತಾ ಗುತ್ತದೆ. ಆ ಹಿನ್ನೆಲೆಯಲ್ಲಿ ಗಲಗಲಿ ಬ್ಯಾರೇಜ್ ಅನ್ನು ಎರಡು ಮೀಟರ್ ಎತ್ತರಿಸಬೇಕೆಂಬ ಒಂದು proposal ಸರ್ಕಾರದ ಮುಂದಿದೆ. ಆ ಎರಡು ಮೀಟರ್ ಎತ್ತರಕ್ಕೆ 4 ಕೋಟಿ 25 ಲಕ್ಷ ರೂ. ಮಾತ್ರ ಮಂಜೂರಾಗಿದ್ದು, ಆ ಎರಡು ಮೀಟರ್ ಗಲಗಲಿ ಡ್ಯಾಂ ಎತ್ತರಿಸಿದರೆ ಅರ್ಧ ಟಿ.ಎಂ.ಸಿ.ಯಷ್ಟು ಕುಡಿಯುವ ನೀರು ಸಿಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ : ಸ್ಪಷ್ಟೀಕರಣ ಬೇಕೋ ಅಥವಾ ನಿಮ್ಮ ಕೆಲಸವಾಗಬೇಕೋ?

ಶ್ರೀ ಶ್ರೀಕಾಂತ್ ಎಸ್.ಕುಲಕರ್ಣಿ : ಸ್ಪಷ್ಟೀಕರಣದ ಬೇಕು. ಅದಕ್ಕಾಗಿಯೇ ಅದನ್ನು . . .

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ವೈಜ್ಞಾನಿಕವಾಗಿ ನೋಡಿದರೆ ಅವರು ಇವತ್ತು ಕೇಳುತ್ತಿರುವುದು ಏನಿದೆ. ಅದಕ್ಕೆ ನಾನು ಸ್ಪಷ್ಟೀಕರಣ ಬೇಕಾದರೆ ಕೊಡುತ್ತೇನೆ. ಸ್ಪಷ್ಟೀಕರಣವೇನಿದೆ ಎಂದರೆ ಚಿಕ್ಕಪಡಸಲಗಿ ಡ್ಯಾಂ ಏನಿದೆ, ಅದರ ಮುಂದಿನ down stream ನಲ್ಲಿರುವ ನೀರನ್ನು pump ಮಾಡಿ ಎತ್ತಿ ಮತ್ತೆ ಡ್ಯಾಂಗೆ ಹಾಕಿಕೊಳ್ಳಬೇಕು ಎಂದು ಹೇಳುತ್ತಾರೆ. ಇದನ್ನು ಎಂದೂ ಕೂಡ ಎಲ್ಲಿಯೂ ಕೂಡ ನಾವು ಕೇಳಿಲ್ಲ. ಇದು ಅವರಿಗೆ ಬೇಕಾಗಿರುವಂಥದ್ದು. ಇದರ ಬಗ್ಗೆ ತಾಂತ್ರಿಕವಾಗಿ ನಾನು ಪರಿಶೀಲನೆ ಮಾಡುತ್ತಿದ್ದೇನೆ. ಇದು ಸ್ಪಷ್ಟೀಕರಣ.

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ : ಗಲಗಲಿ ಡ್ಯಾಂ ಎರಡು ಮೀಟರ್ ಎತ್ತರಿಸಿದರೆ ಅನುಕೂಲವಾಗುತ್ತದೆ. ಈ ವರ್ಷ ಏನೂ ಮಾಡುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಬೇಸಿಗೆಯಲ್ಲಿ ಕುಡಿಯುವ ನೀರು ಕೊಡುವುದಕ್ಕೆ ಆಗುತ್ತದೆ. ಹೀಗಾಗಿ ನೀವು 4–5 ಕೋಟಿ ರೂಪಾಯಿ ಮಹಾರಾಷ್ಟ್ರಕ್ಕೆ ತುಂಬಿ ಬರದೇ ಇರುವಂಥ ನೀರಿನ ಬಗ್ಗೆ ನಾವು ಒದ್ದಾಡದೇ, ನಮ್ಮ ಕೈಯಲ್ಲಿ ಇರುವಂಥ ಈ ಗಲಗಲಿ ಡ್ಯಾಂ ಅನ್ನು ಎರಡು ಮೀಟರ್ ತಾವು ಎತ್ತಿರಿಸಿಬಿಟ್ಟರೆ ಜನರಿಗೆ ಅನುಕೂಲವಾಗುತ್ತದೆ. ದಯವಿಟ್ಟು ತಾವು ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ : ಪರಿಶೀಲನೆ ಮಾಡುತ್ತೇವೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : Upper Bhadra Project ಯಾವ ಹಂತದಲ್ಲಿದೆ? ಅಲ್ಲಿ ತ್ವರಿತ ಗತಿಯಲ್ಲಿ ಕೆಲಸ ಕೂಡ ಆಗಬೇಕಾಗಿದೆ. ಕೃಷ್ಣಾ ಬೇಸಿನ್‌ನಲ್ಲಿ ನಮ್ಮ ಕ್ಷೇತ್ರದಲ್ಲೂ ಕೂಡ ಯಾವುದೇ ಒಂದು ಬ್ಯಾರೇಜ್‌ಗಳೂ ಇಲ್ಲದೇ water allocationಗೆ ಕೂಡ ಸಮಸ್ಯೆ ಯಾಗುತ್ತಿದೆ. ದಯಮಾಡಿ ಅದನ್ನೂ ಕೂಡ ಬಗೆಹರಿಸಬೇಕು. ಕನ್ನಡ ಗಂಗಾ ಎಂದು ಯೋಜನೆ ಇದೆ ಬಿಜಾಪುರ ಜಿಲ್ಲೆ ಮತ್ತು ಚಿತ್ರದುರ್ಗ ಜಿಲ್ಲೆ ತೀವ್ರ

ಬರಗಾಲದಿಂದ ಕೂಡಿದಂಥ ಪ್ರದೇಶ. ಅಲ್ಲೂ ಕೂಡ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ನೀಡಲಿಕ್ಕೆ ಯೋಜನೆಯನ್ನು ತ್ವರಿತಗತಿಯಲ್ಲಿ ಕೈಗೆತ್ತಿ ಕೊಳ್ಳಬೇಕು. ನಮ್ಮ ಜೀವನಾಡಿಯಾದ Upper Bhadra Project ಏನಿದೆ, ಅದನ್ನು ಕೂಡಲೇ ಕೈಗೆತ್ತಿಕೊಂಡು ಮುಗಿಸುವಂಥ ಕೆಲಸವನ್ನು ಮಾಡಬೇಕು. ಅದರ ಬಗ್ಗೆಯೂ ಕೂಡ ಮಾನ್ಯ ಮಂತ್ರಿಗಳು ಬೆಳಕನ್ನು ಚೆಲ್ಲಿ ನಮ್ಮ ಕ್ಷೇತ್ರಗಳಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮನವಿ ಯನ್ನು ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಸಭಾಧ್ಯಕ್ಷರೆ, ಮಧ್ಯ ಕರ್ನಾಟಕ ಅದರಲ್ಲೂ ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಗೆ ಒಂದು ಕಾಲದಲ್ಲಿ ಮಾರಮ್ಮನ ಕಣಿವೆಯಿಂದ ಮಹಾರಾಜರ ಕಾಲದಿಂದ ಇರುವ ಕಾಲುವೆ ಯಿಂದ ನೀರು ಒದಗಿಸುತ್ತಿದೆವು. ಹಲವಾರು ವರ್ಷಗಳಿಂದ ಅಲ್ಲಿ ನೀರು ಸಂಗ್ರಹವಾಗುತ್ತಿಲ್ಲ. ಆದ್ದರಿಂದ ಈಗ Upper Bhadra Project ಏನು ಮಾಡಿದ್ದೇವೆ. ಅದರ ಕಾಮಗಾರಿ ತೀವ್ರವಾಗಿ ನಡೆಯುತ್ತಿದೆ. ಮೊದಲನೇ pump ಆಗಿ ಇವತ್ತು ಎರಡನೆಯದೂ ಕೂಡ ಸಿದ್ಧವಾಗಿದೆ. pumpಗಳ ಅಳವಡಿಕೆ ಕೂಡ ಆಗಿದೆ. ಅಲ್ಲಿ ರೈತರು ಕೆಲವು ತೊಂದರೆ ಮಾಡಿದ್ದರಿಂದ tunnel work ಸ್ಥಗಿತವಾಗಿತ್ತು. ಈಗ ಅವರ ಜೊತೆ ಮಾತನಾಡಿ, ಒಪ್ಪಿಸಿ, ಕಾಮಗಾರಿ ಕೂಡ ಈಗ ಪ್ರಾರಂಭವಾಗಿದೆ. ಅದರ ಜೊತೆಗೆ ಚಿತ್ರದುರ್ಗ ಬ್ರಾಂಚ್ ಕೆನಾಲ್, ತುಮಕೂರು ಬ್ರಾಂಚ್ ಕೆನಾಲ್ ಮತ್ತು ಅವರ ಹೊಸದುರ್ಗಕ್ಕೆ ಏನು ನೀರು ಬೇಕಾಗಿದೆ, allocationನಲ್ಲಿ ಇನ್ನಷ್ಟು ಹೆಚ್ಚಳ ಮಾಡಬೇಕೆಂಬ ದೃಷ್ಟಿಯಿಂದ ಆ ಭಾಗದಲ್ಲಿ ನೀರಿನ ಅಭಾವ ಬಹಳಷ್ಟಿದೆ. ಕುಡಿಯುವ ನೀರಿಗೂ ಸಹ ತೊಂದರೆ ಇದೆ. ಅದಕ್ಕಾಗಿ Revised Master Plan ನಲ್ಲೂ ಕೂಡ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಈಗ ಏನು allocation 10 ಟಿ.ಎಂ.ಸಿ. Scheme-A ನಲ್ಲಿ ಇದೆ ಮತ್ತು 13 ಟಿ.ಎಂ.ಸಿ. savingನಲ್ಲಿದೆ, ಅದಕ್ಕೆ ಇನ್ನಷ್ಟು ಅಧಿಕವಾಗಿ ನೀರನ್ನು allocation ಮಾಡುವುದಕ್ಕೆ ಈಗಾಗಲೇ Revised Master Plan ನಲ್ಲಿ ಅಳವಡಿಸಿ

ಕೊಳ್ಳುತ್ತಿದ್ದೇವೆ. ಅದು ಬಂದ ತಕ್ಷಣವೇ ತುಮಕೂರು ಬ್ರಾಂಚ್ ಕೆನಾಲ್, ಚಿತ್ರದುರ್ಗ ಬ್ರಾಂಚ್ ಕೆನಾಲ್ ಅದರ ಮುಖಾಂತರ ಹೊಸದುರ್ಗ, ಹಿರಿಯೂರು ಆ ಭಾಗದ ನೀರಿಗೆ ತ್ವರಿಕ ಕಾಮಗಾರಿಯನ್ನು ಆದಷ್ಟು ಬೇಗನೆ ನಾವು ಪ್ರಾರಂಭ ಮಾಡುತ್ತೇವೆ ಮತ್ತು Package 1, Package 2 ಕೆಲಸ ಅತಿ ಶೀಘ್ರವಾಗಿ ನಡೆಯುತ್ತಿದೆ. Package 3ನಲ್ಲಿ ರೈತರು ವಿರೋಧ ಮಾಡಿದ್ದರಿಂದ ಅವರೆಲ್ಲರೊಂದಿಗೆ ಮಾತನಾಡಿ ಅವರಿಗೆ ಬೇಕಾಗಿರುವಂಥ ಯೋಜನೆಗಳನ್ನು ಅಲ್ಲಿ ಮಾಡಿ ಒಪ್ಪಿಸಿದ್ದೇವೆ. ಆ ಕಾಮಗಾರಿ ಕೂಡ ಪ್ರಾರಂಭವಾದರೆ ಖಂಡಿತವಾಗಿಯೂ ಮುಂದಿನ ವರ್ಷ ನಾವು Upper Bhadra ದಿಂದ ಚಿತ್ರದುರ್ಗ ಜಿಲ್ಲೆಗೆ ನೀರನ್ನು ಹರಿಸುವುದಕ್ಕೆ ಸಾಧ್ಯ. ಆ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಕಟಕಧೊಂಡ ವಿಠ್ಠಲ ಧೋಂಡಿಬಾ (ನಾಗಠಾಣ) : ಸನ್ಮಾನ್ಯ ಅಧ್ಯಕ್ಷರೆ, ಬತ್ತಿಹೋದಂಥ ಭೀಮಾ ನದಿಯ ಬಗ್ಗೆ ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೆ. ಇವತ್ತು ಭೀಮಾ ನದಿ ಸಂಪೂರ್ಣವಾಗಿ ಬತ್ತಿಹೋಗಿದೆ. ನಾವು ನ್ಯಾಯಯುತವಾಗಿ 95 ಟಿ.ಎಂ.ಸಿ.ನೀರನ್ನು ಬಳಸಿಕೊಳ್ಳಬಹುದಾಗಿದೆ. ಇವತ್ತು ಮಹಾರಾಷ್ಟ್ರ 135 ಟಿ.ಎಂ.ಸಿ. ನೀರು ಬಳಸಿಕೊಂಡು ಒಂದೇ ಒಂದು ಹನಿ ನೀರನ್ನೂ ನಮ್ಮ ಭೀಮಾ ನದಿಗೆ ಬಿಡುತ್ತಿಲ್ಲ. ಸುತ್ತಮುತ್ತಲಿನ ಜಲಚರಗಳು, ಅಚ್ಚುಕಟ್ಟು ಪ್ರದೇಶದಲ್ಲಿ ಜನರು ನೀರಿನಲ್ಲದೇ ಹಾಹಾಕಾರ ಮಾಡುತ್ತಿದ್ದಾರೆ. ನಮಗೆ ನ್ಯಾಯಯುತವಾಗಿ ಬರಬೇಕಾದ ನಮ್ಮ ಹಕ್ಕನ್ನು ತಾವು ರಕ್ಷಿಸಬೇಕು. ಈಗಾಗಲೇ ಆ ಭಾಗದ ಭೀಮಾ ಹಿತರಕ್ಷಣಾ ಸಮಿತಿಯವರು PIL ಹಾಕಿದ್ದಾರೆ. ಅದನ್ನು ಸರ್ಕಾರವೇ ನಿರ್ವಹಿಸಬೇಕು. ನಿಮಗೆ CWCರವರು Permission ಕೊಡುವುದಿಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅದಕ್ಕೆ ಸರ್ಕಾರ ವಹಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಸಭಾಧ್ಯಕ್ಷರೆ, ಬಚಾವತ್ ಅವಾರ್ಡ್‌ನಲ್ಲಿ ಭೀಮಾ ನದಿಗೆ ನಮ್ಮ ರಾಜ್ಯದ ಪಾಲು 15 ಟಿ.ಎಂ.ಸಿ. ನೀರು ಆ ನೀರು ಮಳೆಗಾಲದಲ್ಲಿ ಬರುವುದರಿಂದ ನಾವು ಈಗಾಗಲೇ ಬ್ಯಾರೇಜ್‌ನಲ್ಲಿ

ಏನು store ಮಾಡಬೇಕು ಆ ಕೆಲಸವನ್ನು ನಮ್ಮ ಬ್ಯಾರೇಜ್‌ಗಳ ಮುಖಾಂತರ ಆ scheme ಅನ್ನು ಮಾಡಿದ್ದೇವೆ. ಆದರೆ ಇಲ್ಲಿ ಬಂದಿರುವಂಥ ಸಮಸ್ಯೆ ಬೇಸಿಗೆ ಕಾಲದಲ್ಲಿ ನೀರಿನ ಕೊರತೆಯಾಗುತ್ತದೆ. ವಿಶೇಷವಾಗಿ ಮಾರ್ಚ್, ಏಪ್ರಿಲ್ ಮತ್ತು ಮೇ ನಲ್ಲಿ ಬಹಳಷ್ಟು ಕೊರತೆಯಾಗುತ್ತದೆ. ಸುಮಾರು 100 ಕಿ.ಮೀ. ನಮ್ಮ ಉಜನಿ ಡ್ಯಾಂ ಕೆಳಗಡೆ ನಮ್ಮ ಕರ್ನಾಟಕ ಬಾರ್ಡರ್‌ನಿಂದ ಹಿಡಿದು 100 ಕಿ.ಮೀ. ಅಕ್ಕಪಕ್ಕ ಆ ಕಡೆ ಮಹಾರಾಷ್ಟ್ರದ ಹಳ್ಳಿಗಳೂ ಇವೆ ಈ ಕಡೆ ಕರ್ನಾಟಕದ ಹಳ್ಳಿಗಳೂ ಇವೆ, ಅಲ್ಲಿ ಸಂಪೂರ್ಣವಾಗಿ ನೀರು ಬತ್ತಿ ಹೋಗಿ ಅಲ್ಲಿ ಕುಡಿಯುವ ನೀರಿನ ತೊಂದರೆಯಾಗುತ್ತಿದೆ. ನಮ್ಮ ರೈತರು ಸುಪ್ರೀಂ ಕೋರ್ಟ್‌ವರೆಗೂ ಹೋಗಿದ್ದರು. ಅಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಒಂದು ಆದೇಶವನ್ನು ಮಾಡಿದ್ದಾರೆ. ಈ ಭೀಮಾ ನದಿಯಲ್ಲಿ ಬೇಸಿಗೆ ಕಾಲದಲ್ಲಿ minimum flowಅನ್ನು maintain ಮಾಡಿ river mountವರೆಗೂ ಇರಬೇಕು ಎಂದರೆ ಸಮುದ್ರ ಸೇರುವವರೆಗೂ ಆ ನದಿಯನ್ನು ಬೇಸಿಗೆ ಕಾಲದಲ್ಲೂ ಜೀವಂತವಾಗಿ ಇಡಬೇಕು ಎಂಬ ಆದೇಶ ಇದೆ. ಆದಾಗ್ಯೂ ಕೂಡ ಮಹಾರಾಷ್ಟ್ರದವರು ಆ ನೀರನ್ನು ಬಿಡದೆ ಬೇಸಿಗೆ ಕಾಲದಲ್ಲಿ ನಮಗೆ ತೊಂದರೆಯಾಗುತ್ತಿದೆ. ಈಗ ನಾವು ಅದನ್ನು ನಮ್ಮ Tribunal ಮುಂದೆ Review Petition ನಲ್ಲಿ ತೆಗೆದುಕೊಂಡಿದ್ದೇವೆ. ಆ Review Petition ನಲ್ಲಿ ನಮ್ಮ ಪರವಾಗಿ ಸುಪ್ರೀಂ ಕೋರ್ಟ್‌ನ ಆದೇಶದನ್ವಯ ಆ ನೀರನ್ನು ಅವರು ಬಿಡುವಂಥ ಆಜ್ಞೆ ಬಂದರೆ monitoring board ಬರುತ್ತದೆ, ಆಗ ಖಂಡಿತವಾಗಿಯೂ ನೀರನ್ನು ಹರಿಸುವುದಕ್ಕೆ ಸಾಧ್ಯವಾಗುತ್ತದೆ. ಆ ಕ್ರಮವನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಭೀಮಾ ನದಿಗೆ ನಾವು ಮುಳವಾಡ್ ಮತ್ತು ಚಿಮ್ಮಲಗಿ ಟೀಲಾಪುರ್ ದೋಣಿ ನದಿ ಪುನರುಜ್ಜೀವಿಸುವ ಕೆಲಸ ಮಾಡುತ್ತಿದ್ದೇವೆ, rejuvenation ಮಾಡುತ್ತಿದ್ದೇವೆ. ಆ ನೀರನ್ನೂ ಕೂಡ ಭೀಮಾ ನದಿಗೆ ಬಿಡುವುದಕ್ಕೆ ಈಗಾಗಲೇ ನಾನು ಸರ್ವೆ ಮಾಡುವುದಕ್ಕೆ ಆಜ್ಞೆಯನ್ನು ಮಾಡಿದ್ದೇನೆ. ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಡಾ. ಸಾರ್ವಭೌಮ ಸಾತಗೌಡ ಬಗಲಿ (ಇಂಡಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಸ್ತಾಪ ಮಾಡಿದಂತೆ ಈ ಗುತ್ತಿ ಬಸವಣ್ಣ ಏತ ನೀರಾವರಿ ಕಾಲುವೆ ರೇವತ್‌ಗಾವ್ ಹತ್ತಿರ ಕೊನೆಗೊಳ್ಳಬೇಕಾಗಿತ್ತು. ಅದು ಕೇವಲ ಈಗ ಚಿಮ್ಮಲಗಿಯ ವರೆಗೂ ಆಗಿದೆ. ಈ ಬಗ್ಗೆ ಈಗಾಗಲೇ ಮಾನ್ಯ ಸಹೋದರ ಶಾಸಕರಾದ ಧೋಂಡಿಬಾರವರು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಯಾವ ರೀತಿಯ ಸಹಾಯ ಮಾಡಬಹುದು ಎಂಬ ಬಗ್ಗೆ ನಾನು ಮಾನ್ಯ ಮಂತ್ರಿಗಳಿಂದ ನಾನು ತಿಳಿಯಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಹೇಳಿದಂತೆ ನಾರಾಯಣಪುರ ಎಡದಂಡೆ ಕಾಲುವೆಯ ಮುಖಾಂತರ ಇಂಡಿ ಬ್ರಾಂಚ್ ಕೆನಾಲ್‌ಗೆ ನೀರನ್ನು ಒದಗಿಸುತ್ತಿದ್ದೆವು. ನಾವು ಸಂಪೂರ್ಣವಾಗಿ remodelling ಮಾಡಿದರೆ ಸುಮಾರು 25% water saving ಆಗುತ್ತದೆ. ಆ water saving ಆಗುವಂಥ ಎಲ್ಲಾ ಪ್ರಮಾಣವನ್ನು ನಮ್ಮ ಕಾಮಗಾರಿಗಳೇ ನೇನಿವೆ, ಅವೆಲ್ಲವನ್ನೂ ಲೆಕ್ಕಾಚಾರ ಹಾಕಿ ಎಷ್ಟು water saving ಆಗುತ್ತದೆ. ಅದರಲ್ಲಿ ಹೆಚ್ಚಿನ ಆದ್ಯತೆಯನ್ನು ಇಂಡಿ ಬ್ರಾಂಚ್ ಕೆನಾಲ್‌ಗೆ ಕೊಟ್ಟು ಎಷ್ಟನ್ನು ವಿಸ್ತರಣೆ ಮಾಡಬಹುದು, ಏನು ಮಾಡಬಹುದು ಎನ್ನುವುದನ್ನು ನಾವು ತೀರ್ಮಾನ ಮಾಡುತ್ತೇವೆ. ಆ ಸಂದರ್ಭದಲ್ಲಿ ಬಹುತೇಕವಾಗಿ ನಮ್ಮ ಕಟಕ ಧೊಂಡಾರವರ ಹಾಗೂ ಬಗಲಿಯವರ ಆಶಯ ಈಡೇರುತ್ತದೆ ಎಂಬ ವಿಶ್ವಾಸ ನನಗಿದೆ.

ಶ್ರೀ ವೀರಭದ್ರಪ್ಪ ಹಾಲಹರವಿ : ಮಾನ್ಯ ಅಧ್ಯಕ್ಷರೆ, ನಾನೊಂದು ವಿಷಯ ಪ್ರಸ್ತಾಪಿಸಬೇಕಾಗಿದೆ. ಈಗಾಗಲೇ ಮೂರು ದಿವಸಗಳಾದವು.

ಅಧ್ಯಕ್ಷರು : ಆಮೇಲೆ ಪ್ರಸ್ತಾಪಿಸಿ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಹೆಚ್.ಡಿ. ರೇವಣ್ಣ ಹಾಗೂ ಮಾನ್ಯ ಸಿದ್ದರಾಮಯ್ಯನವರು ಇಲ್ಲ.

ಅಧ್ಯಕ್ಷರು :– ಪೂರಕ ಕಾರ್ಯಕಲಾಪಗಳ ಪಟ್ಟಿಯಲ್ಲಿ ವಿಧೇಯಕ ಗಳನ್ನು ಮಂಡಿಸುವುದು.